
ಅನುಷ್ಠಾನ - 2

# ಅಗ್ನಿವೇಶ


ಚೈತ್ರ : ವೈಶಾಖ : ಜೇಷ್ಠ ಮಾಸ
ಶ್ರೀ ವಿರೋಧಿನಾಮ ಸಂವತ್ಸರ
ಶಾಲಿವಾಹನ ಶಕೆ - 1931
ಏಪ್ರಿಲ್, ಮೇ, ಜೂನ್ - 2009
ಸಂಪುಟ - 1, ಸಂಚಿಕೆ 1
ಬೆಲೆ - ರೂ. 15







## ಸ್ತ್ರೀಯರಲ್ಲಿ ಮೂತ್ರದ ತೊಂದರೆಗಳು

## ಕಿಡ್ನಿ ಫೇಲ್ಯೂರ್ - ನಿರ್ವಹಣೆ ಮತ್ತು ಚಿಕಿತ್ಸೆ

## ಆಯುರ್ವೇದದಲ್ಲಿ ನಿರ್ನಾಳ ಗ್ರಂಥಿ ಹಾಗೂ ಅದರ ಚಿಕಿತ್ಸೆ


Ayushakti health care products are made from Standardized Concentrated extracts & they are Heavy metal free.
Ayushakti™
Announcing
"PAINMUKTI M.J. TABLET"
For Proven, Deeper & Safer Healing for
Joints & Muscles Pain, Stiffness & Swelling.
PAINMUKTI M.J.
PAINMUKTI Cream
Dr. Pankaj Naram's formula
Good relief from Muscular Pain, Sprain,
INDICATIONS
Morning stiffness, sprain, joints pain,
Back & neck pain, headache, muscular pain,
Body ache, arthritic pain and frozen shoulder,
tennis elbow and muscular spasm.
K-TONE
PROVEN, SAFE & DEEPER HEALING FOR
KIDNEY & URINARY INDICATIONS LIKE
UTI, RENAL CALCULI, INFLAMMATIONS,
BURNING & PAIN.
Herbal formula : k – tone 2 BD.
Urinary & Kidney Stones
Urological disorders (dysuria,
urinary retention, urolithiasis,
Polyuria, Nephritis,Odema).
Renal dysfunctions
Tubular necrosis
Urinary tract infections
Burning Micturation.
K-TONE
FOR NEW PRODUCTS & MORE INFORMATION CONTACT - 9945134191
KAPHANO
COUGH SYRUP
Keep drowsiness away, get surer and safer cure
from even the most difficult of coughs.
Kaphano's natural ingrediants work deep,
liquify dry cough, sooth throat
infections and even bronical cough
feel rejunated instantly wtih Kaphano.
KAPHANO
INDICATIONS :
Dry and wet cough,
Allergic cough and bronchitis,
Cold, Mild breathlessness,
Throat infection,
Nose and chest congestions and
Respiratory dysfunctions and
Smoker's syndrome.
Ayushakti Health Care Pvt. Ltd.
Tel : 022-67376718/19
Email : painmukti@ayushakti.com wwwayushakti.com
KAPHANO is proven effective in thousands of patients
in about 80 clinic around the world past 20 years

# ಅಗ್ನಿವೇಶ

ಪ್ರಧಾನ ಸಂಪಾದಕರು

**ವೈದ್ಯ ವಾಸುಕಿಶಯನ ಜಿ.ವಿ.**

94488 91405

ಉಪ ಸಂಪಾದಕರು

**ವೈದ್ಯ ರಾಘವೇಂದ್ರ ಎಸ್.**

94481 82037

ಸಹ ಸಂಪಾದಕರು

**ವೈದ್ಯ ಪ್ರಕಾಶ್. ಎಂ.ಬಿ.**

94498 50502

ಸಂಪಾದಕ ಮಂಡಳಿ

**ವೈದ್ಯೆ ಶ್ರುತಿ 98869 03290**
**ವೈದ್ಯ ವೆಂಕಟೇಶ್.ಹೆಚ್.ಎಸ್. 94480 91313**
**ವೈದ್ಯ ಜೀವೇಶ್ 94486 88756**

ಸಲಹಾ ಮಂಡಳಿ

**ವೈದ್ಯ ಅನಂತರಾಮನ್.ಎಸ್. 99456 05337**
**ವೈದ್ಯ ಪದ್ಮನಾಭರಾವ್.ವಿ.ಆರ್. 98863 82141**
**ವೈದ್ಯೆ ಶುಭಂಕರಿ.ಪಿ.ರಾವ್ 080-26578620**
**ವೈದ್ಯೆ ವಸುಂಧರಾ ಭೂಪತಿ 94488 52420**

ಪ್ರಸಾರಾಂಗ ವ್ಯವಸ್ಥಾಪಕರು

**ಶ್ರೀ ನಾರಾಯಣ್ – 94482 84604**

**ಅನುಷ್ಠಾನ-2**

ಆಯುರ್ವೇದ ವೈದ್ಯಕೀಯ ತ್ರೈಮಾಸಿಕ
ಶಾಲೀವಾಹನ 1931 ವಿರೋಧಿ ನಾಮ ಸಂವತ್ಸರ
ಚೈತ್ರ, ವೈಶಾಖ, ಜ್ಯೇಷ್ಠ
ಏಪ್ರಿಲ್, ಮೇ, ಜೂನ್ 2009

**ಪ್ರಕಾಶಕರು**

**ಸಾಹಿತ್ಯ ಸಿಂಧು ಪ್ರಕಾಶನ**

ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು-560 019.
E-mail –vlmashayan@yahoo.com
agniveshaayurveda@yahoo.in


## ಅಗ್ನಿವೇಶನ



## ಅಂತರಂಗ....


- ಅಗ್ನಿವೇಶ ಉವಾಚ 2
- Endocrinology In Ayurveda 4
- Untreated UTI affect fertility 12
- ಪಂಚ ಕರ್ಮ ಚಿಕಿತ್ಸೆ 14
- Punch ಕರ್ಮ 19
- ಸ್ತ್ರೀಯರಲ್ಲಿ ಮೂತ್ರದ ತೊಂದರೆಗಳು 20
- ಶಿಲಾಜಿತು 22
- ಹಳ್ಳಿ ವೈದ್ಯನ – ಅಮೋಘ ಸಾಧನೆ 24
- ಸರಳ ವ್ಯಾಧಿಗಳಿಗೆ ಮನೆಯಲ್ಲೆ ಸುಲಭ ಚಿಕಿತ್ಸೆಗಳು 26
- ಅಶ್ಮರೀ – ಯಶಸ್ವೀ ಆಯುರ್ವೇದ ಚಿಕಿತ್ಸೆ 28
- ಮೂತ್ರವಹ ಸ್ರೋತೋ ರೋಗಗಳಲ್ಲಿ ಪಥ್ಯ-ಅಪಥ್ಯ 30
- ಕಿಡ್ನಿ ಫೇಲ್ಯೂರ್ – ನಿರ್ವಹಣೆ; ಚಿಕಿತ್ಸೆ 31
- The Six Stages of Disease 33

## ಸಂಪಾದಕೀಯ....

# ಅಗ್ನಿವೇಶ ಉವಾಚ

## Genaral practitioner ? Specialist ? SUPER SPECIALIST?

ವೈದ್ಯಕೀಯ ವೃತ್ತಿಯಲ್ಲಿ ಮೇಲಿನ ಪ್ರಭೇದಗಳು ಇರುವುದು ಸರ್ವವಿದಿತ. ವೈದ್ಯ ವೃತ್ತಿಯಲ್ಲಿ ಇರುವವರಿಗೆ ಈ ಪ್ರಭೇದಗಳ ವಿವರವಾದ ವಿವರಣೆ ಅನಗತ್ಯ.

ಆಯುರ್ವೇದ ವಿದ್ಯಾರ್ಥಿಗಳಲ್ಲಿ, ಅದೇತಾನೆ ಪದವಿ ಪಡೆದ ವೈದ್ಯರಲ್ಲಿ ಈ ಬಗ್ಗೆ ಸಾಕಷ್ಟು ಗೊಂದಲವಿರುವುದು ಅನೇಕಬಾರಿ ನನ್ನ ಅನುಭವಕ್ಕೆ ಬಂದಿತು. ಅವರೆಲ್ಲರ ಯೋಚನಾ ಶೈಲಿ, ಮಾನಸಿಕ ತುಮುಲ ಬಹುತೇಕ ಒಂದೇ ರೀತಿಯಲ್ಲಿ ಹೊರಹೊಮ್ಮುತ್ತಿತ್ತು. ಇದಕ್ಕೆ ಕಾರಣವೂ ಸಹ ನಾನು ಹಿಂದಿನ ಸಂಚಿಕೆಯಲ್ಲಿ ಸ್ಪಷ್ಟಪಡಿಸಿದಂತೆ - 'ದ್ವಂದ್ವಗಳು.' ಅವರ ಹೇಳಿಕೆಗಳ ಸಾರಾಂಶವನ್ನು ಹೀಗೆ ಗ್ರಹಿಸಬಹುದು - M.B.B.S. ವಿದ್ಯಾರ್ಥಿ: ತನ್ನ ಪದವಿಯ ನಂತರ ವ್ಯಾಸಂಗವನ್ನು ಮುಂದುವರೆಸಿ M.D., M.S., ಇತ್ಯಾದಿಗಳನ್ನು ಮುಗಿಸಿ, ಓರ್ವ specialist ಅನ್ನಿಸಿಕೊಳ್ಳಬಹುದು. ಮತ್ತೂ ಓದನ್ನು ಮುಂದುವರೆಸಿ super specialist ಪಟ್ಟಕ್ಕೂ ಅರ್ಹತೆ ಪಡೆಯಬಹುದು. ಆದರೆ B.A.M.S. ಪದವಿಯ ನಂತರ ಇಂತಹ speciality, super speciality ಗಳನ್ನು ಮಾಡಲು ನಮ್ಮಲ್ಲಿ ಅವಕಾಶ ಇಲ್ಲ. ನಮ್ಮಲ್ಲಿ ಸಹ M.D. course ಗಳು ಇವೆಯಾದರೂ - ಆಧುನಿಕ ವೈದ್ಯ ಪದ್ಧತಿಯಲ್ಲಿರುವ ಹಾಗೆ ಈ M.D. course ಗಳು ಬರುವುದಿಲ್ಲ. ಹಾಗಾಗಿ ನಮ್ಮಲ್ಲಿ specialist, super specialist ಆಗುವುದಕ್ಕೆ ಅವಕಾಶವೇ ಇಲ್ಲ. ವಿಶೇಷ ಸಂಧರ್ಭಗಳಲ್ಲಿ ಚಿಕಿತ್ಸೆಗಾಗಿ ರೋಗಿಗಳನ್ನ ಆಧುನಿಕ ವೈದ್ಯ , specialist ಗಳ ಬಳಿಯೇ ಕಳುಹಿಸ ಬೇಕಾಗುತ್ತದೆ. ಹೀಗಾಗಿ ನಾವು M.D. ಪದವಿ ಗಳಿಸಿದ ಮೇಲೂ ಸಹ general practitioner ಗಳಾಗಿಯೇ ಉಳಿಯುತ್ತೇವೆ. ಈ ಕೊರತೆ ಆಯುರ್ವೇದದ ಹಿನ್ನಡೆಗೆ, ಜನಪ್ರಿಯಗೊಳ್ಳದಿರುವುದಕ್ಕೆ ಕಾರಣ.

ಅವರ ಹೇಳಿಕೆಯನ್ನು ಸಣ್ಣ ತಿದ್ದುಪಡಿ ಮಾಡಿ, ನಿಮ್ಮ ಹೇಳಿಕೆಯನ್ನು ಹೀಗೆ ಹೇಳಬಾರದೇಕೆ ? ಎಂದು ಸೂಚಿಸಿದೆ. -

MBBS — General practitioner.
M.D. — Gen. Physician, Pediatrics, etc,
M.S. — Gen. Surgeon, Ortho, Gynec,
E.N.T., etc.,
Next — super speciality - Urologist, Cardiac surgeon, Vascular surgeon, Neurologist etc., ಜೊತೆಗೆ Dental ಬೇರೆಯದು.

ಈ ಹೇಳಿಕೆ ಸರಿಯೇ ? ಎಂದಾಗ, ತರುಣ ವೈದ್ಯ ಸಮೂಹ ಮರು ಮಾತಿಲ್ಲದೆ ಒಪ್ಪಿತು. ಹಾಗಿದ್ದರೆ ಇದೇ ಸಿದ್ಧಾಂತ ಅನುಸರಿಸಿ B.A.M.S. ಪದವೀಧರ ಯಾವ ಸ್ಥಾನದಲ್ಲಿ ನಿಲ್ಲಬಹುದು ? ನೋಡೋಣ ಎಂದು ಹೀಗೆ ಹೇಳಿದೆ -

B.A.M.S. = Multi super speciality Doctor (Physician & Surgeon)

ಒಂದು ಕ್ಷಣ ಎಲ್ಲರೂ ಅವಕ್ಕಾದರು, ಹೌಹಾರಿದರು. ಓ! ಇದು ದೊಡ್ಡ ಜೋಕ್. ಎಂದಿಗೂ ಸಾಧ್ಯವೇ ಇಲ್ಲ. ಎಲ್ಲರ ಒಮ್ಮತದ ಹೇಳಿಕೆ. ನನ್ನ ಈ ವಿವರಣೆಗೆ ಮತ್ತಷ್ಟು ಮಾಹಿತಿ ಸೇರಿಸಿ ಅವರಿಗೆ ವಿಷಯದ ಆಳವಾದ ವಿವೇಚನೆಗೆ ಹಚ್ಚಿದೆ.


ಇಂದಿನ ಪರಿಸ್ಥಿತಿಯಲ್ಲಿ ಈಗಾಗಲೆ ಹೇಳಿದಂತಹ - General practitioner, Specialist, Super specialist ಇವುಗಳ ವ್ಯವಸ್ಥೆ ಇರುವುದು ನಿಜ. ಹಾಗೆಯೆ ಅಲೋಪತಿ ವೈದ್ಯ ಸಮುದಾಯದಲ್ಲಿ ಒಬ್ಬ ರೋಗಿಯನ್ನು ನಾನಾ speciality ಗಳಿಗೆ ಸೇರಿದ ವೈದ್ಯರು ತಪಾಸಣೆ ನಡೆಸಿ ನಂತರ ಚಿಕಿತ್ಸೆ ನೀಡುವುದು ಸಾಮಾನ್ಯ. ಮತ್ತೂ ಒಂದು ಅಂಶವೆಂದರೆ - Orthopedic ಗೆ ಸಂಬಂಧಿಸಿದ ರೋಗಿಯನ್ನು Neurologist ಆಗಲೀ, Neurology ಗೆ ಸಂಬಂಧಿಸಿದ ರೋಗಿಯನ್ನು Dentist ಆಗಲೀ, ಚಿಕಿತ್ಸೆ ಮಾಡುವುದಕ್ಕೆ ಮುಂದಾಗುವುದಿಲ್ಲ. ಹಾಗೆಯೆ MBBS ಪದವೀಧರ ಎಲ್ಲ ಕ್ಷೇತ್ರಗಳಲ್ಲೂ ಚಿಕಿತ್ಸೆ ನೀಡಿದರೂ ಸಹ ಅವು ಕೇವಲ ಪ್ರಾರಂಭಿಕ - first aid ಮಾದರಿಯ ಚಿಕಿತ್ಸೆ ಮಾತ್ರ. ಉಳಿದಂತೆ 'ನೀವು ಇಂತಹ ಕಡೆ ಹೋಗಿ.' ಎಂದು ಹೇಳುವುದೇ ಹೆಚ್ಚು. ಒಂದು ರೀತಿಯ dispatch clerk ಇದ್ದ ಹಾಗೆ. ಈ ವ್ಯವಸ್ಥೆಗೆ ರೋಗಿಗಳೂ ಸಹ ಒಗ್ಗಿ ಹೋಗಿದ್ದಾರೆ. ಎಷ್ಟರ ಮಟ್ಟಿಗೆ ಒಗ್ಗಿದ್ದಾರೆಂದರೆ - ಇತ್ತೀಚೆಗೆ ರೋಗಿಗಳೇ ನೇರವಾಗಿ speciality clinic ಗಳಿಗೆ ಹೋಗಲಾರಂಭಿಸಿದ್ದಾರೆ. SPECIALIST ಗಳು ಬರೆದು ಕೊಟ್ಟ prescription ಗಳನ್ನು ವಿವರಿಸಿ ಹೇಳುವಂತಹ, ಅವರು ಸೂಚಿಸಿದ ಇಂಜೆಕ್ಷನ್‌ಗಳನ್ನು ನೀಡುವಂತಹ ಹೀನಾಯ , ದಯನೀಯ ಸ್ಥಿತಿಗೆ general practitioner ಗಳು ತಲುಪಿದ್ದಾರೆ. ಪರಿಸ್ಥಿತಿ ಹೀಗಿರುವಾಗ - general practitioner ತನ್ನ ಬುದ್ಧಿ, ಛಾತಿ ಉಪಯೋಗಿಸಿ, ಅಥವಾ specialist ತನ್ನದಲ್ಲದ ಕ್ಷೇತ್ರದಲ್ಲಿ ಚಿಕಿತ್ಸೆ ನೀಡಲು ವಿಶೇಷ ಸಂದರ್ಭಗಳಲ್ಲಿ ಅವಕಾಶವಿದೆಯಾದರೂ ಸಹ, ದಿನನಿತ್ಯ ಹಾಗೆ ಮಾಡುವ ಹಾಗಿಲ್ಲ. ಕಾನೂನು ಪರಿಧಿಯಲ್ಲಿ ಅದು ಅಪರಾಧವಾಗುತ್ತದೆ. BAMS ಪದವಿಯ ವಿಷಯಕ್ಕೆ ಬಂದಾಗ ನಮ್ಮಲ್ಲಿರುವ M.D. ಪದವಿಯ ರೀತಿ ರಿವಾಜುಗಳೇ ಬೇರೆ. ಅಲೋಪತಿ ಯಲ್ಲಿನ ಹಾಗೆ ದೇಹದ ಅಂಗ ಅಂಗಗಳಿಗೊಂ ದರಂತೆ M.D., M.S. ಗಳ ಪದವಿ ಇಲ್ಲ. ನಮ್ಮಲ್ಲಿ ಇರುವುದು ವಿಷಯ ಆಧಾರಿತ M.D. ಮಾತ್ರ, ಹೀಗಾಗಿ BAMS ಪದವೀಧರ ರೋಗಿಗೆ ಯಾವ ಹಂತದ ವರೆಗೆ ಚಿಕಿತ್ಸೆ ನೀಡಬೇಕು, ಯಾವ ಹಂತದಿಂದ

M.D. ಪದವೀಧರರ ಬಳಿಗೆ ಕಳುಹಿಸಬೇಕು ಎಂಬ ಯಾವುದೇ ಕಾನೂನು ನಮಗೆ ಅನ್ವಯಿಸುವುದಿಲ್ಲ. ನಮ್ಮಲ್ಲಿ ಗಣನೆಗೆ ಬರುವುದು ವೈದ್ಯನ ಛಾತಿ ಮತ್ತು ಬುದ್ಧಿಮತ್ತೆ ಮಾತ್ರ. B.A.M.S./ M.D. ಇವುಗಳ ಗಣನೆ ನಮಗೆ ಅನ್ವಯಿಸುವುದಿಲ್ಲ. ಯಾವುದೇ ರೋಗಿಯನ್ನಾಗಲೀ; ರೋಗವನ್ನಾಗಲೀ , ಯಾವುದೇ ಹಂತದಿಂದಾಗಲೀ/ ಹಂತದವರೆಗಾಗಲೀ ಸ್ವತಂತ್ರವಾಗಿ ಚಿಕಿತ್ಸೆ ಮಾಡುವ ಹಕ್ಕಿದೆ. ಅಕಸ್ಮಾತ್ ಅವಘಡ ಸಂಭವಿಸಿದರೂ ಭಯಬೀಳುವ ಅಗತ್ಯವಿಲ್ಲ. ಕಾನೂನು ಪರಿಧಿಯಲ್ಲೂ ಸಹ ನಾವು ಸುರಕ್ಷಿತ. ಇದು ನಮ್ಮ ಪದವಿಯ - plus point. - 'ಶ್ರೇಷ್ಠತೆ.' ಈ ಹಿನ್ನೆಲೆಯಲ್ಲಿ B.A.M.S. ಪದವೀಧರ ಓರ್ವ - Physician, Surgeon, Dentist, Optholmologist, Gynecologist, …. Neurologist…… Cardiologist…. Etc,..etc,… ಎಲ್ಲವೂ ಆಗಿದ್ದಾನೆ. – 'All in one.' - 'ಸರ್ವ ಶಕ್ತ.' ಅದಕ್ಕಾಗಿ ನಾವು B.A.M.S. ಪದವೀಧರರನ್ನ - 'Multi speciality, Super speciality Doctor ( Physicion & Surgeon) ಎಂದು ಧೈರ್ಯವಾಗಿ ಹೇಳಬಹುದು. ಅವರು ಎಂದೆಂದೂ General Medical Practitioner ಗಳು ಅಲ್ಲವೇ ಅಲ್ಲ. ನಿಮ್ಮನ್ನು ನೀವು - multi super speciality doctor ಎಂದೇ ಬಿಂಬಿಸಿಕೊಳ್ಳಿ. ನಿಮ್ಮ ಕ್ಲಿನಿಕ್‌ಗಳಲ್ಲೂ ಸಹ Multi super speciality clinic ಎಂದೇ ಬೋರ್ಡ್ ಹಾಕಿರಿ.

ನನ್ನ ಹೇಳಿಕೆಗಳು ಅವರಿಗೆ ಅತಿ ಉತ್ಪ್ರೇಕ್ಷೆ ಅನ್ನಿಸಿತು. ಉಢಾಫೆ ಎಂದೂ ಅನ್ನಿಸಿತು. ಹೀಗೆ ಅನ್ನಿಸುವುದರಲ್ಲಿ ಅವರ ತಪ್ಪೇನು ಇಲ್ಲ. ಏಕೆಂದರೆ ಅವರು ಬೆಳೆದ ವಾತಾವರಣ; ಪಡೆದ ವಿದ್ಯೆ; ಅವರು ಹೀಗೇ ಯೋಚಿಸುವಂತೆ ತರಬೇತಿ ನೀಡಿರುತ್ತದೆ.

" ಹಾಗಿದ್ದರೆ ನೀವು ಹೇಳಿದಂತೆ ನಮ್ಮಲ್ಲಿ ಏಕೆ ಯಾವುದೇ surgeon ಗಳು ಇಲ್ಲ ? ನಮ್ಮ ವೈದ್ಯರು ಅನೇಕ ಬಾರಿ ಏಕೆ ನಿಸ್ಸಹಾಯಕರಾಗಿ ನಿಲ್ಲುತ್ತಾರೆ ? ಎಲ್ಲೋ ಕೆಲವರು ಹಲವೇ ಹಲವು ರೋಗಗಳಿಗೆ ಅದೂ ಎಲ್ಲ ಕಡೆ ಕೈ ಬಿಟ್ಟ; ಸಾಯಲೂ ಬಿಡದ; ಬದುಕಲೂ ಆಗದಂತಹವುಕ್ಕೆ ಮಾತ್ರ ಚಿಕಿತ್ಸೆ ನೀಡುತ್ತಾರೆ ? ಹೀಗೆ ನಾನಾ ಪ್ರಶ್ನೆಗಳ ಬಾಣಗಳನ್ನು ಬಿಡಲು ಪ್ರಾರಂಭಿಸಿದರು. ಆತ್ಮೀಯ ವೈದ್ಯರೆ , ಮುಂದಿನ ಸಂಚಿಕೆಯಲ್ಲಿ ಈ ಪ್ರಶ್ನೆಗಳ ಬಾಣಗಳಿಗೆ ಉತ್ತರವನ್ನು ನೀಡೋಣ. ಅಲ್ಲಿಯವರೆಗೆ ತಾವೆಲ್ಲಾ ನಿಸ್ಸಂಶಯವಾಗಿ ಮನದಟ್ಟು ಮಾಡಿಕೊಳ್ಳಿ -B.A.M.S. = Multi & Super Speciality Doctor.

ವೈದ್ಯ : ವಾಸುಕಿಶಯನ ಜಿ.ವಿ.
ದೂರವಾಣಿ : 94488 91405
ಪ್ರಧಾನ ಸಂಪಾದಕರು



# ಶ್ರೀ ಗುರುರಾಯ ಜ್ಯೋತಿಷ್ಯ ಕೇಂದ್ರ

ಪಂಚಸಿದ್ಧಿ ಪಂಚಭೂತಗಳನ್ನು ಮತ್ತು ಸೂರ್ಯ ಚಂದ್ರ ಗ್ರಹಣ ಸಿದ್ಧಿಯನ್ನು ತಮ್ಮ ವಶದಲ್ಲಿರಿಸಿಕೊಡಿರುವ, ಮಹಾನ್ ಸಿದ್ಧಿಪುರುಷ ವಿದ್ವಾನ್ ಪಂ. ಶ್ರೀ ಮಾರ್ಕಂಡೇಯಸ್ವಾಮಿ ಇವರು ಬಹು ಜನತೆಯ ಒತ್ತಾಯದ ಮೇರೆಗೆ ಬೆಂಗಳೂರು ಮಹಾನಗರದಲ್ಲಿ ನೆಲೆಸಿದ್ದಾರೆ.

ನಿಮ್ಮ ಮುಖ ಲಕ್ಷಣ, ಭಾವಚಿತ್ರ ನೋಡಿದ ತಕ್ಷಣ ನಿಮ್ಮ ಸಮಸ್ಯೆಗಳಾದ ಉದ್ಯೋಗದಲ್ಲಿ ತೊಂದರೆ, ವ್ಯಾಪಾರ, ಮನೆಯಲ್ಲಿ ಅಶಾಂತಿ, ಸತಿಪತಿ ಕಿರಿಕಿರಿ, ವಿದ್ಯೆಯಲ್ಲಿ ತೊಂದರೆ, ಸಂತಾನ ಚಿಂತೆ, ಎಷ್ಟೇ ಸಂಪತ್ತಿದ್ದರೂ ಮನಶಾಂತಿ ಇಲ್ಲದಿರುವುದು, ವಿವಾಹದ ಸಮಸ್ಯೆ, ಸ್ತ್ರೀ-ಪುರುಷರ ಪ್ರೀತಿಯಲ್ಲಿ ಮನಸ್ತಾಪ, ಸಾಲದ ಬಾದೆ, ವಶೀಕರಣ, ಆರೋಗ್ಯ ಸಮಸ್ಯೆ, ವಿದೇಶ ಪ್ರಯಾಣ, ಇನ್ನೂ ನಿಮ್ಮ ಜೀವನದ ಯಾವುದೆ ಕಠಿಣ ಸಮಸ್ಯೆಗಳಿದ್ದರೂ ಅತೀ ಶೀಘ್ರದಲ್ಲಿಯೇ ಶಾಶ್ವತ ಪರಿಹಾರಕ್ಕಾಗಿ.ನಮ್ಮಲ್ಲಿದೆ ರಾಮಬಾಣ ಪ್ರಯೋಗ, ಇಂದೇ ಭೇಟಿಕೊಡಿ. .ಬಹು ಜನತೆಯ ಒತ್ತಾಯದ ಮೇರೆಗೆ ಪ್ರತಿ ಗುರುವಾರ ಮತ್ತು ಶುಕ್ರವಾರ ಮಂಗಳೂರಿನಲ್ಲಿ ಲಭ್ಯವಿರುತ್ತಾರೆ. ದೂರದ ಊರಿನವರಿಗೆ ದೂರವಾಣಿ ಮೂಲಕ ಪರಿಹಾರ ತಿಳಿಸಲಾಗುವುದು.

ಮನೆ ವಿಳಾಸ; ಶ್ರೀ ರಾಜರಾಜೇಶ್ವರಿ ನಿಲಯ, ಫೈವ್ ಲೈನ್ ರೋಡ್
ಜೆ.ಪಿ. ಪಾರ್ಕ ಹತ್ತಿರ, ಜೈನ್ ಟೆಂಪಲ್ ಎದುರುಗಡೆ
ವಿಜಯನಗರ, ಬೆಂಗಳೂರು

**ಮೊಬೈಲ್ : 9731901464**

# ENDOCRINOLOGY IN AYURVEDA

## ಆಯುರ್ವೇದದಲ್ಲಿ ನಿರ್ನಾಳ ಗ್ರಂಥಿ ಹಾಗೂ ಅದರ ಚಿಕಿತ್ಸೆ

ಈ ಲೇಖನದ ತಲೆ ಬರಹ ನೋಡಿದ ತಕ್ಷಣ ಅನೇಕ ಆಯುರ್ವೇದದ ಅಭಿಮಾನಿಗಳು, ಹಾಗೂ ಆಯುರ್ವೇದದ ವೈದ್ಯರಲ್ಲಿ ಒಂದು ಸಂದೇಹ ಮೂಡುವುದು ಸಹಜ. ಯಾವ ಗ್ರಂಥದಲ್ಲೂ ಇಂತಹ ಒಂದು ಭಾಗವಿಲ್ಲವಲ್ಲ? ಎಂದು. ಆದರೆ ಇಂದಿನ ವೈಜ್ಞಾನಿಕ ಯುಗದಲ್ಲಿ ಯಾವ ಮಾನವ ತಾನೇ ಆರೋಗ್ಯವಾಗಿ ಇರಲು ಬಯಸುವುದಿಲ್ಲ?. ನಾಗರೀಕ ಸಮಾಜದ ರೋಗ ಬಂಧುಗಳಾದ ಮಧುಮೇಹ, ರಕ್ತದ ಒತ್ತಡ, ಮಾನಸಿಕ ಒತ್ತಡ, ಬಹು ಮುಖ್ಯವಾಗಿ ಇಂದು ಅತ್ಯಂತ ಪ್ರಮಾಣದಲ್ಲಿ ಕಂಡು ಬರುತ್ತಿರುವ (ಹೆಚ್ಚಿನ) ಥೈರಾಯಿಡ್ ವ್ಯತ್ಯಾಸ-ಇವೆಲ್ಲಾ ಯಾರನ್ನು ತಾನೆ ನೆಮ್ಮದಿಯಾಗಿರಲು ಬಿಟ್ಟಿವೆ?.ಇವುಗಳಲ್ಲಿ ಬಹು ಹೆಚ್ಚಿನವು, ಆಜೀವ ಪರ್ಯಂತ ರೋಗಿ-ವೈದ್ಯ-ಔಷಧ ಈ ಸಂಬಂಧವನ್ನು ಬಯಸುವ ರೋಗಗಳು. ಇಂತಹ ಅವಿನಾಭಾವ ರೋಗಗಳಿಗೆ ಕಾರಣ ಹುಡುಕುತ್ತಾ ಹೋದ ವೈದ್ಯ ಶಾಸ್ತ್ರ ಕೊನೆಗೆ ನಿಂತಿದ್ದು ಒಂದು ಹೊಸಾ ಕವಲಿನ ವಿಭಾಗದಲ್ಲಿ. ಅದೇ ನಿರ್ನಾಳ ಗ್ರಂಥಿ ವಿಕಾರಗಳು ಎಂಬ ಹೊಸಾವಿಷಯ, ಹಾಗೂ ಅದನ್ನೆ ವಿಶೇಷವಾಗಿ ಓದಿದ ತಜ್ಞ ವೈದ್ಯರು. ENDOCRINALOGY- ಎಂಬ ಹೊಸಾ ವೈದ್ಯ ಶಾಸ್ತ್ರವಿಭಾಗ. ಆಯುರ್ವೇದ ಒಂದು ಪರಿಪೂರ್ಣ ಶಾಸ್ತ್ರ, ಭಾರತೀಯರ ಅಗಾಧ ಜ್ಞಾನದ ಭಂಡಾರ ಎಂದೆಲ್ಲಾ ಇಂದು ಅನೇಕ ದೇಶಗಳ ತಜ್ಞ ವೈದ್ಯರು ಪರಿಗಣಿಸುತ್ತಿರುವಾಗ ಇಂತಹ ಒಂದು ವಿಭಾಗ ಆಯುರ್ವೇದದಲ್ಲಿ ತನ್ನದೇ ಆದ ದೃಷ್ಟಿಯನ್ನು ಹೇಗೆ ಬೀರಿದೆ ಎಂದು ಚಿಂತಿಸಲು ಇದು ಸಕಾಲ. ಇದಕ್ಕೂ ಮೊದಲು ಈ ಗ್ರಂಥಿಗಳಿಂದ ಬರುವ ರೋಗಗಳ ಪಟ್ಟಿಯ ಕಡೆ ನೋಡೋಣ. ಆಧುನಿಕ ಪದ್ಧತಿಯಲ್ಲಿ ಈ ವಿಭಾಗ ಬೆಳೆದದ್ದು ಬಹುಶಃ 1855 ರಿಂದ ಈಚೆಗೆ.

"Endocrine glands, which are limited to the vertebrates, are intimately concerned With homeostasis, sexual function, growth and metabolism"-ಎಂಬ ವಿವರಣೆಯೊಂದಿಗೆ.

ಇದು ಒಂದು ಲೇಖನ ಹಾಗೂ ಕೇವಲ ಒಂದು ಪಕ್ಷಿನೋಟವಾದ್ದರಿಂದ ಇವುಗಳ ಬಗ್ಗೆ ದೀರ್ಘವಿವರಣೆ ಅಗತ್ಯವಿಲ್ಲ. ಈಗ ಬರಿಯ ರೋಗಗಳ ಪಟ್ಟಿಯ ಕಡೆ ನೋಡೋಣ.

1) The Hypophysis — a) Hypopitutarism; b) Diabetes Insipidus

2) The Thyroid Gland — a) Simple Goiter; b) Hyper thyroidism

3) The Parathyroid glands

4) The Adrenal glands

5) Sexual Disorders in male

6) Disorders of Menopause

7) Diabetes Mellitus

ಇವುಗಳೆಲ್ಲಾ ಅಂತಃ ಸ್ರಾವ ಗ್ರಂಥಿಗಳು ಹಾಗೂ ಅವುಗಳಿಂದ ಬರುವ ಕೆಲವು ರೋಗಗಳು. ಇಂದಿನ ಯಾಂತ್ರಿಕ, ನಮ್ಮದಲ್ಲದ ಆಹಾರ-ವಿಹಾರಗಳ ಅನುಕರಣೆ, ಇವುಗಳ ಫಲವೇ ಮೇಲಿನ ಕೆಲವು ವ್ಯಾಧಿಗಳಾದ ಥೈರಾಯಿಡ್, ಮಧುಮೇಹ, ಪುರುಷರ ಸಂತಾನ ಹೀನತೆ ಇತ್ಯಾದಿಗಳು. ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ ಭಾರತೀಯ ವೈದ್ಯ ಶಾಸ್ತ್ರ-ಆಯುರ್ವೇದದಲ್ಲಿ ಇವುಗಳ ಬಗ್ಗೆ ಚಿಂತನೆ ನಡೆದಿದಯೆ? ಚಿಕಿತ್ಸೆ ಲಭ್ಯವಿದೆಯೆ? ಎಂದು. ಆಯುರ್ವೇದದ ವಿದ್ಯಾರ್ಥಿಗಳು, ಬೋಧಕರು-ಅಲ್ಪಪರಿಶ್ರಮ ಪಟ್ಟರೂ ಸಾಕು ಇಂತಹ ಒಂದು ವಿಭಾಗವನ್ನು ಕ್ರೋಢೀಕರಿಸ ಬಹುದು. ವಿಶದವಾಗಿಲ್ಲದಿದ್ದರೂ ಕೇವಲ ಮಾರ್ಗ ಸೂಚಿಯಾಗಿ ಈ ಲೇಖನವನ್ನು ಪರಿಗಣಿಸಬಹುದೆಂದು ಭಾವಿಸುತ್ತೇನೆ. ಮೇಲೆ ಹೇಳಿದ ಪಟ್ಟಿಯಲ್ಲಿ ಒಂದೆರಡು ವಿಕಾರಗಳ ಬಗ್ಗೆ ಆಯುರ್ವೇದ ಹೇಗೆ ಚಿಂತಿಸಿ ಚಿಕಿತ್ಸಾ ಸೂತ್ರ ಕೊಟ್ಟಿದೆ ಎಂದು ತಿಳಿಯೋಣ. ಮೊದಲು ಥೈರಾಯಿಡ್ ಎಂಬ ರೋಗದ ಬಗ್ಗೆ ದೊರೆಯ ಬಹುದಾದ, ಸುಲಭವಾಗಿ ಅರ್ಥವಾಗುವ ಕೆಲವು ಆಧುನಿಕ ವಿಚಾರವನ್ನು

ತಿಳಿಯೋಣ. ಮೆದುಳಿನಲ್ಲಿರುವ ಸುಮಾರು ಅವರೆ ಕಾಳು ಗಾತ್ರದ ಪಿಟ್ಯೂಟರಿ ಎಂಬ ಗ್ರಂಥಿಯನ್ನು ರಾಜಗ್ರಂಥಿ-ಎಂದುಕರೆಯಲು ಕಾರಣ ಅದು ಉಳಿದ ಎಲ್ಲಾ ಗ್ರಂಥಿಗಳ ಕಾರ್ಯವನ್ನು ನಿಯಂತ್ರಿಸುವುದರಿಂದ. ಇಂತಹ ಒಂದೆರಡು ಹಾರ್ಮೋನುಗಳ ಸೂಕ್ಷ್ಮ ತಿಳುವಳಿಕೆ ಮೊದಲ ಅಗತ್ಯ. ಈ ಪಿಟ್ಯೂಟರಿ ಗ್ರಂಥಿ ಸ್ರವಿಸುವ –TSH- ಎಂಬ ಒಂದು ಹಾರ್ಮೋನು ಥೈರಾಯಿಡ್ ಗ್ರಂಥಿಯ ಕಾರ್ಯವನ್ನು ನಿಯಂತ್ರಿಸುತ್ತದೆ. ಇದು ಅತಿಕಾರ್ಯ, ಕ್ಷೀಣ ಕಾರ್ಯ ಎಂಬ ಎರಡು ಬಗೆ.

The thyroid situated at the root of the throat, having two fairly symmetrical lateral lobes, each about 5x2x2 cm, one on either side of Trachea, joined by a thin portion of thyroid tissue called the isthmus (middle lobe) crossing in front of the second, third and fourth tracheal rings. As a normal variant the left lobe is often smaller than the right lobe. The gland weight in the adult normally varies from 20-25 gm, but is influenced by age, sex, reproductive state and diet.

The Thyroid is a small butterfly shaped gland located at the base of the neck. Though small, it's secretions reach every cell in the body and cause changes in metabolism and other vital functions of the body. The thyroid secretes a hormone called Thyroxine-T 4-and all functions of the gland are effected through this hormone and its metabolite called Tri iodo thyronine-T3-. Three major categories of abnormalities can occur in the thyroid gland: it can function less-called Hypothyroidism, It can function more called –Thyrotoxicosis, or it can develop a swelling.

Hypothyroidism results when there is a destruction of the thyroid gland by the body's defense system (auto immunity) or surgical removal or rarely congenital. Hyperthyroidism or thyrotoxicosis indicates that the gland is producing more hormone than the body needs, resulting in an increase in the metabolic rate of the body. Less commonly, thyrotoxicosis can occur when there is an inflammation of the gland following a viral infection or excess iodine load.

In brief thyroid failure can affect all organs system.

1) Cardiovascular system
- -Decreased ventricular contractility
- -Increased diastolic blood pressure
- -Decreased Heart rate

2) Central Nervous System-
- -Decreased Concentration
- -General lack of interest
- -Depression

3) Gastro-intestinal-
- -Decreased G I motility
- -Constipation

4) Musculo skeletal-Muscle stiffness, cramps, pain, weakness, myolgia

5) Renal-Fluid retention and edema
- -Decreased glomerular filtration

6) Reproductive-Menorrhagia, Anovulation, Infertility, Amenorrhea

7) Hepatic-Elevated triglycerides, Increased L D L cholesterol

8) Skin &Hair-Thickening and dryness of skin, Dry and coarse hair, Loss of scalp hair

ಈಗ ನಮ್ಮ ಮುಂದಿರುವ ಪ್ರಶ್ನೆ ದೀರ್ಘ ಕಾಲ ಅಥವಾ ಜೀವನ ಪರ್ಯಂತ ಚಿಕಿತ್ಸೆ ಮಾಡುವ ಈ ಥೈರಾಯಿಡ್ ವ್ಯಾಧಿಯ ಬಗ್ಗೆ ಆಯರ್ವೇದ ಏನು ಹೇಳುತ್ತದೆ? ಎಂದು. ಮೊದಲು ಚರಕ, ಸುಶ್ರುತ, ವಾಗ್ಭಟರ ಸಂಹಿತೆಗಳಲ್ಲಿ ಇದರ ಬಗ್ಗೆ ಏನು ವಿವರಣೆ ಇದೆ ಎಂದು ನೋಡೋಣ. ಈ ಮೂರೂ ಸಂಹಿತೆಗಳಲ್ಲಿ ಗಲಗಂಡ-ಗಂಡಮಾಲಾ-ಅಪಚಿ-ಗ್ರಂಥಿ-ಅರ್ಬುದ-ಎಂಬ ಒಂದು ಅಧ್ಯಾಯವೇ ಇದೆ. ಮೊದಲ ಎರಡನ್ನು ಬಹುಶಃ ನಾವು ಇಂದಿನ ಥೈರಾಯಿಡ್ ವಿಕೃತಿಗೆ ಹೋಲಿಸ ಬಹುದು. ಸುಶ್ರುತರ ನಿದಾನ ಸ್ಥಾನದಲ್ಲಿ

-ವಾತ ಕಫಶ್ಚೈವ ಗಲೇ ಪ್ರವೃಧೌ ಮನ್ಯೆತುಸಂಸ್ರುತ್ಯ ತಥೌವ ಮೇದಃ
ಕುರ್ವಂತಿಗಂಡೆ ಕ್ರಮಶಃ ಸ್ವಲಿಂಗೌ ಸಮನ್ವಿತಂ ತಂ ಗಲಗಂಡಮಾಹುಃ ॥

ಅತಿಶಯವಾಗಿ ಕುಪಿತ ವಾತ ಕಫ ಹಾಗೂ ಮೇದಸ್ಸು ಕುತ್ತಿಗೆಯ ಭಾಗದಲ್ಲಿ ಆಶ್ರಯ ಹೊಂದಿ ಕ್ರಮವಾಗಿ ವಾತಜ,ಕಫಜ ಹಾಗೂ ಮೇದಜ ಗಲಗಂಡವನ್ನುಂಟು ಮಾಡುತ್ತದೆ, ಆಶ್ಚರ್ಯದ ಅಂಶವೆಂದರೆ ಪಿತ್ತಜ ಗಲಗಂಡ ಬರುವುದಿಲ್ಲ ಎಂಬ ವಿವರಣೆ. ಮತ್ತೊಂದು ಪ್ರಮುಖ

ಸಂಹಿತೆ ವಾಗ್ಭಟಾಚಾರ್ಯರ ಅಷ್ಟಾಂಗಹೃದಯದಲ್ಲಿ ದೊರಕುವವಿವರಣೆಹೀಗಿದೆ.

ಪವನಶ್ಲೇಷ್ಮಮೇದೋಭಿರ್ಗಲಗಂಡೋ ಭವೇದ್ವಹಿಃ ವರ್ಧಮಾನಃ ಸ ಕಾಲೇನಮುಷ್ಕವಲ್ಲಂಬತೋತಿರುಕ್ ॥

ಇಲ್ಲಿಯೂ ಸಹ ಪಿತ್ತಜವಿಲ್ಲ. ಆಯುರ್ವೇದದ–ಪೆಥಾಲಜಿ–ಎಂದೇ ಪ್ರಖ್ಯಾತವಾದ ಮಾಧವ ನಿದಾನ ಸಂಹಿತೆಯಲ್ಲಿ ಅತ್ಯಂತವಾದ ವಿವರಣೆ ಕೊಡಲಾಗಿದೆ.

"ಹಿಮವತ್ಪ್ರಭಾವ,ಹೃದ್ರೋಗ,ಶ್ವಯಥು,ಶಿರೋ ರೋಗ, ಶ್ಲೀಪದ ಗಲಗಂಡಾನ್ ಕುರ್ವಂತಿ" –ಎಂದುಹೇಳುತ್ತಾರೆ. ಮಾಧವರೂ ಸಹ ಪಿತ್ತಜದ ಉಲ್ಲೇಖ ಮಾಡುವುದಿಲ್ಲ. ಇದಕ್ಕೆ ಕಾರಣವೇನಿರಬಹುದು? ಮುಂದೆ ಹೇಳುತ್ತೇನೆ. ಆಯುರ್ವೇದ ರೀತ್ಯ ಲಕ್ಷಣವೆಂದರೆ

– ತೋದಾನ್ವಿತಃ ಕೃಷ್ಣಸಿರಾವನದ್ಧಃ ಕೃಷ್ಣೋರುಣೋವಾ ಪವನಾತ್ಮಕಸ್ತು ।

ವಾತಜ ನೋವಿನಿಂದ ಕೂಡಿದ್ದು ವಾತ ಪ್ರಕೋಪದ ಲಕ್ಷಣಗಳು ಕಂಡು ಬರುತ್ತದೆ.

ಕಫಜದಲ್ಲಿ–ಸ್ನಿಗ್ಧೋಮೃದುಃ ಪಾಣ್ಡುರನಿಷ್ಟಗನ್ಧೋ, ಮೇದಕೃತೋನೀರುಗಥಾತಿ ಕಣ್ದು॥

ಕಫಜವುಸ್ನಿಗ್ಧವಾಗಿ, ಮೃದು, ಬಿಳುಪುವರ್ಣ, ನೋವಿಲ್ಲದೆ ತುರಿಕೆಯ ಇರುತ್ತದೆ. ಇದರ ಜೊತೆಗೆ ಅನೇಕ ಕಫಜ ಲಕ್ಷಣಗಳೂ ಇರುತ್ತದೆ. ಸುಶ್ರುತರು ಅಸಾಧ್ಯ ಲಕ್ಷಣವನ್ನೂ ಹೇಳಿರುತ್ತಾರೆ.

ಈಗ ಇವುಗಳ ತುಲನೆಯನ್ನು ಆಧುನಿಕರು ಹೇಳುವ ಲಕ್ಷಣಗಳ ಜೊತೆ ಹೋಲಿಸಿ ನೋಡೋಣ.

**ಥೈರಾಯಿಡ್ ಗ್ರಂಥಿ ಕಮ್ಮಿಸ್ರವಿಸಿದರೆ(ಹೈಪೋ ಥೈರಾಯಿಡಿಸಂ):**

1)ಕೀಲು ನೋವು
2)ತಣ್ಣಗಿನ ವಸ್ತುವಿನಲ್ಲಿ ಅಸಹನೆ
3)ಮಲಬದ್ದತೆ
4)ಹಸಿವಾಗದಿರುವುದು
5)ಜ್ಞಾಪಕ ಶಕ್ತಿ ಕುಂದುವುದು
6)ಬೆವರು ಇಲ್ಲದಿರುವುದು
7)ಮಾನಸಿಕ ಕ್ಷೋಭೆ
8)ಚರ್ಮ ಒಣಗುವುದು
9)ಮುಖ ಊದಿದ ಭಾವ
10)ತಲೆ ನೋವು
11)ಗಡುಸು ಧ್ವನಿ
12)ಸೋಮಾರಿತನ
13)ಋತು ಸ್ರಾವದಲ್ಲಿ ಬದಲಾವಣೆ
14)ಮಾನಸಿಕ ಸ್ಥಿತಿಯಲ್ಲಿ ಏರುಪೇರು
15)ಮಾಂಸ ಖಂಡದಲ್ಲಿ ಎಳೆತ
16)ಅತಿ ನಿದ್ರೆ
17)ತೂಕದಲ್ಲಿ ಬದಲಾವಣೆ.

**ಥೈರಾಯಿಡ್ ಗ್ರಂಥಿ ಹೆಚ್ಚೂ ಸ್ರವಿಸಿದರೆ(ಹೈಪರ್ ಥೈರಾಯಿಡಿಸಂ) ಬರುವ ಲಕ್ಷಣಗಳೆಂದರೆ:**

1)ಹೃದಯದ ಬಡಿತ ಹೆಚ್ಚುವುದು
2)ದೇಹದ ತೂಕದಲ್ಲಿ ಇಳಿತ
3)ಹೆದರಿಕೆ,ಮಾನಸಿಕ ಕ್ಷೋಭೆ
4)ಹೆಚ್ಚು ಬಾರಿ ಮಲ ವಿಸರ್ಜನೆ
5)ತಲೆ ಕೂದಲು ಉದುರುವುದು
6)ಬಿಸಿಯನ್ನು ತಡೆಯದಿರುವಿಕೆ
7)ನಿದ್ರಾಹೀನತೆ
8)ಋತು ಚಕ್ರದಲ್ಲಿ ಬದಲಾವಣೆ
9)ಮಾಂಸ ಖಂಡಗಳಲ್ಲಿ ದೌರ್ಬಲ್ಯ–ಇವೆಲ್ಲವನ್ನು ರೋಗಿ ಅನುಭವಿಸಬೇಕಾಗುತ್ತದೆ.

ಯಾವುದೇ ಆಧುನಿಕ ಉಪಕರಣಗಳಿಲ್ಲದೇ ಬರಿಯ ಜ್ಞಾನ ಹಾಗೂ ನಾಡಿಯಿಂದ ರೋಗದ ಬಗ್ಗೆ ನಿಶ್ಚಿತವಾಗಿ ವಿವರಿಸಿದ ಆಯುರ್ವೇದದ ಈ ಲಕ್ಷಣಗಳು ಹೇಗೆ ನಿಖರವಾಗಿವೆ ನೋಡಿ. ನನ್ನ ಹಲವು ಹತ್ತು ವರ್ಷಗಳ ಅನುಭವದಿಂದ ಒಂದು ವಿಷಯ ಸ್ಪಷ್ಟವಾದದ್ದು ಎಂದರೆ, ವಾತಜವನ್ನು–ಹೈಪರ್ ಥೈರಾಯಿಡಿಸಂ–ಎಂದು, ಕಫಜವನ್ನು –ಹೈಪೋ ಥೈರಾಯಿಡಿಸಂ–ಎಂದೂ ಭಾವಿಸಿ ಚಿಕಿತ್ಸೆ ಮಾಡಬಹುದು.

ನಾನು ಮೊದಲೇ ಹೇಳಿದಂತೆ ಪಿತ್ತಜ ಎಂಬುದು ಇಲ್ಲ. ಕಾರಣವನ್ನು ಹೀಗೆ ವಿಶ್ಲೇಷಿಸ ಬಹುದು. ಇಡಿಯ ದೇಹದ ಕ್ರಿಯೆಯನ್ನು –Functional, Structural, Metabolic Disorders– ಎಂದು ಸ್ಥೂಲವಾಗಿ ವಿಂಗಡಿಸಿದರೆ,ವಾತಜ ಕಫಜ ಪಿತ್ತಜ –ಎಂಬ ತ್ರಿದೋಷಗಳ ಜೊತೆ ಇವುಗಳನ್ನು ಹೋಲಿಸಬಹುದು(ಇಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಓದುಗರು ಗಮನಿಸ ಬೇಕು.ಇದು ಕೇವಲ ನನ್ನ ಸಿದ್ಧಾಂತ ಮಾತ್ರ. ಯಾವುದೇ ಎರಡು ವೈದ್ಯ ಪದ್ಧತಿಯನ್ನು ಪರಸ್ಪರ ಹೋಲಿಸಲಾಗದು. ಆದರೆ ಈ ರೀತಿ ಯೋಚಿಸಿದ್ದರಿಂದ ಚಿಕಿತ್ಸೆಯಲ್ಲಿ ನನಗೆ ಅತ್ಯಂತ ಸುಲಭದಾರಿ ಸಿಕ್ಕಿತು). ಹೈಪೋ ಮತ್ತು ಹೈಪರ್ ಎಂಬ ಎರಡೂ ಥೈರಾಯಿಡ್ ಗ್ರಂಥಿಯ ಕಾರ್ಯದಲ್ಲಿ ಆದ ವ್ಯತ್ಯಾಸವೇ ವಿನಃ ರಚನೆಯಲ್ಲಿ ಅಲ್ಲ. ಆಯುರ್ವೇದದಲ್ಲಿ ಹೇಳಿದ ಪಿತ್ತದ ಕಾರ್ಯವನ್ನು ವಿಶ್ಲೇಷಿಸಿದರೆ ಎಲ್ಲಾ ಜೈವಿಕ ಕ್ರಿಯೆಗಳ ಒಟ್ಟು ಸಾರವೆನಿಸುತ್ತದೆ. ಅದೇ–ಮೆಟಬಾಲಿಕ್. ಈ ಸ್ಪಷ್ಟ ಜ್ಞಾನ ನಮ್ಮ ಆಚಾರ್ಯರಿಗೆ ಇದ್ದಿರಬೇಕು. ರಚನೆಯಲ್ಲಿ ಆದ ವ್ಯತ್ಯಾಸವನ್ನು ಬಹುಶಃ ಮೇದಜ ಗಂಡದ ಜೊತೆ ಸಮೀಕರಿಸಿ ಚಿಕಿತ್ಸೆ ಮಾಡಿದಾಗ

ನಿಜವಾಗಿ ಫಲಿತಾಂಶ ದೊರೆಯುತ್ತದೆ. ಈ ಎಲ್ಲಾ ವಿಶ್ಲೇಷಣೆಯಿಂದ ದೊರೆತ ಫಲಿತಾಂಶ ಧೃಢೀಕರಿಸಿದ್ದಂದರೆ ಪಿತ್ತಜ ಗಂಡ ಎಂಬುದಿಲ್ಲ. ನಮ್ಮ ಆಚಾರ್ಯರ ವಿವರಣೆ ಅತ್ಯಂತ ವೈಜ್ಞಾನಿಕವೆಂದು ತಿಳಿಯಬಹುದು. ಅತ್ಯಂತ ಮಹತ್ವದ್ದು ಅಧ್ಯಾಯದ ಕೊನೆಯಲ್ಲಿ ಅಸಾಧ್ಯ ಲಕ್ಷಣವನ್ನೂ ಹೇಳಿರು ವುದು.

ಕಷ್ಟದಿಂದ ಉಸಿರುಬಿಡುತ್ತಿರುವ, ಇಡೀ ಶರೀರಮೃದುವಾದಂತಾ, ಒಂದು ವರ್ಷಹಳೆಯದಾದಂತ. ಅರುಚಿ, ಕ್ಷೀಣ ಶರೀರ, ಒಡೆದ ಸ್ವರವುಳ್ಳ ರೋಗಿಯನ್ನು ಅಸಾಧ್ಯವೆಂದು ಬಿಡು ವುದು –॥ಮಾ.ನಿ.191॥

ಇಷ್ಟೆಲ್ಲಾ ಹೇಳಿದ ಮೇಲೆ ಚಿಕಿತ್ಸೆಯನ್ನೂ ಹೇಳಿರ ಬೇಕಲ್ಲವೆ? ಅದಕ್ಕಾಗಿ ಒಂದು ಪಟ್ಟಿಯೇ ಇದೆ.

1) ವರುಣಕಷಾಯ+ಮಧು– ಪ್ರತಿ ದಿನ ಸೇವಿಸಲು

2) ಗಲಗಂಡ ಹರ ಲೇಪ–ಲೇಪನಕ್ಕಾಗಿ

3) ಗಲಗಂಡ ಖಂಡನ ರಸ–ಮಧು ಅನುಪಾನದಲ್ಲಿ

4) ಕಾಂಚನಾರ ಗುಗ್ಗುಳು

5) ಗಂಡಮಾಲಾ ಹರ ರಸ

6) ಜಲ ಕುಂಭೀ ಭಸ್ಮ+ಪಿಪ್ಪಲಿ ಚೂರ್ಣ

7) ಅಮೃತಾದಿ ತೈಲ

8) ಬೃಹತ್ ಕಾಂಚನಾರ ಗುಗ್ಗುಲು ವಟಕ–ಹೀಗೆ ಮುಂದುವರಿಯತ್ತದೆ. ಅತ್ಯಂತ ಅಚ್ಚರಿಯ ವಿಷಯವೆಂದರೆ, ಇವು ಯಾವುದೂ ಬರಿಯ ಥೈರಾಯಿಡ್ ಗ್ರಂಥಿಯಮೇಲೆ ಪ್ರಭಾವ ಬೀರುವುದಲ್ಲದೆ, ರೋಗದ ಮೂಲ ಕಾರಣವಾದ ಪಿಟ್ಯೂಟರಿ ಗ್ರಂಥಿಯ ಹಾರ್ಮೋನನ್ನೂ ಸರಿಪಡಿಸುವುದರಿಂದ ಅಲ್ಪ ಕಾಲದಲ್ಲೇ ಚಿಕಿತ್ಸೆ ಮುಗಿಯುತ್ತದೆ. ಜೀವನ ಪರ್ಯಂತ ಚಿಕಿತ್ಸೆಯಲ್ಲ. ಇದು ಪ್ರಯೋಗ ಶಾಲೆಯ ವರದಿ ಗಳಿಂದ ಧೃಢೀಕರಿಸಲ್ಪಟ್ಟಿದೆ.

ರೋಗ ಮೂಲಕ್ಕೆ ಚಿಕಿತ್ಸೆ–ಎಂದು ಆಯುರ್ವೇದ ಹೇಳುವುದು ಇದನ್ನೆ.

ಸ್ವಲ್ಪ ಮೇಲೆ ಹೇಳಿದ ಒಂದೆರಡು ಔಷಧದ ಬಗ್ಗೆ ಹಾಗೂ ಅದರ ಘಟಕಗಳ ಕ್ರಿಯಾತ್ಮಕ ಸಂಘಟಕಗಳ ಬಗ್ಗೆ ವಿವರವಾಗಿ ತಿಳಿಯೋಣ.

ಥೈರಾಯಿಡ್ ರೋಗದಲ್ಲಿ ಮುಖ್ಯವಾಗಿ 1) ಕಾಂಚನಾರ ಗುಗ್ಗುಲು 2)ಆರೋಗ್ಯ ವರ್ಧಿನಿ ವಟಿ ಇವುಗಳ ಪ್ರಯೋಗ ಅತ್ಯಂತ ಪ್ರಯೋಜನಕಾರಿ

1) ಕಾಂಚನಾರ ಗುಗ್ಗುಲು ಘಟಕ ದ್ರವ್ಯಗಳು

| | |
|---|---|
| 1) ಕಾಂಚನಾರ– | –Purple mountainebony bark—500 gms |
| 2) ತ್ರಿಫಲ– | –Three myrobalams (each) — 100 gms |
| 3) ತ್ರಿಕಟು– | –Three pungents (each) — 50 gms |
| 4) ವರುಣ ಮೂಲ– | –Crataeva roots —50 gms |
| 5) ಏಲ– | –Cardamoms—12.5 gms |
| 6) ತ್ವಕ್– | –Cinnamon bark — 12.5 gms |
| 7) ಗುಗ್ಗುಲು– | –Purified bdellium—1037.5 gms |

ಈ ಘಟಕಗಳ ಕ್ರಿಯಾತ್ಮಕ ಸಂಘಟಕಗಳ (ACTIVE INGRADIENTS) ಬಗ್ಗೆ ವಿವರವಾಗಿ ತಿಳಿದಿದ್ದರೆ ಇದರ ಬಗ್ಗೆ ಮುಂದೆ ಯಾರಾದರೂ ದೀರ್ಘ ಸಂಶೋಧನೆ ಮಾಡಲು ಸಹಾಯವಲ್ಲದಿದ್ದರೂ ಒಂದು ಮಾರ್ಗಸೂಚಿಯಾಗಿರಲಿ.

ಎಂದು ಅದರ ಬಗ್ಗೆ ವಿವರಿಸುವುದೂ, ಈ ಲೇಖನದ ಒಂದು ಆಶಯವಾಗಿದೆ.

1) ಕೆಂಪು ಮಂದಾರ–ಎಂದು ಕನ್ನಡದಲ್ಲಿ, ಕಾಂಚನಾರ –ಎಂದು ಸಂಸ್ಕೃತದಲ್ಲಿ ಗುರುತಿಸುವ ಈ ಸಸ್ಯವನ್ನು ಆಧುನಿಕರು–ಸಿಸೇಲ್ ಪಿನೇಸಿ–ಗುಂಪಿನಲ್ಲಿ , ಬೌಹಿನಿಯ ವರಿಎಗಟ–ಎಂಬ ಹೆಸರಿನಲ್ಲಿ ಕರೆಯುತ್ತಾರೆ. ಇದರ ತೊಗಟೆಯಲ್ಲಿ ಮುಖ್ಯವಾಗಿ–ಟ್ಯಾನಿನ್ (ಟ್ಯಾನಿಕ್ ಆಸಿಡ್), ಸಕ್ಕರೆ(ಗ್ಲೂಕೋಸ್ ) ಹಾಗೂ ಕಂದು ಬಣ್ಣದ ಅಂಟು (ಗಮ್) ಇರುತ್ತದೆ. ಇದರ ಮುಖ್ಯ ಉಪಯೋಗವನ್ನು ಗಮನಿಸಿದರೆ

Bark rubbed in to emulsion with rice water and administered with the addition of ginger in scrofulous enlargement of the glands of the neck –ಎಂಬ ಸ್ಪಷ್ಟ ಉಲ್ಲೇಖವಿದೆ.

2) ತ್ರಿಫಲ ಎಂದು ಅತ್ಯಂತ ಜನಪ್ರಿಯವಾದ ಮೂರು ದ್ರವ್ಯಗಳು–ಆಮಲಕಿ, ಹರೀತಕಿ ,ವಿಭೀತಕಿ.

ಹರೀತಕಿ ಮತ್ತು ವಿಭೀತಕಿ ಇವೆರಡರ ವಿಶ್ಲೇಷಣೆ ಮಾಡಿದಾಗ ದೊರೆತ ಅಂಶವೆಂದರೆ.

Showing Mineral Constitution per cent of the barks of the Terminalias

T.belerica CaO 14.04 CO2 10.2 MgO 0.78 P2O3 1.21 SO3 0.12 Cl 0.83 K2O 0.78 SIO2 0.15

T.Chebula 10.24 8.30 0.55 0.05 0.87 0.18 0.42 0.366

**Amalaki-Action & uses in Ayurveda:**

Rasa-all except lavana, kshayam dominates, Seeta veeryam, Madhura vipakam, Tri dosha haram Rasaayanam, Increases Sukra

**Vibhitaki-Terminalia belerica**—Beleric myrobalns consist of Gallo-tannic acid, colouring matter, resins and a greenish yellow oil 25 p.c.

**Haritaki-Terminalia Chebula**—Myrobalans contain astringent principles: Tannin (tannic acid) 45 p.c and a large amount of Gallic acid, lucilage, a brownish yellow colouring matter.

Chebulic acid which when heated in water splits up in to Tannic and Gallic acids

**ಮೂರನೆಯ ಘಟಕ-ತ್ರಿಕಟು-ಮರೀಚ, ಪಿಪ್ಪಲಿ, ಶುಂಠಿ. ಇವುಗಳ ರಾಸಾಯನಿಕ ಸಂಯೋಜನಯನ್ನು ನೋಡೋಣ.**

ಮರೀಚ-ಅಥವಾ ಮೆಣಸು-ಎಂದು ಪರಿಚಿತವಾದ ಒಂದು ಸಾಂಬಾರ ಪದಾರ್ಥ.

Piper Nigrum contains a volatile alkaloid Piperine or Pipirine 5 to 9 p.c, Piperidine or Piperidin 5 p.c, a balasmic volatile essential oil 1 to 2 p.c, fat 7 p.c, masocorp contains chavicin- a balasmic volatile oil, starch, ligin, gum, fat 1 p.c, protieds 7 p.c and ash containing organic matter 5 p.c, Piperine crystallizes in fat, four sided glassy prisms insoluble in water

**ಪಿಪ್ಪಲಿ-ಹಿಪ್ಪಲಿ-ಎಂದು ಪರಿಚಿತವಾದ ಮತ್ತೊಂದು ಔಷಧ ದ್ರವ್ಯವಿದು**

Piper Longum contains-Resin, Volatile oil, Starch, Gum, fatty oil, Inorganic matter and an alkaloid, piperine-1 to2 p.c.

**ಶುಂಠಿ-ಆರ್ದ್ರಕ, ನಾಗರ ಎಂದೆಲ್ಲಾ ಪರಿಚಿತವಾದ ಮತ್ತೊಂದು ದಿನನಿತ್ಯ ಬಳಸುವ ದ್ರವ್ಯ**

Zingiber officinale-Indian ginger contains an aromatic volatile oil 1 to 5 p.c, of light yellow colour having a characteristic odour and containing camphene, phellandrene, zizgiberine, cineol and borneol, the active principle is K-oxalate, but its true chemical nature has not yet been finally settled.

**ನಾಲ್ಕನೆಯ ಘಟಕ-ವರುಣ ಮೂಲ-ಕನ್ನಡದಲ್ಲಿ ನರುಂಬೆಲೆ ಎಂದು ಗುರಿತಿಸಲ್ಪಡುತ್ತದೆ.**

The bark of Crataeva riligiosa contains Saponin Sarangadhara says that in scrofulous enlargement of the glands under the lower jaw a decoction of the bark of the tree is prescribed by several writers. It is said to cure even old standing cases. In internal or deep-seated suppurative inflammation a decoction of the bark is useful.

**ಐದನೆಯದು-ಏಲ-ಅಥವಾ ಏಲಕ್ಕಿ-ಮತ್ತೊಂದು ಪರಿಚಿತ ದ್ರವ್ಯ**

Elettaria cordamomum-contains Fixed oil, essential oil, volatile oil of the seeds—the active principle 4-8 p.c. and contains a considerable amount of Terpinyl acetate, cineole, free terpineol and also limonene are present and also Potassium, Salts, Starch, Nitrogenous musilage, yellow colouring Matter, ligneous fibre and ash containing Manganeese.

**ಆರನೆಯದು-ತ್ವಕ್-ಅಥವಾ ದಾಲ್ಚಿನ್ನಿ ಚಕ್ಕೆ.**

Thwak-Cinamomum cassia contains volatile oil 2p.c., cinnamic acid, resin, tanin, sugar, mannit, starch Mucilage, ash etc. Oil from the cortex consists chiefly of Cinnamic aldehyde oxidizing in to resin and cinnamic acid, Iso cinnamyl acetate and hydro-carbon and small quantities of phellandrene, Pinene, linalol, caryophyllene, eugenol etc. The amount of aldehydes is 55-65 per cent

**ಕೊನೆಯದೆ ಗುಗ್ಗುಲು-** Balsamodendron mukul-Guggula-contains volatile oil, gum, resin and bitter Principle. Tikta kashaya rasam, katu vipaka, vata kapha haram, pitta karam, lagu, saram, dipanam, ruksham, balyam, rasayanam, vrishyam, bhagnasanthana karam. Used in vranam, apachi, arshas, granhi and in skin diseases.

ಥೈರಾಯಿಡ್ ರೋಗದಲ್ಲಿ ಬಳಸುವ ಮತ್ತೊಂದು ಮುಖ್ಯ ಔಷಧಿ-ಆರೋಗ್ಯ ವರ್ಧಿನಿ. ಅದರ ಮುಖ್ಯ ಘಟಕಗಳ ಬಗ್ಗೆ ನೋಡೋಣ.

**ರಸ ರತ್ನ ಸಮುಚ್ಚಯದ ಪ್ರಕಾರ**

| | |
|---|---|
| 1) ಶುದ್ಧ ಪಾರದ | 15 ಭಾಗ |
| 2) ಶುದ್ಧ ಗಂಧಕ | 15 ಭಾಗ |
| 3) ಲೋಹ ಭಸ್ಮ | 15 ಭಾಗ |
| 4) ಅಭ್ರಕ ಭಸ್ಮ | 15 ಭಾಗ |
| 5) ತಾಮ್ರ ಭಸ್ಮ | 15 ಭಾಗ |
| 6) ತ್ರಿಫಲ | 10 ಭಾಗ |
| 7) ಗೋಮೂತ್ರ ಶಿಲಾಜಿತ್ | 45 ಭಾಗ |
| 8) ಗುಗ್ಗುಲು | 60 ಭಾಗ |
| 9) ಚಿತ್ರಕ | 60 ಭಾಗ |
| 10) ಕಟುಕಿ | 270 ಭಾಗ |
| 11) ನಿಂಬ ಪತ್ರ ಸ್ವರಸ | **ಯಥಾವಶ್ಯ** |

ಮೇಲಿನ ಸಂಖ್ಯೆಗಳನ್ನು ಗ್ರಾಂ ತೂಕವೆಂದು ತಿಳಿಯಬೇಕು. ಚಿತ್ರಕ, ಕಟುಕಿ ಹಾಗೂ ನಿಂಬ ಈ ಮೂರರ ಗುಣದ ಬಗ್ಗೆ ತಿಳಿಯ ಬೇಕಾಗುತ್ತದೆ.

**ಚಿತ್ರಕ**–Plumbago zeylanica-chitraka-or-Agni shikha's root contains an acrid crystalline Principle called Plumbagin in the form of yellow needles. Melting at 72 degree C. Slightly soluble in boiling water. Keien Ko in 1931 finds that Plumbagin stimulates the central nervous system in small doses.

**ಕಟುಕಿ ಅಥವಾ ಕಟುಕ ರೋಹಿಣಿ**–Picrorrhiza kurrooa-The drug contains a glucoside called Picrorrhizin, other substances such as glucose, wax, cathartic acid etc.

**ಕೊನೆ0ಯುದು ನಿಂಬ: ಅತ್ಯಂತ ಪರಿಚಿತ ಬೇವಿನ ಮರ.** Melia azadirachta-Margosa Tree-It contains a bitter alkaloid named Margosine. In 1921 Roy & Chatterjee analysed the oil and found the following constituents 1) Sulphur 0.427 per cent. 2) A very bitter yellowish substance obtained from the alcoholic extract of the oil which is supposed to be an alkaloid. 3) Resins. 5) Glucosides –indefinite. 6) Fatty acid, 7)Acid named –Margosic acid. Watson and his co-workers in 1923 consider that the objectionable odour of the neem oil is chiefly due to Organic Sulphur compounds which are slightly volatile.

Sen & Banerjee in 1931 have shown that the bitterness of the oil is due to the presence of the Sodium salt of an acid and partly to the presence of the free acid which are held in solution in the oil.

The toddy or sap contains glucose, sucrose, gums, and colouring matter, protieds and ash containig

Potassium, Iron, Aluminium, Calcium and Corbon dioxide. Neem oil contains Margosic acid, glycerides of fatty acid, Butyric acid.. Chatterjee & Roy state on clinical evidence that the Margosates are power full against protozoa.

ಇದು ಬರಿಯ ಕಾಷ್ಠೌಷಧಗಳ ಬಗ್ಗೆ ದೊರೆಯುವ ಮಾಹಿತಿಯ ಪಕ್ಷಿ ನೋಟ ಮಾತ್ರ. ಇವುಗಳಲ್ಲಿ ಯಾವ ಘಟಕ ಯಾವ ವಿಧದಲ್ಲಿ ಥೈರಾಯಿಡ್ ರೋಗದಲ್ಲಿ ಉಪಯುಕ್ತ ಎಂಬುದನ್ನು ಅಭ್ಯಾಸ ಮಾಡಲು ವಿಶಾಲವಾದ ವೈಜ್ಞಾನಿಕ ವಿಶ್ಲೇಷಣೆ ಅಗತ್ಯ. ವೈದ್ಯ ವಿಜ್ಞಾನಿಗಳು, ವೈಜ್ಞಾನಿಕ ಸಂಸ್ಥೆಗಳು ಈ ಕಾರ್ಯ ಮಾಡಲು ಮನಸ್ಸು ಮಾಡಬೇಕಷ್ಟೆ.

ಇದಾದ ನಂತರ ಆಧುನಿಕ ವೈದ್ಯಶಾಸ್ತ್ರ ಹೇಗೆ ಥೈರಾಯಿಡ್ ಗ್ರಂಥಿಯ ಎರಡು ಹಾರ್ಮೋನುಗಳನ್ನು ಹಾಗೂ ಅದರ ರಚನೆಯನ್ನು ವಿವರಿಸುತ್ತದೆ ಎಂಬ ಬಗ್ಗೆ ಸಂಕ್ಷಿಪ್ತ ಜ್ಞಾನವೂ ಅಗತ್ಯ. ಅದಕ್ಕಾಗಿ ಒಂದೆರಡು ಆ ವೈದ್ಯ ಶಾಸ್ತ್ರದ ಗ್ರಂಥಗಳ ಪರಿಶೀಲನೆ ಅಗತ್ಯ. ಇದು ಬಹುಶಃ ಕೇವಲ ಒಂದು ಜ್ಞಾನದ ಪರಿಚಯ ಮಾಡಿಕೊಳ್ಳಲು ಮಾತ್ರ. ಆ ಒಂದು ಕಾರಣಕ್ಕಾಗಿ ಇಲ್ಲಿ ಅದನ್ನು ಹೇಳಲಾಗಿದೆ. ಆ ಎರಡು ಹಾರ್ಮೋನುಗಳೆಂದರೆ ಟಿ–3 ಮತ್ತು ಟಿ–4

The thyroid gland synthesize two important hormones: Thyroxine and Tri-iodothyronine. Thyrocalcitonin, secreted by the imterstitial cells. Chemically thyroxine( T-4) is 3,5,3',5' tetra Iodothyronine and Tri-iodothyronine (T-3 ) is 3,5,3' tri-iodothyronine. Substitution of bromine and chlorine for iodine reduces the biological activity of these hormones considerably, while un substituted thyronine is inactive. Ether linkage is absolutely necessary for their biological activity and alanine side chain imparts them maximal activity. If the phenolic hydroxyl (OH) group is shifted from position 4', activity of the hormone is either markedly diminished or lost.

**[Coupling of mono iodo tyrosine and di iodo tyrosine to produce triodothyronine]**

Both T-4 and T-3 are iodine containing derivatives of thyronine, which is a condensation product of two molecules of the Amino acid –Tyrosine.

Thyroxine: is 3,5,3',5'-tetraiodothyronine while T-3 is 3,5,3'-triiodothyronine. The thyroid hormones are synthesized and stored in the thyroid follicles as part of thyroglobulin molecule-which is a glycoprotein synthesized by thyroid cells, MW66000, contains 10% sugar. The synthesis, storage and release of T-4 and T-3 is summarized and involves the following processes.

*1. Iodine up take:*

The total body content of I2 is30-50 mg, out of which about 1/5 is present in thyroid. Concentration of iodine is low, but thyroid cells have an active transport process to concentrate this anion: this trapping is stimulated by TSH to exceed a gradient of more than 100 fold. The I2 Content of thyroid gland somehow regulates the uptake mechanism; meagre store activating and large stores inhibiting it. The iodine concentrating mechanism is not peculiar to thyroid; skin, salivary glands, gastric mucosa, mammary glands and placenta also possess it, but up take in these organs is not stimulated by TSH.

*2. Oxidation and iodination:*

Iodide trapped by follicular cells is oxidized by a peroxidase enzyme with the help of H2O2 to free iodine radicals or Iodinium ions. These combine avidly with tryosil residues of Thyroglobulin, apparently with out any enzymatic inter action, to form monoiodotyrosine (MIT) and Diiodotyrosine (DIT) while they are still attached to the thyroglobulin chains.

*3. Coupling:*

Pairs of iodinated tyrosil residues couple together to form T-3 and T-4

MIT+DIT———T-3
DIT+DIT———T-4


Normally more T-4 than T-3 is formed, but during I2 deficiency relatively more MIT is available and a greater proportion of T-3 is formed. Thus more active hormone is generated with lesser amount of I 2.

Coupling is an oxidative reaction and is catalyzed by the same perixidase. Thyroglobulin is the most efficient protein in supporting coupling by providing favorable spatial configuration to facillate the reaction. Oxidation of iodine and coupling are both stimulated by TSH

**Synthesis, Storage, and Secretion of Thyroid Hormones is summarized as follows**

**THYROID INHIBITORS**

Sulphonamides, thiourea, 2-thiouracil and 6-propyl-2-thiouracil etc, were found to inhibit the formation of thyroxine.



Thiorea 2-Thiouracil 6-Propyl-2-thiouracil

ಇಷ್ಟೆಲ್ಲಾ ಆಧುನಿಕ ವಿಚಾರ ಬೇಕೆ? ಎಂಬ ಪ್ರಶ್ನೆ ಅನೇಕ ಆಯುರ್ವೇದ ವೈದ್ಯರಲ್ಲಿ ಬರುವುದು ಸಹಜ.ಯಾವುದೇ ವೈದ್ಯ ಶಾಸ್ತ್ರ ನೂರಾರು ವರುಷಗಳ ಕಾಲ ಬದುಕಿರುವುದೂ ಅಲ್ಲದೆ ಇಡಿಯ ಮಾನವ ಕುಲಕ್ಕೆ ರೋಗಮುಕ್ತವಾಗಿ ಬದುಕುವ ಹಕ್ಕು, ಸ್ವಾಸ್ಥ್ಯ ಜೀವನ ಕೊಟ್ಟಿರುವುದು ಆಯುರ್ವೇದ ಮಾತ್ರ. ಇಂದು ಇಡಿಯ ಮನು ಕುಲವೇ ತನ್ನ ಗಮನವನ್ನು ಇದರ ಕಡೆ ಹರಿಸಿದೆ. ಆಧುನಿಕ ದೃಷ್ಟಿ ಕೋನದಲ್ಲಿ ನಮ್ಮನ್ನು ನಾವು ಪ್ರಕಟಿಸಿಕೊಳ್ಳುವ ಈ ಅನಿವಾರ್ಯ ಕ್ರಮ ಮಾತ್ರ ಆಯುರ್ವೇದದ ಮಹತ್ವವನ್ನು ಸಾರಲು ಸಾಧ್ಯವೆಂಬುದು ನನ್ನ ಅಭಿಪ್ರಾಯ. ಆಯುರ್ವೇದದ ಮೂಲ ಸಿದ್ಧಾಂತವಾದ-ತ್ರಿ ದೋಷ-ಗಳಿಂದ, ಅವ್ಯಕ್ತದಿಂದ ವ್ಯಕ್ತದ ಕಡೆ ಬರುವ ಚಿಕಿತ್ಸಾ ಸೂತ್ರ ನಿಜಕ್ಕೂ ಒಂದು ಅದ್ಭುತ. ಆದ್ದರಿಂದಲೇ ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿರುವುದು. ಇದರಿಂದ ಮುಂದೆ ಯಾರಿಗಾದರೂ ಅಲ್ಪ ಉಪಯೋಗ ಆದರೂ ಸಾಕೆಂಬ ಭಾವ.

ಮತ್ತೊಂದು ರೋಗ-ಮಧು ಮೇಹದ ಬಗ್ಗೆ (ಡಯಾಬಿಟಿಸ್)-ಆಯುರ್ವೇದದ ಚಿಂತನೆಯನ್ನು ನೋಡೋಣ. ಪ್ರಮೇಹ-ಎಂಬ ಶಬ್ಧ ವಿಶಾಲ ಅರ್ಥದಲ್ಲಿ- ಅಂದರೆ ಮೂತ್ರ ವಿಸರ್ಜನಾಂಗದ ಒಟ್ಟು ವಿಕೃತಿಯೆಂದೇಭಾವಿಸಬೇಕು. ಕಾರಣ ನೋಡಿ

-ದಿವಾಸ್ವಪ್ನ ಅವ್ಯಾಯಾಮ ಆಲಸ್ಯ ಪ್ರಸಕ್ತಂ ಶೀತ ಸ್ನಿಗ್ಧ ಮಧುರ ಮೇದ್ಯ

ದ್ರವಾನ್ನಪಾನಸೇವಿನಂ ಪುರುಷಂ ಜಾನೀಯಾತ್ ಪ್ರಮೇಹಿ ಭವಿಷ್ಯತಿ ॥-ಎಂದು ಸುಶ್ರುತರು ಹೇಳುತ್ತಾರೆ.

ಅರ್ಥ-ಹಗಲು ನಿದ್ರೆ, ವ್ಯಾಯಾಮವಿಲ್ಲದಿರುವಿಕೆ, ಆಲಸ್ಯ, ಶೀತ, ಸಿಗ್ಧ, ಸಿಹಿ, ಮೇದಸ್ಕರ ಈ ಗುಣವುಳ್ಳ ಅನ್ನ ಪಾನ್‌ಗಳನ್ನು ಸೇವಿಸುವ ಪುರುಷನಿಗೆ ಪ್ರಮೇಹ ಉಂಟಾಗುವುದೆಂದು ತಿಳಿಯ ಬೇಕು. ಆಯುರ್ವೇದದಲ್ಲಿ ಒಟ್ಟು

ಕಫಜ-10, ಪಿತ್ತಜ-6, ವಾತಜ-4 ವಿಧಗಳೆಂದು ವಿವರಿಸುತ್ತಾರೆ. ಇಂದಿನವರು ಹೇಳುವ ಲಕ್ಷಣಗಳು ಅಂದೆ ಗೊತ್ತಿತ್ತು.

- ಉಪದ್ರವಾಸ್ತು ಖಲು ಪ್ರಮೇಹಿಣಂ ತೃಷ್ಣಾತಿಸಾರ ಅವಿಪಾಕಾಃ ಪೂತಿಮಾಂಸಪಿಡಕಾ ಅಲಜೀ ವಿಧ್ರಧ್ಯಾದಯಶ್ಚ ತತ್ತ್ರಸಂಗಾತ್ ಭವನ್ತಿ ॥ಚ 219॥

ಬಾಯಾರಿಕೆ, ಅತಿಸಾರ, ಜ್ವರ, ಉರಿ, ದುರ್ಬಲತೆ, ಅರುಚಿ, ಅಜೀರ್ಣ, ಮಾಂಸದಲ್ಲಿ ದುರ್ವಾಸನೆಯುಂಟು ಮಾಡುವ ಪಿಡಕಗಳು -ಮುಂತಾದವು ಪ್ರಮೇಹದ ಉಪದ್ರವಗಳು. ಆಧುನಿಕರು ಹೇಳುವ ಎಲ್ಲಾ ಲಕ್ಷಣಗಳಲ್ಲವೆ?

ಜಾತ ಪ್ರಮೇಹಿ ಮಧು ಮೇಹಿನೋವಾ ನ ಸಾಧ್ಯ ರೋಗಃ ಸಹಿ ಬೀಜದೋಷಾತ್। ಯೇಚಾಪಿಕೇಚಿತ್ ಕುಲಜಾ ವಿಕಾರಾ ಭವನ್ತಿತಾಂಶ್ಚ ಪ್ರವದನ್ತ್ಯಸಾದ್ಯಾನ್॥

ಮಧು ಮೇಹ ಪೀಡಿತ ತಂದೆ ತಾಯಿ ಬೀಜದೋಷದಿಂದ ಬಂದ ಪ್ರಮೇಹ ಅಸಾಧ್ಯ. ಕುಲ ಪರಂಪರೆಯಾಗಿ ಬಂದ ಯಾವ ರೋಗಗಳೂ ಅಸಾಧ್ಯವೆಂದೇ ಅರ್ಥ. ಚರಕರು ಹೇಳುತ್ತಾರೆ.

ದ್ವೌಪ್ರಮೇಹೌ ಸಹಜೋ ಅಪಥ್ಯ ನಿಮಿತ್ತಕಶ್ಚ ಭವತಃ।
ತತ್ರ ಸಹಜೋ ಮಾತೃಪಿತೃ ಬೀಜದೋಷ ಕೃತಃ।
ಅಹಿತಾಹಾರಜೋ ಅಪಥ್ಯ ನಿಮಿತ್ತಃ।-

ಎಂದು ಸುಶ್ರುತರು ಹೇಳುತ್ತಾರೆ. ಪ್ರಮೇಹದಲ್ಲಿ-ಹುಟ್ಟಿನಿಂದ ಬಂದಿರುವಂತಹದ್ದು, ಅಪಥ್ಯ ನಿಮಿತ್ತದಿಂದ ಬರುವುದು ಎಂದು ಎರಡು ವಿಧ. ಇದಕ್ಕಿಂತಾ ಯಾವ ವೈಜ್ಞಾನಿಕ ವಿಶ್ಲೇಷಣೆ ಬೇಕು?. ವಿಸ್ತೃತವಾಗಿ ಹೇಳಿರುವ ಈ ಅಧ್ಯಾಯದಲ್ಲಿ, ಅಧ್ಯಯನ ಶೀಲ ಮನಸ್ಸಿಗೆ ಬೇಕಾದಷ್ಟು ವಿಚಾರವಿದೆ, ಪ್ರಮುಖ ಚಿಕಿತ್ಸೆಯಾಗಿ

1) ಚಂದ್ರ ಪ್ರಭಾವಟಿ. 2) ಶಿಲಾಜಿತ್ವಾದಿ ವಟಿ. 3) ವಂಗ ಭಸ್ಮ. 4) ಸ್ವರ್ಣ ವಂಗ. 5) ಪ್ರಮೇಹಾಂತಕ ವಟಿ. 6) ನವಾಯಸ ಚೂರ್ಣ. 7) ಗೋಕ್ಷೂರಾದಿ ಗುಗ್ಗುಲು. 8)ಹೇಮಂತ ರಸ-ವಸಂತ ಕುಸುಮಾಕರ ರಸ

ಇತ್ಯಾದಿಗಳ ಸುದೀರ್ಘ ವಿವರಣೆ ಇದೆ. ಈಗ ಬೇಕಾಗಿರುವುದು ಕೇವಲ ಪ್ರಯೋಗ ಶೀಲ ವೈದ್ಯ ಮತ್ತು ಅಧ್ಯಯನ ಶೀಲ ಮನಸ್ಸುಗಳು ಮಾತ್ರ.

ಸಾವಿರಾರು ವರ್ಷಗಳ ಕಾಲ ಒಂದು ಶಾಸ್ತ್ರ ಜೀವಂತವಾಗಿದೆಯೆಂದರೆ ಅದರಲ್ಲಿರುವ ನಿಜ ವೈಜ್ಞಾನಿಕ ಸತ್ವ ದಿಂದ ಮಾತ್ರ. ಈ ಆಧುನಿಕ ಜಗತ್ತಿಗೆ ಬೇಕಾದ್ದನ್ನೆಲ್ಲಾ ಕೊಡುವ(ಆರೋಗ್ಯವಾಗಿರಲು) ಯಾವುದೇ ಪ್ರತೀಕೂಲ ಪರಿಣಾಮವಿಲ್ಲದ ಒಂದು ವೈದ್ಯ ಪದ್ಧತಿ. ಅದು ಆಯುರ್ವೇದದಿಂದ ಸಾಧ್ಯವಾಗುತ್ತದೆ. ಈ ಲೇಖನದ ಉದ್ದೇಶ ಕೇವಲ ಗಮನ ಸೆಳೆಯಲು ಮಾತ್ರ. ಅನೇಕ ವಿಚಾರಗಳನ್ನು ಹೇಳಲಾಗಿಲ್ಲ. ಕ್ಷಮೆ ಇರಲಿ. ಈ ಲೇಖನದಲ್ಲಿ ಅನೇಕ ಧಾತುಗಳ ಬಗ್ಗೆ, ಅವುಗಳ ವಿಷದೀಕರಣ ಮಾಡಲಾಗಿಲ್ಲ. ಆಯುರ್ವೇದದ ಅತ್ಯಂತ ಮಹತ್ವವಾದ ವಿಭಾಗವದು. ಓದುಗರ, ವೈದ್ಯರ, ಅಭಿಪ್ರಾಯಕ್ಕೆ ನನ್ನ ಮುಕ್ತ ಸ್ವಾಗತವಿದೆ.

ಡಾ. ಹೆಚ್.ಎಸ್.ವೆಂಕಟೇಶ್
Ph: 9448091313



॥ Sri Jattlingeshwara Prasanna ॥

Shivaji Rao

Cell : 9886446734

KERALA BODY MASSAGE & FACIAL

WE TREAT BED RIDDEN PATIENT ALSO

FOR MEN & WOMEN AT DOOR STEP SERVICE

# Untreated UTI affect fertility

Says Dr Shubhankari.P.Rao Poorly functioning Kidney's decrease fertility. A medical study reported 33% pregnancy rates after kidney disorders were treated. Kidneys are linked to fertility and FSH.

Case study: Mala (name changed) already married for 5yrs was trying hard to conceive but nothing seemed to happen. Her Gynecologist put her under unexplained infertility slot. It was during one of these sessions I got to see Mala for another problem says Dr Shubhankari.P.Rao. Mala complained of a strong urge to urinate, which could not be delayed, and when she put effort in doing so she had sharp pain and burning sensation, sometimes having a tinge of blood. An uncontrollable pressure Above the pelvic bone and peculiar experience of fullness in the rectum with backache and fever gave a full-blown picture of Urinary tract infection.–Mutravaha sroto dushti.

However Mala was not alarmed by these symptoms. She had frequent episodes of these and was quite seasoned to manage them by using an alkaliser and an antibiotic, which her family physician had prescribed her once.

Infections especially ones that recur or are left untreated may significantly affect fertility. Some of these infections may either be a cause of infertility or an infertility symptom. Recurring UTI indicates pelvic inflammatory diseases or immunological problems that affect fertility. Sexually transmitted diseases lead to permanent scarring and pelvic inflammatory diseases. Pelvic and abdominal cavities are compact. An inflamed or enlarged organ compresses other organs and alters their function.

Right treatment not only corrected frequent urinary infections of Mala but also helped her conceive and deliver a normal baby .

Under normal circumstances urinary system and its structure help ward of infection. Immune defenses also play a part. Urinary tract is the body's filtering system for removal of liquid wastes. Women are more susceptible to UTI as their urethral opening is near to the source of bacteria . If bladder is not completely emptied it may lead to infection.

Stones or tumors in the urinary tract can cause infection. Urinary catheters or nephrostomy tubes are also likely causes of UTI.

Vagbhatta has classified mutra rogas under the: types

1. Independent urinary diseases.
   a. Mutra kruchra 8 types.
   b. Mutra ghata 13 types.
   c. Asmari 4 types.
   d. Prameha 20 types
2. Associated urinary complaints:

Pakvashaya gata vata, udavarta, vatakundalika, Mutra sanga, Ushna vata.

Apana vayu is Ayurvedic sub dosha that governs the menstrual cycle. Located in the lower abdomen it is wholly responsible for downward flow through the intestines, urinary and reproductive tracts. Direct symptoms of Apana imbalance include menstrual problem, vataja yoni vyapad –Endometriosis, constipation, irritable bowel syndrome, low back ache, sexual dysfunction, urinary infection, pelvic pain. A woman is not grounded if Apana energy is not at home in the pelvis and the downward flow of elimination is directed upwards. This reversed energy upsets digestion. Another Apana symptom is spiciness when the prana needed in the mind for clear thinking travels downward to help Apana. When this happens the function of the ovary to produce a quality egg for conception is lost.

Vata nature is cold dry rough and quick. To be content Apana vata needs a home that has opposite qualities of warmth, unctuousness, and steadiness, an effective home remedy for Apana imbalance is to massage castor oil gently in the lower abdomen at night and cover it with a flannel cloth and hot water bottle.

**Your kidneys are the "boss"**

They hold the genetic blue print that have the instruction on how everything else works and are the main batteries in the body— The power source that keeps thing going. One of the boss's duties is to filter and remove toxins from your blood and allow what remains to continue traveling around your body and provide fuel for your cells. The toxins are eliminated in the form of urine. Which is stored in your urinary bladder until it is time to go to the bathroom. Your kidneys control the function of your ears, bones, joints and reproductive organs.

**General approach in correcting Mutravaha srotas:**

- Nidana parivarjana
- Snehana and swedana followed by snigdha virechana
- Astapana basti, anuvasana vasti and uttara basti should be administered keeping in view the patients needs.
- Diuretic decoctions, kalkas, pastes ghrutha, avalehyas
- Vatanulomana and udavartahara drugs should be prescribed.
- Specific treatment for vata kundalika etc disorders.

**Diet:**

- Drinking lot of water helps flush out your system.
- Urinate when you have to. Ignoring the call of nature can cause your bladder to stretch and weaken this can prevent the complete emptying of your bladder leading to infection.
- Urinate after sex. Any bacteria that were transmitted during intercourse will be washed away.
- Wipe from front to back. This will prevent bacteria from your rectum being passed to your urethra.
- Avoid wearing tight under garments for extended periods. These can trap moisture and cause bacteria to collect.
- Don't use heavily perfumed soaps around urethra. These can cause irritation and UTI flare-ups.

**Life style modifications.**

Fear directly affects the kidneys and urinary bladder. So don't let fear paralyze you. A lot of it is in our imagination. Learn to moderate it. Turn off the TV or limit your viewing to programs on animals and see how they cope with life in the wild. Getting on top of fear is all about awareness. Respect the difficulties in your life and accept them and see them for what they are, not for what they become.

Correcting the function of Apana vayu and assisting Mutravaha srotas with right medicine, friendly diet and life style modifications to put it in track ; eases the ability of reproductive tract to work at its optimum level concludes Dr Shubhankari P.Rao. Ph : 26578620





A Proprietory Ayurvedic Medicine.

Bukharin® All types of fever बुखारिन

Each 250mg. Capsule Contains :

| | |
|---|---|
| Sudarshan Churna | 225.00 mg |
| Purified Godhanti Bhasma | 25.00 mg |
| Exceplents : Di-calcium Phosphate | qs |
| Talc | qs |

Dosage : 1-2 Capsules 2-3 times a day or as directed by the Physician.
Indications : All types of Fever, Jwara of all types.

Store in a cool dry place.

Colour : Approved colours used for capsule shells.

Mfg Lic. No. L-AUS-237
Manufactured by :
MEDIFIELD,
54/1, 3rd Cross, 2nd Main, Shankar Nagar, Mahalakshmi Layout, Bangalore - 560 096.
Ph. : 080-64503400

# ಪಂಚ ಕರ್ಮ ಚಿಕಿತ್ಸೆ

ಡಾ॥ ವಸುಂಧರಾ ಭೂಪತಿ

ಆಯುರ್ವೇದದಲ್ಲಿ ಪ್ರಮುಖವಾಗಿ ಎರಡು ವಿಧದ ಚಿಕಿತ್ಸೆಯಿದೆ. ಶಮನ ಮತ್ತು ಶೋಧನ ಚಿಕಿತ್ಸೆ. ಪ್ರಕುಪಿತ ದೋಷಗಳನ್ನು ದೇಹದಲ್ಲಿಯೇ ಶಮನಗೊಳಿಸುವಂತಹುದು ಶಮನ ಚಿಕಿತ್ಸೆಯಾದರೆ, ಪ್ರಕುಪಿತ ದೋಷಗಳನ್ನು ಹೊರಹಾಕಿ ದೇಹವನ್ನು ವಿಷವಸ್ತುಗಳಿಂದ ಕಾಪಾಡುವುದು ಶೋಧನ- ಅರ್ಥಾತ್ ಪಂಚಕರ್ಮ ಚಿಕಿತ್ಸೆ. ಶಮನ ಔಷಧಗಳಿಂದ ವಾಸಿಯಾಗದ ಕಾಯಿಲೆಗಳು, ದೀರ್ಘಕಾಲೀನ ವ್ಯಾಧಿಗಳು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು- ಪಂಚಕರ್ಮ ಚಿಕಿತ್ಸೆ ಅತ್ಯಂತ ಉಪಯುಕ್ತವಾಗಿದೆ. ಕಾಯಿಲೆಗಳಿಂದ ಬಳಲುವವರು ಮಾತ್ರವಲ್ಲ, ಆರೋಗ್ಯವಂತರೂ ಕೂಡ ವರ್ಷಕ್ಕೊಮ್ಮೆ ಪಂಚಕರ್ಮ ಚಿಕಿತ್ಸೆ ತೆಗೆದುಕೊಂಡಲ್ಲಿ, ರೋಗನಿರೋಧಕ ಶಕ್ತಿ ಚೆನ್ನಾಗಿದ್ದು ಕಾಯಿಲೆಗಳು ಬಾರದಂತೆ ನೋಡಿಕೊಳ್ಳಲು ಸಹಾಯವಾಗುತ್ತದೆ.

ವಮನ ವಿರೇಚನ ಬಸ್ತಿ, ಶಿರೋವಿರೇಚನ ಮತ್ತು ರಕ್ತಮೋಕ್ಷಣ ಎಂಬುದಾಗಿ ಐದು ವಿಧ ಚಿಕಿತ್ಸೆಗಳು ಶೋಧನದಲ್ಲಿ ಅಡಕವಾಗಿರುವುದರಿಂದ ಇದಕ್ಕೆ ಪಂಚ ಕರ್ಮಎಂದು ಹೆಸರುಕೊಟ್ಟಿದ್ದಾರೆ.

1). ಪೂರ್ವ ಕರ್ಮ- ಪಂಚಕರ್ಮಗಳಲ್ಲಿ ಯಾವುದೇ ಚಿಕಿತ್ಸೆಯನ್ನು ನೀಡುವ ಮೊದಲು, ಪೂರ್ವಕರ್ಮಗಳ ಮೂಲಕ ದೇಹವನ್ನು ಸಿದ್ಧಗೊಳಿಸ ಬೇಕಾಗುತ್ತದೆ. ಯಾವುದೇ ಶಸ್ತ್ರ ಚಿಕಿತ್ಸೆಗೆ ಮೊದಲು ಹೇಗೆ ಪೂರ್ವ ತಯಾರಿ ಬೇಕೋ ಹಾಗೆಯೇ ಇದಕ್ಕೂ ಪೂರ್ವ ತಯಾರಿ ಬೇಕೇ ಬೇಕು. ಪೂರ್ವ ಕರ್ಮಗಳಿಲ್ಲದೇ ಪಂಚಕರ್ಮಕ್ಕೆ ಒಳಗಾದಲ್ಲಿ ಅದರ ಪರಿಣಾಮ ವ್ಯತಿರಿಕ್ತವಾಗಿರುತ್ತದೆ. ಮತ್ತು ಪಾರ್ಶ್ವಪರಿಣಾಮಗಳನ್ನು ಎದುರಿಸಬೇಕಾಗುತ್ತದೆ, ಒಟ್ಟಿನಲ್ಲಿ ಹೇಳುವುದಾದರೆ, ಪೂರ್ವ ಕರ್ಮವಿಲ್ಲದೇಯಿದ್ದರೆ ದೇಹಕ್ಕೆ ಅಪಾಯ. ಸ್ನೇಹನ, ಸ್ವೇದನಗಳನ್ನು ಪೂರ್ವ ಕರ್ಮದಲ್ಲಿ ಮಾಡಬೇಕಾಗುತ್ತದೆ.

ಸ್ನೇಹನ- ಸ್ನೇಹನವನ್ನು, ಅಂತರ್ ಮತ್ತು ಬಾಹ್ಯ- ಎರಡರಲ್ಲೂ ನೀಡಬೇಕಾಗುತ್ತದೆ. ಶೀತ, ಸ್ನಿಗ್ಧ, ಸೂಕ್ಷ್ಮ, ಮೃದು, ದ್ರವ ಗುಣಗಳಿರುವ ಔಷಧಿಗಳು ಸ್ನೇಹವನ್ನುಂಟುಮಾಡುತ್ತವೆ. ತುಪ್ಪ, ಮಜ್ಜೆ, ವಸೆ, ತಿಲತೈಲ ಇವು ಸ್ನೇಹ ಪದಾರ್ಥಗಳಲ್ಲಿ ಮುಖ್ಯವಾದವು.

ನಾಲ್ಕರಲ್ಲಿ ತುಪ್ಪವು ಇತರೆ ಪದಾರ್ಥದೊಡನೆ ಸೇರಿದರೂ ತನ್ನ ಗುಣವನ್ನು ಬಿಡುವುದಿಲ್ಲ. ಆದರೆ ತೈಲಾದಿಗಳು ಇತರ ವಸ್ತುವಿನೊಡನೆ ಸೇರಿದಲ್ಲಿ ತಮ್ಮ ಸ್ವಂತಗುಣವನ್ನು ಬಿಟ್ಟುಬಿಡುತ್ತವೆ. ತುಪ್ಪಕ್ಕಿಂತಾ ತೈಲ ಜೀರ್ಣಿಸಲುಕಷ್ಟ. ವಸೆಯು ತೈಲಕ್ಕಿಂತಾ ಹೆಚ್ಚು ಕಷ್ಟಕರ, ಮಜ್ಜೆಯು ವಸೆಗಿಂತಲೂ ಕಷ್ಟಕರವಾಗಿರುತ್ತದೆ. ನಾಲ್ಕೂ ಬಗೆಯ ಸ್ನೇಹಗಳಲ್ಲಿ- ಧೀ, ಧೃತಿ, ಸ್ಮೃತಿ, ಮೇಧಾ ಮತ್ತು ಜೀರ್ಣ ಶಕ್ತಿಹೆಚ್ಚಾಗಬೇಕೆಂದು ಇಚ್ಛಿಸುವವರಿಗೆ ತುಪ್ಪವು ಹಿತಕರವಾದುದು. ಆದರೆ ಕಫರೋಗಿಗಳು, ಮೇದಸ್ಸು(ಕೊಬ್ಬು) ಹೆಚ್ಚಾಗಿರುವವರು, ವಾತರೋಗಿಗಳು, ದೇಹ ಹಗುರವಾಗಿರಬೇಕೆಂದು ಮತ್ತು ಧೃಢವಾಗಿರಬೇಕೆಂದು ಬಯಸುವವರು, ಜೀರ್ಣ ಶಕ್ತಿ ಕಡಿಮೆಯಿರುವವರು, ಮಲಬದ್ಧತೆಯಿಂದ ಬಳಲುವವರಿಗೆ ತೈಲ ಉತ್ತಮವಾದದ್ದು. ಅದರಲ್ಲಿಯೂ ಎಲ್ಲಾ ಬಗೆಯ ತೈಲಗಳಲ್ಲಿ ತಿಲ ತೈಲ ಅತ್ಯಂತ ಶ್ರೇಷ್ಠ. ರೋಗಿಯ ಅಥವಾ ವ್ಯಕ್ತಿಯ ದೇಹ ಬಲ, ಪ್ರಕೃತಿಗಳಿಗೆ ಅನುಗುಣವಾಗಿ ಯಾವ ವಿಧವಾದ ಸ್ನೇಹ ಒಳ್ಳೆಯದು ಎಂದು ನಿರ್ಧರಿಸಿ" ಸ್ನೇಹನ"- ಆರಂಭಿಸಬೇಕು. ಸ್ನೇಹನವನ್ನು ಪಾನ( ಕುಡಿಸಲು), ಅನುವಾಸನ ಬಸ್ತಿ(ಗುದದ್ವಾರದ ಮೂಲಕ ನೀಡುವಂತಹುದು), ನೆತ್ತಿಗೆ ಲೇಪನ, ಶಿರೋ ಬಸ್ತಿ, ನಸ್ಯ, ಕರ್ಣಪೂರಣ, ಅಭ್ಯಂಗಗಳ ಮೂಲಕ ಉಪಯೋಗಿಸಬೇಕು.

ಸ್ನೇಹ ಪಾನ- ಸ್ನೇಹಪಾನವನ್ನು ಯಾವ ವ್ಯಕ್ತಿಗೆ ಅಂದರೆ -ಪಂಚಕರ್ಮ ಚಿಕಿತ್ಸೆ ತೆಗೆದುಕೊಳ್ಳುವ ವ್ಯಕ್ತಿಗೆ-ಮೂರು ಇಲ್ಲವೇ ನಾಲ್ಕು ಇಲ್ಲವೇ ಐದು, ಇಲ್ಲವೇ ಆರು ದಿನ ನೀಡಬೇಕಾಗುತ್ತದೆ. ಆರಂಭದ ದಿನದಿಂದ ಔಷಧಿಯ ಪ್ರಮಾಣವನ್ನು ಹೆಚ್ಚಿಸ ಬೇಕಾಗಿ ಬರುತ್ತದೆ. 15 ಮಿಲೀಯಿಂದ ಎರಡನೆಯ ದಿನ 30 ನೀಡಿ ಕೊನೆಯದಿನ 100 ಮಿಲಿಯವರೆಗೂ ನೀಡಬಹುದು. ಯಾರಿಗೆ ಎಷ್ಟುಪ್ರಮಾಣ ಸೂಕ್ತವೆಂದು ವೈದ್ಯರೇ ನಿರ್ಧರಿಸುತ್ತಾರೆ.

ಸ್ನೇಹ ಪಾನ ಮಾಡಿದ ನಂತರ ಬಿಸಿನೀರನ್ನು ಕುಡಿಯಬೇಕು. ಸ್ನೇಹಪಾನ ಮಾಡಿದವರು ದಿನದ ಯಾವುದೇ ಸಮಯದಲ್ಲಿ ನೀರು ಕುಡಿಯಬೇಕಾದಲ್ಲಿ ಬಿಸಿನೀರನ್ನೇ ಕುಡಿಯಬೇಕು. ಸ್ನೇಹನ ತೆಗೆದುಕೊಳ್ಳುವ ದಿನಗಳಲಿಯಾಗಲೀ- ಒಟ್ಟು ಪಂಚಕರ್ಮ ಚಿಕಿತ್ಸೆ ಮುಗಿಯುವವರೆಗೂ ದೇಹವನ್ನುದಂಡಿಸುವ ವ್ಯಾಯಾಮ ಮಾಡಬಾರದು. ಸಿಟ್ಟು, ದುಃಖ, ಬಿಸಿಲಲ್ಲಿ ತಿರುಗಾಡುವುದು ಮಾಡಬಾರದು. ದೈಹಿಕ ಮತ್ತು ಮಾನಸಿಕವಾಗಿ ಪ್ರಶಾಂತವಾಗಿರಬೇಕು. ಸ್ನೇಹಪಾನದೊಂದಿಗೆ ಅಭ್ಯಂಗವನ್ನೂ ನೀಡಬೇಕು. ಮೈಗೆ ಎಣ್ಣೆಹಚ್ಚಿ ಮಸಾಜ್ ಮಾಡಬೇಕು. ಇದರಿಂದ ಚರ್ಮದ ಕಾಂತಿ ಹೆಚ್ಚುತ್ತದೆ. ರಕ್ತಪರಿಚಲನೆ ಚೆನ್ನಾಗಿಆಗುತ್ತದೆ. ಮಾಂಸ ಖಂಡಗಳಲ್ಲಿ ಧೃಢತೆ ಉಂಟಾಗುತ್ತದೆ.

ಸ್ವೇದನ– ಸ್ನೇಹಪಾನ ಮತ್ತು ಅಭ್ಯಂಗದ ನಂತರ ಸ್ವೇದನ ಚಿಕಿತ್ಸೆ ನೀಡಬೇಕಾಗುತ್ತದೆ. ಸ್ವೇದವೆಂದರೆ ಬೆವರಿಸುವುದು ಎಂದರ್ಥ. ಸ್ವೇದನದಲಿ ಪ್ರಧಾನವಾಗಿ –ತಾಪಸ್ವೇದ, ಉಷ್ಮಸ್ವೇದ, ಉಪನಾಹ ಸ್ವೇದ ಮತ್ತು ದ್ರವ ಸ್ವೇದ ಎಂದು ನಾಲ್ಕು ವಿಧ. ಅಲ್ಲದೇ ಇಡೀ ದೇಹವನ್ನು ಸರ್ವಾಂಗಸ್ವೇದದ ಮೂಲಕ ಬೆವರಿಸುವುದು. ಇಲ್ಲವೇ ದೇಹದ ಒಂದು ಭಾಗವನ್ನು ಮಾತ್ರಾ ಬೆವರಿಸುವುದು. ಅಭ್ಯಂಗಮಾಡದೇ ಮತ್ತು ಸ್ನೇಹಪಾನದಿಂದ ದೇಹವನ್ನು ಸ್ನಿಗ್ಧಗೊಳಿಸದೇ ಸ್ವೇದನವನ್ನು ಯಾವ ಕಾರಣಕ್ಕೂ ಮಾಡಬಾರದು. ಸ್ವೇದನ ಕರ್ಮದಿಂದ ಜೀರ್ಣ ಶಕ್ತಿ ಹೆಚ್ಚುವುದು, ಮೃದುತ್ವ, ಚರ್ಮದ ಹೊಳಪು, ಜಡತ್ವ ದೂರವಾಗುವುದು. ಕೀಲುಗಳಲ್ಲಿ ಚಲನ ಶಕ್ತಿ ಹೆಚ್ಚುವುದು, ಔಷಧಿ ದ್ರವ್ಯಗಳಿಂದ ಕಷಾಯ ತಯಾರಿಸಿ, ಆ ಕಷಾಯದ ಹಬೆಯನ್ನು ದೇಹಕ್ಕೆ ನೀಡಿ ಸ್ವೇದನವನ್ನು ಮಾಡಿಸಿ ಚೆನ್ನಾಗಿ ಬೆವರು ಬಂದ ನಂತರ ಬಿಸಿನೀರಿನ ಸ್ನಾನ ಮಾಡಿಸಿ, ಮೃದುವಾದ, ಜೀರ್ಣಕ್ಕೆ ಸುಲಭವಾದ ಆಹಾರವನ್ನು ನೀಡಿ ಮಲಗಿಸಬೇಕು. ಸ್ವೇದನ ಅಧಿಕವಾದರೆ ಉರಿ, ಗುಳ್ಳೆಗಳು ಏಳುವುದು, ಮೂರ್ಛೆ, ಬಾಯಾರಿಕೆ, ಶ್ರಮ, ಪಿತ್ತ ಮತ್ತು ರಕ್ತ ದೋಷಗಳು ಪ್ರಕುಪಿತವಾಗುತ್ತವೆ. ಹಾಗಾದಾಗ ಅವರಿಗೆ ಶೀತದ ಉಪಚಾರಗಳನ್ನು ಮಾಡಿದಲ್ಲಿ ಸಹಜ ಸ್ಥಿತಿಗೆ ಬರುತ್ತದೆ.

ವಮನ ಕರ್ಮ– ಸ್ನೇಹ, ಸ್ವೇದಗಳಿಂದ ಸಿದ್ಧನಾದವನನ್ನು ವಮನ ಕರ್ಮಕ್ಕೆ ಅಣಿಗೊಳಿಸ ಬೇಕು. ಕಫ ದೋಷ ಅಧಿಕವಾಗಿದ್ದಲ್ಲಿ ವಮನ ಅಂದರೆ ವಾಂತಿ ಮಾಡಿಸುವುದು ಉತ್ತಮವಾದ ಚಿಕಿತ್ಸೆ. ಅತಿಸಾರ, ಅಧೋಗತ ರಕ್ತ ಪಿತ್ತ, ರಾಜ ಯಕ್ಷ್ಮ(ಕ್ಷಯ), ಕುಷ್ಠ ಅಂದರೆ ಚರ್ಮ ರೋಗ, ಕಾಸ(ಅತಿಯಾದ ಕೆಮ್ಮು),ಉಬ್ಬಸ, ಕಣ್ಣು, ಕಿವಿ,ಗಂಟಲಿನ ರೋಗಗಳು,ವಿಸರ್ಪ ಮುಂತಾದ ರೋಗಗಳಿಂದ ಬಳಲುವವರಿಗೆ ವಮನೌಷಧವನ್ನು ನೀಡಿ ಕಫದೋಷವನ್ನು ಹೊರಹಾಕಬೇಕು.

ವಮನ ಕರ್ಮ ಅಂದರೆ ವಾಂತಿ ಮಾಡಿಸುವ ಹಿಂದಿನ ದಿನ ಪಾಯಸ, ಮೊಸರು, ಹಾಲು ಮುಂತಾದುವನ್ನು ಸೇವಿಸಲು ಹೇಳಬೇಕು. ಮರುದಿನ ಬೆಳಿಗ್ಗೆ ವಮನ ದ್ರವ್ಯಗಳಾದ ಮದನ ಫಲ, ಅತಿಮಧುರ, ಕಹಿಸೋರೆಬೀಜ, ಬೇವಿನ ತೊಗಟೆ, ತೊಂಡೆಬೇರು, ದಾಸಮೆಕ್ಕೆಹಣ್ಣು, ಕಹಿಸೌತೆ, ಕೊಡಸಿಗೇ ತೊಗಟೆ, ದೇವದಾಳಿ ಬೇರು, ವಿಡಂಗ, ಚಿತ್ರಮೂಲ, ಇಲಿಕಿವಿಸೊಪ್ಪು, ತುಪ್ಪಹೀರೆ, ಹೊಂಗೆಯಬೀಜ, ಹಿಪ್ಪಲಿ, ಸೈಂಧವಲವಣ, ಬಜೆ, ಏಲಕ್ಕಿ, ಸಾಸಿವೆ ಮುಂತಾದವುಗಳಿಂದ ತಯಾರಿಸಲ್ಪಟ್ಟ ಕಷಾಯವನ್ನಾಗಲೀ, ಕಲ್ಕವನ್ನಾಗಲೀ, ಚೂರ್ಣವನ್ನಾಗಲೀ, ಸ್ನೇಹವನ್ನಾಗಲೀ–ಇವುಗಳಲ್ಲಿ ಯಾವುದಾದರೊಂದನ್ನು ತಕ್ಕ ಪ್ರಮಾಣದಲ್ಲಿ ಕುಡಿಸಿ ವಾಂತಿಮಾಡಿಸಬೇಕು. ವಮನೌಷಧಿ ಸೇವನೆಯ ಸ್ವಲ್ಪಕಾಲದ ನಂತರ ಬೆವರು ಬರತೊಡಗುತ್ತದೆ.ಬೆವರು ಬರಲಾರಂಭಿಸಿದಾಗ, ದೋಷಗಳು ತಮ್ಮ ತಮ್ಮ ಸ್ಥಾನಗಳನ್ನು ಬಿಟ್ಟು ಹೊಟ್ಟೆಗೆ ಬಂದು ಸೇರಿವೆಯೆಂದು ತಿಳಿಯಬೇಕು. ನಂತರ ವಾಂತಿ ಪ್ರಾರಂಭವಾಗುವ ಲಕ್ಷಣಗಳನ್ನು ತಿಳಿದು ಎತ್ತರವಾದ ಆಸನದ ಮೇಲೆ ರೋಗಿಯನ್ನು ಕುಳ್ಳಿರಿಸಿ, ಪರಿಚಾರಕರು ಪಕ್ಕದಲ್ಲಿ ಕೂತು, ರೋಗಿಯ ಹಣೆ, ಬೆನ್ನು, ಪಕ್ಕೆಗಳಲ್ಲಿ ಕೈಯ್ಯಾಡಿಸುತ್ತಾ ಹೊಟ್ಟೆಯಲ್ಲಿರುವುದೆಲ್ಲಾ ವಾಂತಿಯಾಗುತ್ತಿರುವುದನ್ನು ಗಮನಿಸುತ್ತಿರಬೇಕು.

ಕಫದ ಹಿಂದೆ ಪಿತ್ತವು ಸುಲಭವಾಗಿ ಹೊರಟು ಹೋಗಿ, ಹೃದಯ, ಗಂಟಲು, ಶಿರಸ್ಸು ಶುದ್ಧವಾಗಿ ದೇಹವು ಹಗುರವಾಗುವುದು. ಕಫ ಹೊರಗೆ ಬರುವುದು ನಿಂತುಹೋದಾಗ ಉತ್ತಮವಾಗಿ ವಾಂತಿಯಾಗಿದೆಯೆಂದು ತಿಳಿಯಬೇಕು. ವಾಂತಿಯ ನಂತರ ಶಮನ ಹೊಗೆ (ಧೂನ ಪಾನ) ನೀಡಬೇಕು. ಅವರ ಸಾಮರ್ಥ್ಯಕ್ಕನುಗುಣವಾಗಿ ಪಾನ ಮಾಡಿಸಬೇಕು. ನಂತರ ಬಿಸಿನೀರಿನ ಸ್ನಾನ ಮಾಡಲು ಹೇಳಿ, ಅವರ ದೇಹ ಶುದ್ಧವಾದ ಮೇಲೆ, ಹುರುಳಿಸಾರು, ಹೆಸರು ಬೇಳೆಸಾರು,




ಮದ್ಯವ್ಯಸನಿಗೆ ತಿಳಿಸದೆ ಸುಲಭವಾಗಿ

ಮದ್ಯಪಾನ ಬಿಡಿಸುವ ಔಷಧಿಗಾಗಿ ಸಂಪರ್ಕಿಸಿ :

ಮದ್ಯಪಾನ ವಿಮುಕ್ತಿ ಕೇಂದ್ರ,

ಮೊಬೈಲ್ : 9663787505

ತೊಗರಿಬೇಳೆಸಾರು- ಇವುಗಳಲ್ಲಿ ಯಾವುದಾದರೊಂದನ್ನು ಅನ್ನದೊಂದಿಗೆ ಊಟಮಾಡಿಸಬೇಕು. ಒಂದು ಮರವನ್ನು ಕಡಿದರೆ ಅದರ ಹೂವು, ಫಲ ಮತ್ತು ಚಿಗುರುಗಳು ಹೇಗೆ ನಾಶಹೊಂದುತ್ತದೋ ಹಾಗೆ ವಮನ ಕರ್ಮದಿಂದ ಕಫವನ್ನು ಹೊರಹಾಕಿದಲ್ಲಿ ಆ ಕಫದಿಂದ ಹುಟ್ಟಿದ ರೋಗಗಳೆಲ್ಲಾ ಶಾಂತವಾಗುತ್ತವೆ.

ವಮನ ಚಿಕಿತ್ಸೆಗೆ ಅನರ್ಹರು: ಗುಲ್ಮ ಗ್ರಂಥಿ, ಉದರರೋಗ, ಪ್ಲೀಹ ವೃದ್ಧಿ, ಕೃಮಿ, ಸ್ಥೂಲ, ಕ್ಷೀಣವಾದವರು, ಅತೀವೃದ್ಧರು, ಮುತ್ರರೋಗಿಗಳು, ವಾತರೋಗವುಳ್ಳವರು, ಅಜೀರ್ಣವಾದವರು, ಬಾಲಕರು, ಹಸಿದವರು, ಗರ್ಭಿಣಿಯರು ಮುಂತಾದವರಿಗೆ ವಮನ ಕರ್ಮ ಮಾಡಿಸ ಬಾರದು. ಇಂತಹವರಿಗೆ ವಮನ ನೀಡಿದಲ್ಲಿ ಅವರ ಕಾಯಿಲೆಗಳು ವಾಸಿಯಾಗುವುದಕ್ಕೆ ಬದಲು ಚಿಕಿತ್ಸೆ ಕಷ್ಟಸಾಧ್ಯ ವಾಗಬಹುದು.

**– ವಿರೇಚನ ಕರ್ಮ( ಭೇದಿಮಾಡಿಸುವುದು):**

ಸ್ನೇಹನ, ಸ್ವೇದನದ ನಂತರ ಮತ್ತು ವಮನದ ನಂತರ ವಿರೇಚನಕ್ಕೆ ಸಿದ್ಧಗೊಳಿಸಬೇಕಾಗುತ್ತದೆ. ಆರು ದಿನದ ಸ್ನೇಹನದ ನಂತರ ವಿರೇಚನದ ಹಿಂದಿನ ದಿನ ಲಘುವಾದ ಊಟ ಅಂದರೆ ಜೀರ್ಣಕ್ಕೆ ಸುಲಭವಾದ ಆಹಾರ ಸೇವಿಸಲು ಹೇಳಬೇಕು. ಬಿಸಿನೀರನ್ನು ಕುಡಿಯಲು ಹೇಳಬೇಕು.

ಗುಲ್ಮ, ಅರ್ಶಸ್ಸು, ಕಾಮಲೆ, ದೀರ್ಘಕಾಲೀನ ಜ್ವರದಿಂದ ಪೀಡಿತರಾದವರಿಗೆ, ಉದರ ರೋಗ, ಪ್ಲೀಹ ವೃದ್ಧಿ, ನೇತ್ರರೋಗ, ಉದರರೋಗಗಳು, ಗರ್ಭಕೋಶ, ಜನನಾಂಗದ ತೊಂದರೆಗಳು, ವೀರ್ಯಾಣುಗಳ ಸಂಖ್ಯೆ ಕಡಿಮೆಯಿರುವವರಿಗೆ, ವ್ರಣಗಳು, ವಾತರಕ್ತ, ಮೂತ್ರಾಘಾತ, ಮಲಬದ್ಧತೆ, ಕುಷ್ಠ, ಮೇಹ ಮುಂತಾದ ರೋಗಗಳಿಂದ ಬಳಲುವವರಿಗೆ ವಿರೇಚನ ನೀಡಬೇಕು.

ಜಾಪಾಳ, ತಿಗಡೆ, ತ್ರಿಫಲಾ, ಬಿಳೀಹೂವಿನ ದಾಸಮೆಕ್ಕೆ, ಮುಂಡಗಳ್ಳಿ, ಈಶ್ವರೀ, ನೀಲಿ, ಲೋಧ್ರ, ಕ್ಷೀರಿಣಿ, ಹಾಲು, ಗೋ ಮೂತ್ರಗಳಿಂದ ತಯಾರಿಸಿದ ಔಷಧದ್ರವ್ಯಗಳನ್ನು ಕುಡಿಯಲು ನೀಡಬೇಕು. ವಿರೇಚನ ಔಷಧಿ ಪಾನ ಮಾಡಿದ ಸ್ವಲ್ಪ ಸಮಯದ ನಂತರ, ಪ್ರಥಮ ವಾಗಿ ಮೂತ್ರ ವಿಸರ್ಜನೆ, ನಂತರಮಲ ವಿಸರ್ಜನೆ ಪ್ರಾರಂಭವಾಗುತ್ತದೆ. ಮೇಲಿಂದ ಮೇಲೆ ಭೇದಿಯಾಗುತ್ತಿರುತ್ತದೆ. ಬಿಸಿನೀರನ್ನು ಮಾತ್ರಾ ಕುಡಿಯುತ್ತಿದ್ದು, ಬೇರೆ ಯಾವುದೇ ಆಹಾರ ಪಾನೀಯಗಳನ್ನು ಸೇವಿಸಬಾರದು, ಕೆಲ ಗಂಟೆಗಳ ನಂತರ ತಾನಾಗಿಯೇ ಭೇದಿಯಾಗುವುದು ನಿಲ್ಲುತ್ತದೆ. ದೋಷಗಳು ಹೊರ ಹೋಗಿ, ದೇಹವು ಹಗುರವಾಗಿ ಮನಸ್ಸಿಗೆ ಸಂತೋಷವುಂಟಾಗಿ, ವಾತವು ಸಹಜ ಸ್ಥಿತಿಗೆ ಬಂದ ನಂತರ ಸರಿಯಾದ ಕ್ರಮದಲ್ಲಿ ವಿರೇಚನವಾಗಿದೆಯೆಂದು ಭಾವಿಸ ಬೇಕು.

ವಿರೇಚನದ ನಂತರ ಬಾಯಾರಿಕೆಯಾಗಿ, ಹಸಿವುಂಟಾದಲ್ಲಿ ತೆಳ್ಳಗಿರುವ ಗಂಜಿಯನ್ನು ಕುಡಿಯಲು ಕೊಡಬೇಕು. ವಿರೇಚನದಿಂದ ಪಿತ್ತದೋಷಕ್ಕೆ ಸಂಬಂಧಿಸಿದ ಎಲ್ಲಾ ತೊಂದರೆಗಳು ನಿವಾರಣೆಯಾಗುತ್ತದೆ. ಸರಿಯಾಗಿ ವಿರೇಚನವಾಗದಿದ್ದರೆ ಬಿಸಿನೀರನ್ನು ಕುಡಿಸಬೇಕು. ಹೊಟ್ಟೆಗೆ ಸ್ವೇದನವನ್ನು ಮಾಡಬೇಕು. ಮಾರನೆಯ ದಿನ ಪುನಃ ವಿರೇಚನೌಷಧಿಯನ್ನು ಕೊಡಬೇಕು. ರೋಗಿಯ ವಯಸ್ಸು, ದೇಹದ ಬಲ, ಪ್ರಕೃತಿ, ಮುಂತಾದುವುಗಳಿಗನುಗುಣವಾಗಿ ಔಷಧಿಗಳ ಪ್ರಮಾಣವನ್ನು ವೈದ್ಯರೇ ನಿರ್ಧರಿಸುತ್ತಾರೆ. ಬಾಲಕರು, ವೃದ್ಧರು, ಗರ್ಭಿಣಿಯರಿಗೆ, ರಕ್ತ ಸ್ರಾವವಗುತ್ತಿರುವವರಿಗೆ, ಮದ್ಯಪಾನ ಮಾಡಿದವರಿಗೆ, ಬಾಣಂತಿಯರಿಗೆ, ಸ್ನೇಹ, ಸ್ವೇದ ನಿಡದಿರುವವರಿಗೆ ವಿರೇಚನವನ್ನು ಮಾಡಿಸಬಾರದು.

ದುರ್ಬಲರಿಗೆ, ಅಲ್ಪ ಪ್ರಮಾಣದಲ್ಲಿರುವ ದೋಷಗಳನ್ನು ಮೃದು ದ್ರವ್ಯಗಳಿಂದಲೇ ಹೊರಕ್ಕೆ ಹೊರಡಿಸಿ, ಸಂಶಮನಗೊಳಿಸಬೇಕು. ಕ್ರೂರಕೋಷ್ಠವುಳ್ಳವರಿಗೆ, ಅಗ್ನಿಮಾಂದ್ಯವುಳ್ಳವರಿಗೆ ಯವಕ್ಷಾರ, ಸೈಂಧವ ಲವಣ ಮತ್ತು ತುಪ್ಪಗಳನ್ನು ಮಿಶ್ರಮಾಡಿ ಅಗ್ನಿ ವೃದ್ಧಿಯಾಗಿ ಕಫ ಮತ್ತು ವಾತ ದೋಷಗಳು ನಿವಾರಣೆಯಾದ ಮೇಲೆ ವಿರೇಚನೌಷಧಿಯನ್ನು ನೀಡಿ ಚಿಕಿತ್ಸಿಸಬೇಕು.

ಸರಿಯಾದ ಕ್ರಮದಲ್ಲಿ ಶೋಧನೌಷಧಿಗಳನ್ನು ಪ್ರಯೋಗಿಸಿದರೆ ಬುದ್ಧಿಯೂ ವಿಕಾಸಗೊಳ್ಳುತ್ತದೆ, ಸ್ಮರಣಶಕ್ತಿ ಹೆಚ್ಚುತ್ತದೆ. ನೇತ್ರ ಕರ್ಣ, ಮೂಗು ಮುಂತಾದ ಇಂದ್ರಿಯಗಳು ತೀಕ್ಷ್ಣವಾಗುತ್ತವೆ. ಧಾತುಗಳು ಸ್ಥಿರವಾಗುತ್ತದೆ, ಮುಪ್ಪು ದೂರವಾಗುತ್ತದೆ ಮತ್ತು ಯೌವ್ವನ ನಳ ನಳಿಸುತ್ತದೆ.

**ಬಸ್ತಿ ಚಿಕಿತ್ಸೆ;** ಬಸ್ತಿಯಂತ್ರದಿಂದ ಔಷಧ ದ್ರವ್ಯಗಳನ್ನು ಗುದದ್ವಾರಕ್ಕೆ ಹಾಯಿಸಿ, ಶರೀರದ ಮಲಗಳನ್ನು ಹೊರಹಾಕಿಸುವ ವಿಧಾನಕ್ಕೆ ಬಸ್ತಿ ಚಿಕಿತ್ಸೆ ಎನ್ನುತ್ತಾರೆ, ವಾತಾಧಿಕ ದೋಷಗಳಲ್ಲಿ- ಅಂದರೆ ವಾತಪಿತ್ತ, ವಾತಕಫ ಮತ್ತು ವಾತವೇ ಅಧಿಕವಾಗಿರುವಾಗ ಬಸ್ತಿ ಚಿಕಿತ್ಸೆ ಉತ್ತಮವಾದುದು. ಎಲ್ಲಾ ಚಿಕಿತ್ಸೆಗಳಲ್ಲಿಯೂ ಬಸ್ತಿ ಚಿಕಿತ್ಸೆ ಪ್ರಮುಖವಾದದ್ದು. ಇದರಲ್ಲಿ ನಿರೂಹ,

ಅನುವಾಸನ ಮತ್ತು ಉತ್ತರ ಬಸ್ತಿ ಎಂದು ಮೂರು ಪ್ರಕಾರವಾಗಿ ವಿಂಗಡಿಸಲ್ಪಟ್ಟಿದೆ.

ಗುದದ್ವಾರದಿಂದ ಪ್ರಯೋಗಿಸುವ (ಎನಿಮಾ) ಬಸ್ತಿಗಳಲ್ಲಿ ನಿರೂಹ (ರೂಕ್ಷ ಬಸ್ತಿ) ಮತ್ತು ಅನುವಾಸನ ಬಸ್ತಿ (ಸ್ನೇಹ ಬಸ್ತಿ)ಗಳೆಂದೂ, ಯೋನಿ,ಶಿಶ್ನದ್ವಾರಗಳಮೂಲಕ ಪ್ರಯೋಗಿಸುವ ಬಸ್ತಿಗೆ ಉತ್ತರ ಬಸ್ತಿಯೆಂದೂ ಕರೆಯಲಾಗಿದೆ. ಬಸ್ತಿ ಚಿಕಿತ್ಸೆಯನ್ನು ಅತ್ಯುತ್ತಮ ಶೋಧನ ಚಿಕಿತ್ಸೆಯೆಂದೂ ಕರೆಯಲಾಗಿದೆ. ವಿವಿಧ

ಔಷಧಿ ದ್ರವ್ಯಗಳನ್ನು ಸೇರಿಸಿ ತಯಾರಿಸಿದ ಬಸ್ತಿಯು ದೇಹದ ದೋಷಗಳ ಸಂಶೋಧನ ಮಾಡಿ ಶಮನಗೊಳಿಸುತ್ತದೆ. ಸರಿಯಾಗಿ ಪ್ರಯೋಗಿಸಿದ ಬಸ್ತಿಯು ಶುಕ್ರ ಕ್ಷೀಣನಾದವನಿಗೆ ವಾಜೀಕರಶಕ್ತಿ ಅಂದರೆ ಲೈಂಗಿಕ ಶಕ್ತಿವೃದ್ಧಿಸಿ, ವೀರ್ಯಾಣುಗಳನ್ನು ಆರೋಗ್ಯಕರವಾಗಿ ಮಾಡುತ್ತದೆ. ತೆಳ್ಳಗಿರುವವರನ್ನು ದಪ್ಪನಾಗಿ ಮಾಡುತ್ತದೆ, ದಪ್ಪಗಿರುವವರನ್ನು ತೆಳ್ಳಗಾಗಿಸುತ್ತದೆ. ಚರ್ಮದ ನೆರಿಗೆಗಳನ್ನು(ಸುಕ್ಕು) ದೂರವಾಗಿಸುತ್ತದೆ, ವಯಸ್ಸಾಗುವುದನ್ನು ತಡೆಹಿಡಿಯುತ್ತದೆ. ವರ್ಣ, ಬಲ, ಆರೋಗ್ಯವನ್ನು, ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ.

ಬಸ್ತಿ ಚಿಕಿತ್ಸೆಯು ಜ್ವರ, ಅತಿಸಾರ, ನೆಗಡಿ, ಶಿರೋರೋಗ, ಅರ್ದಿತ(ಮುಖದ ಪಾರ್ಶ್ವವಾಯು), ಪಕ್ಷಾಘಾತ, ಸರ್ವಾಂಗ ರೋಗ, ಆಧ್ಮಾನ, ವೃಷಣ ವೃದ್ಧಿ, ಲೈಂಗಿಕ ರೋಗಗಳು, ಮೂತ್ರಕೋಶದ ತೊಂದರೆ, ಶುಕ್ರನಾಶ, ಆರ್ತವನಾಶ, ಅರ್ಶಸ್ಸು, ಅಶ್ಮರೀ, ಮೂಢಗರ್ಭ ಮುಂತಾದುವುಗಳಲ್ಲಿ ಅತ್ಯಂತ ಉಪಯುಕ್ತವಾದುದು.

**ಬಸ್ತಿ ಚೀಲ:** ಜಿಂಕೆಯ, ಆಡಿನ, ಹಂದಿಯ, ಗೋವಿನ ಮೂತ್ರಕೋಶದ್ದಾಗಿರಬೇಕು. ಇವು ಇಲ್ಲದಿದ್ದಾಗ ಚರ್ಮದಿಂದ ತಯಾರಿಸಿದ ಬಸ್ತಿ ಚೀಲವನ್ನು ಉಪಯೋಗಿಸ ಬಹುದು.

**ಬಸ್ತಿ ನಳಿಕೆ:** ಸ್ವರ್ಣ, ಮುಂತಾದ ಲೋಹಗಳಿಂದ, ಮರದ ತಿರುಳಿನಿಂದ, ಬಿದಿರಿನಿಂದ, ದಂತಗಳಿಂದ, ಸ್ಫಟಿಕದ ಮಣಿಗಳು- ಇವುಗಳಲ್ಲಿ ಒಂದರಿಂದ ನಳಿಕೆಯನ್ನು ಮಾಡಿರ ಬೇಕು. ಒಂದು ವರ್ಷದಿಂದ ಆರು ವರ್ಷದವರೆಗೆ- 6 ಅಂಗುಲ, ಹನ್ನೆರಡುವರ್ಷದ ವರೆಗೆ- 12 ಅಂಗುಲ ಮತ್ತು ಇದಕ್ಕಿಂತಾ ಮೇಲ್ಪಟ್ಟ ವಯೋಮಾನದವರಿಗೆ-12 ಅಂಗುಲ ಉದ್ದವಿರಬೇಕು. ಇದರ ರಂಧ್ರ ಹೆಸರು ಕಾಳಿನ ಗಾತ್ರ, ಪುಟಾಣಿ ಕಡಲೆ ಗಾತ್ರ, ಅಥವಾ ತೊಗರಿ ಬೀಜದ ಗಾತ್ರ-ಅಂದರಾ ವಯೋಮಾನದವರಿಗೆ ತಕ್ಕಂತಿರಬೇಕು, ನುಣುಪಾದ ಈ ನಳಿಕೆಯು ಹಸುವಿನ ಬಾಲದಂತಿದ್ದು, ಬುಡದಲ್ಲಿ ರೋಗಿಯ ಹೆಬ್ಬೆರಳಿನಷ್ಟು ಮತ್ತು ತುದಿಯಲ್ಲಿ ಕಿರು ಬೆರಳಿನಷ್ಟು ತೋರವಾಗಿದ್ದು, ಮುಖದಲ್ಲಿ ಗುಳಿಗೆಯಂತೆ ಗೋಲಾಕಾರವಾಗಿರಬೇಕೆಂದು ವಿವರಣೆದೊರಕುತ್ತದೆ.

**ಬಸ್ತಿ ನೀಡುವ ವಿಧಾನ:** ಬಸಿಯನ್ನು ತೆಗೆದುಕೊಳ್ಳುವವರು, ಸ್ನೇಹನ, ಸ್ವೇದನಗಳಿಂದ ಸ್ನಿಗ್ಧರಾಗಿ, ಮಲ ಮೂತ್ರಗಳ ವಿಸರ್ಜನೆಯ ನಂತರ ಹಸಿವು ಇಲ್ಲದಿರುವ ಸಮಯದಲ್ಲಿ, ಅತೀ ಎತ್ತರವಲ್ಲದ ಮಂಚದ ಮೇಲೆ, ಎಡಗಾಲನ್ನು ಚಾಚಿ, ಬಲಗಾಲನ್ನು ಮಡಿಚಿಕೊಂಡು, ಎಡ ಮಗ್ಗುಲಾಗಿ, ತನ್ನ ಭುಜವನ್ನೇ ದಿಂಬಿನಂತೆ ಮಾಡಿಕೊಂದು ಮಲಗಿಕೊಳ್ಳ ಬೇಕು. ಬಸ್ತಿಯಂತ್ರಕ್ಕೆ ಸ್ನೇಹವನ್ನೋ, ಕಷಾಯವನ್ನೋ, ತುಂಬಿಸಿ, ಎಡಗೈಲಿ ಹಿಡಿದು ನಳಿಗೆಯ ತುದಿಯ ಬತ್ತಿಯನ್ನು ತೆಗೆದು, ಹೆಬ್ಬೆರಳಿನ ಮಧ್ಯದಿಂದ ಮುಚ್ಚಿ, ಗುದದ್ವಾರ ಮತ್ತು ನಳಿಕೆಯಭಾಗಕ್ಕೆ ಎಣ್ಣೆಯನ್ನು ಸವರಿ, ನಳಿಕೆಯ ಸ್ವಲ್ಪ ಭಾಗ ಒಳಗೆ ಸೇರುವ ಹಾಗೆ ಗುದದೊಳಕ್ಕೆ ಅದನ್ನು ಮೃದುವಾಗಿ ಮೆಲ್ಲಗೆ ಚಲಿಸಬೇಕು. ಬಸ್ತಿ ಚೀಲವನ್ನು ಒಂದೇ ಬಾರಿಗೆ ಬಲಗೈಯಿಂದ ಒತ್ತಬೇಕು, ನಂತರ ಔಷಧದ್ರವ್ಯವೆಲ್ಲಾ ಒಳ ಹೋದ ನಂತರ ನಳಿಗೆಯನ್ನು ಹಾಗೆಯೇ, ಮೆಲ್ಲಗೆ ಹೊರಕ್ಕೆ ಎಳೆದುತೆಗೆಯ ಬೇಕು. ನಂತರ ಕೆಲ ಸಮಯ ಇಡೀ ಶರೀರವನ್ನು ಸಡಿಲಗೊಳಿಸಿಕೊಂಡು ಅಂಗಾತ ಮಲಗಲು ಹೇಳುವುದರಿಂದ, ಔಷಧಿಯ ಸಾರವು ದೇಹವನ್ನು ಸೇರುತ್ತದೆ.

**ಹೃದಯಾಘಾತ ಭಯವೇಕೆ- ಆಯುರ್ವೇದದ ಸಮಗ್ರ ಪರಿಹಾರ**



- ಹೃದಯ ಸಂಬಂಧ ರಕ್ತನಾಳಗಳ (Coronary artery) ಮುಚ್ಚುವಿಕೆಯಿಂದ (Blockage) ಉಂಟಾಗುವ ರೋಗಕ್ಕೆ ಸಂಪೂರ್ಣ ಆಯುರ್ವೇದೀಯ ಚಿಕಿತ್ಸೆ.
- ಕೇವಲ 3-5 ತಿಂಗಳ ಚಿಕಿತ್ಸೆಯಿಂದ ರೋಗದ ನಿಗ್ರಹ ಹಾಗೂ ಉಪಶಮನ.
- 10,000 ಕ್ಕೂ ಅಧಿಕ ರೋಗಿಗಳು ಹೃದ್ರೋಗ ಶಸ್ತ್ರಚಿಕಿತ್ಸೆಯಿಂದ(Angioplasty/ By pass) ಮುಕ್ತಿಹೊಂದಿ ಉತ್ತಮ ಜೀವನ ನಡೆಸುತ್ತಿದ್ದಾರೆ.
- ಯೋಗ, ಆಹಾರ, ಧ್ಯಾನಾದಿಗಳ ಸಲಹೆ(ಚಿಕಿತ್ಸೆ).
- ಪ್ರತಿ ತಿಂಗಳು ಎರಡನೇಯ ರವಿವಾರದಂದು ವಿಶೇಷ ಚಿಕಿತ್ಸಾ ಶಿಬಿರವನ್ನು ನಡೆಸಿಕೊಡಲಾಗುತ್ತದೆ.

ಸ್ಥಳ: ಶ್ರೀ ಧನ್ವಂತರಿ
ಹೊಸೂರು ಕ್ರಾಸ, ಹುಬ್ಬಳ್ಳಿ-20
ಫೋನ್: 9880016586, 0836-2374181.

ಡಾ. ವಿನೋದ.ಎ.ಶೇಟ್ M.D.
ಆಯುರ್ವೇದ ಹೃದ್ರೋಗ ತಜ್ಞರು

ನಿರೂಹ ಬಸ್ತಿಗೆ ಬಳಸುವ ದ್ರವ್ಯಗಳು: ಮಗ್ಗಾರೆ ಕಾಯಿ, ಕೊಡಸಿಗೆ, ಚಂಗಲ ಕೋಷ್ಟ, ಅತಿಮಧುರ, ಬಜೆ, ದಶಮೂಲ, ದೇವದಾರು, ರಾಸ್ಮೆ, ಯವಧಾನ್ಯ, ಸಬ್ಬಸಿಗೆ ಬೀಜ, ಹುರುಳಿ, ಜೇನುತುಪ್ಪ, ಸೈಂಧವ, ತಿಗಡೆ ಬೇರು.

ನಿರೂಹ ಬಸ್ತಿಯು ಶೋಧನ ಮತ್ತು ಲೇಖನ ಗುಣವುಳ್ಳದ್ದು. ಅನುವಾಸನ ಬಸ್ತಿ ಬೃಂಹಣವಾದುದು. ದೇಹದ ಎಲ್ಲಾ ಕಲ್ಮಶಗಳನ್ನು ನಿರೂಹದಿಂದ ತೆಗೆದ ನಂತರ, ಅಂದರೆ ಶುದ್ಧಮಾರ್ಗದಲ್ಲಿ ಸ್ನೇಹ ಬಸ್ತಿ ನಿಡುವುದರಿಂದ ಚೆನ್ನಾಗಿ ಎಲ್ಲದರಲ್ಲಿ ಸೇರಿ ಕೊಳ್ಳುತ್ತದೆ. ಶರೀರದ ಎಲ್ಲಾ ದೋಷಗಳನ್ನೂ ಪರಿಹರಿಸಿ, ಜೀವ ತುಂಬುತ್ತದೆ, ಆದುದರಿಂದ ನಿರೂಹ ಬಸ್ತಿಯ ನಂತರ ಅನುವಾಸನ ಬಸ್ತಿಯನ್ನು ಕೊಡುತ್ತಾರೆ. ವಮನ ಕರ್ಮದ ಹತ್ತು ಹದಿನೈದು ದಿನದ ನಂತರ ಅನುವಾಸನಬಸ್ತಿ ನೀಡಬೇಕು.

ಮಾತ್ರಾ ಬಸ್ತಿ: ಇದನ್ನು ಕೆಲಸದಿಂದ, ವ್ಯಾಯಾಮದಿಂದ, ಭಾರಹೊರುವುದರಿಂದ, ನಡಿಗೆಯಿಂದ, ಮದ್ಯಪಾನದಿಂದ ದಣಿದವರಿಗೆ ಮತ್ತು ದುರ್ಬಲರಿಗೆ ನೀಡಬೇಕು. ಸ್ನೇಹಪಾನಕ್ಕೆ ನೀಡುವ ಪ್ರಮಾಣಕ್ಕಿಂತಾ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಸ್ನೇಹವನ್ನು ಉಪಯೋಗಿಸಿ ಅನುವಾಸನಾ ಬಸ್ತಿಯನ್ನು ನೀಡಿದರೆ ಅದು- ಮಾತ್ರಾಬಸ್ತಿ ಎನಿಸಿಕೊಳ್ಳುತ್ತದೆ. ಇದು ಬಲಕರ, ಸುಖಕರ, ಮಲವಿಸರ್ಜನೆ ಸುಖಕರವಾಗಿರುವಂತೆ ಮಾಡುತ್ತದೆ, ಪುಷ್ಟಿಕರ ಮತ್ತು ವಾತರೋಗವನ್ನು ಹೋಗಲಾಡಿಸುತ್ತದೆ, ಮುಪ್ಪು ಬಾರದಂತೆ ವಯಸ್ಸನ್ನು ಸ್ಥಾಪಿಸುವುದರಿಂದ - ಆಸ್ಥಾಪನಾ ಎಂತಲೂ ಕರೆಯುತ್ತಾರೆ.

ಬಸ್ತಿ ಚಿಕಿತ್ಸೆಯ ನಂತರ ಹೆಚ್ಚು ಆಯಾಸ ಮಾಡಿಕೊಳ್ಳದೆ, ಹೆಚ್ಚು ಮಾತನಾಡದೇ, ಆಹಾರ ವಿಹಾರಗಳ ಪಥ್ಯವನ್ನು ಮಾಡಬೇಕು. ಬಸ್ತಿಯ ಮೂಲಕ ನೀಡಿದ ಸ್ನೇಹವು ವಾಯು, ಮಲವನ್ನು ಸೇರಿಕೊಂಡು ತಕ್ಷಣವೇ ಹೊರಗೆ ಬಂದರೆ ಅಂಥವನಿಗೆ ಅನುವಸನಾ ಚೆನ್ನಾಗಿ ಆಗಿದೆಯೆಂದು ತಿಳಿಯ ಬೇಕು. ಸಂಜೆಯ ಸಮಯ ಸ್ನೇಹವು ಹೊರಗೆ ಬಂದು, ತಿಂದ ಆಹಾರ ಜೀರ್ಣವಾಗಿ ಹಸಿವು ಉಂಟಾಗದಿದ್ದರೆ, ಲಘುವಾದ ಭೋಜನವನ್ನು ಕೊಡಬಹುದು. ಬಸ್ತಿ ತೆಗೆದುಕೊಂಡಮಾರನೆಯ ದಿನ ಕೊತ್ತುಂಬರೀ ಬೀಜ, ಶುಂಠಿ ಹಾಕಿ ಕಾಯಿಸಿದ ಬಿಸಿನೀರನ್ನು ಕೊಟ್ಟರೆ, ಅಗ್ನಿಯು ಚುರುಕಾಗಿ, ಆಹಾರ ಸೇವಿಸುವ ಬಯಕೆಯಾಗುತ್ತದೆ ಸ್ನೇಹ ಬಸ್ತಿಯನ್ನು- 6-7-8-ಅಥವಾ 9 ಬಾರಿ ನೀಡಬಹುದು. ಮಧ್ಯದಲ್ಲಿ ನಿರೂಹ ಬಸ್ತಿ ನೀಡಬೇಕು. ನಿರೂಹವು ಸರಿಯಾಗಿ ಸಫಲವಾದ ಲಕ್ಷಣ ಕಂಡುಬರದೇ, ಅದನ್ನು ನಿಲ್ಲಿಸಬಾರದು.

**4.ಶಿರೋ ವಿರೇಚನ (ನಸ್ಯ):**

ಮೂಗಿನ ರಂಧ್ರದ ಮೂಲಕ ಔಷಧ ಅಥವಾ ಔಷಧದಿಂದ ತಯಾರಿಸಿದ ಸ್ನೇಹವನ್ನು ನೀಡುವ ಚಿಕಿತ್ಸೆ- ಶಿರೋ ವಿರೇಚನ (ನಸ್ಯ ) ಎನಿಸಿಕೊಳ್ಳುತ್ತದೆ. ಸ್ನೇಹ ನಸ್ಯದಲ್ಲಿ ಮರ್ಷ ಮತ್ತು ಪ್ರತಿಮರ್ಷ ವೆಂದು ಎರಡು ವಿಧ . ತೀಕ್ಷ್ಣವಾದ

ಕಲ್ಕಾದಿಗಳಿದ ತಯಾರಿಸಿದ ಶಿರೋವಿರೇಚನಕ್ಕೆ ಅವಪೀಡನ - ಎಂತಲೂ ಹೆಸರು. ಧ್ಯಾನದಲ್ಲಿ 6 ಅಂಗುಲ ಉದ್ದವಾದ ಎರಡು ಮುಖಗಳುಳ್ಳ ನಳಿಕೆಯಲ್ಲಿ ಔಷಧವನ್ನು ತುಂಬಿಸಿ ಆ ಪುಡಿಂಯನ್ನು ಬಾಯಿಯಿಂದ ಗಾಳಿ ಊದಿ ಉಪಯೋಗಿಸುವುದಾಗಿರುತ್ತದೆ.

ಸ್ನೇಹನ ನಸ್ಯ: ಹಲ್ಲು ಉದುರುವುದು (ದಂತ ಪತನ), ಮೀಸೆ, ಕೂದಲು ಉದುರುವುದು (ಕೇಶ ಪತನ ), ಕಿವಿಶೂಲೆ (ಕರ್ಣ ಶೂಲ), ಕಿವಿಯಲ್ಲಿ ಶಬ್ಧ ಕೇಳುವುದು (ಕರ್ಣನಾದ), ಸ್ವರ ಒಡೆಯುವುದು (ಸ್ವರ ಭಂಗ), ನಾಸಿಕಾ ರೋಗ, ಬಾಯಿಹುಣ್ಣು, ಯುವ ವಯಸ್ಸಿನಲ್ಲಿಯೇ ಚರ್ಮದಲ್ಲಿ ನೆರಿಗೆ ಬೀಳುವುದು- ಮುಂತಾದವುಗಳು ಶಿರಸ್ಸಿನಲ್ಲಿ ವಾತದೋಷವು ಪ್ರಕುಪಿತವಾದ ಲಕ್ಷಣಗಳು. ಇಂತಹವರಿಗೆ ವಾತ ಪಿತ್ತ ಹರ ದ್ರವ್ಯಗಳಿಂದ ತಯಾರಿಸಲ್ಪಟ್ಟ ಸ್ನೇಹದಿಂದ ನಸ್ಯಕರ್ಮ ನೀಡಬೇಕಾಗುತ್ತದೆ.

**ಶಿರೋ ವಿರೇಚನ ನಸ್ಯ :** ಶಿರಸ್ಸಿನಲ್ಲಿ ಕಫ ದೋಷ ಪ್ರಕುಪಿತವಾಗಿ- ಅರುಚಿ, ಅರ್ಧಶಿರೋ ಶೂಲ, ಶಿರೋ ಗುರುತ್ವ, ನೆಗಡಿ, ಅಪಸ್ಮಾರ, ವಾಸನೆ ತಿಳಿಯದಿರುವುದು ಮುಂತಾದವು ಕಾಣಿಸಿಕೊಳ್ಳುತ್ತವೆ. ಇಂತಹವರಿಗೆ ವಿರೇಚನ ನಸ್ಯವು ಪ್ರಯೋಜನಕಾರಿ.

**ಶಿರೋ ವಿರೇಚನ ವಿಧಾನ:** ಶಿರೋ ವಿರೇಚನಕ್ಕೆ ಮೊದಲು ರೋಗಿಯ ಬಾಯನ್ನು ಸ್ವಚ್ಚಗೊಳಿಸಿ, ಮಲಗಿಸಿ, ಕಪಾಲ, ಹಣೆಪ್ರದೇಶಗಳನ್ನು ತೈಲದಿಂದ ಮಸಾಜ್ ಮಾಡಿ, ಬಿಸಿ ಶಾಖ ನೀಡಬೇಕು. ಬೆವರಿದ ನಂತರ ಮುಖವನ್ನು ಸ್ವಲ್ಪ ಮುಂದಕ್ಕೆ ಬಾಗಿರುವಂತೆ ಮಲಗಿಸಿ, ಕಣ್ಣನ್ನು ವಸ್ತ್ರ ಅಥವಾ ಹತ್ತಿಯಿಂದ ಮುಚ್ಚಿ, ವೈದ್ಯನು ತನ್ನ ಎಡಗೈ ಹೆಬ್ಬೆರಳಿನ ತುದಿಯಿಂದ ರೋಗಿಯ ಮೂಗಿನ ತುದಿಯನ್ನು ಮೇಲಕ್ಕೆ ಎತ್ತಿ, ಹತ್ತಿಯಲ್ಲಿ ಅದ್ದಿದ ತೈಲವನ್ನು ನಿಧಾನವಾಗಿ ಮೊದಲು ರೋಗಿಯ ಬಲಮೂಗಿನೊಳಗೆ ಹಾಕಬೇಕು. ಈ ಸಂದರ್ಭದಲ್ಲಿ ರೋಗಿಯ ತಲೆಯನ್ನು ಅಲ್ಲಾಡಿಸುವುದು, ಕೋಪಗೊಳ್ಳುವುದು, ಜೋರಾಗಿ ಮಾತನಾಡುವುದು, ಜೋರಾಗಿ ಉಸಿರಾಡುವುದು, ನಗುವುದು-ಮುಂತಾದುವನ್ನು ಮಾಡಬಾರದು. ಪಾದಗಳು ಈ ಸಂದರ್ಭದಲ್ಲಿ ಎತ್ತರವಾಗಿರುವಂತೆ ನೋಡಿಕೊಳ್ಳಬೇಕು. ಎರಡೂ ಮೂಗಿನ ಹೊಳ್ಳೆಗಳಿಗೆ ಪರ್ಯಾಯವಾಗಿ ಔಷಧಿಯನ್ನು ಹಾಕಬೇಕು.

ಮೂಗಿಗೆ ಹಾಕಿದ ಔಷಧಿ ತೈಲವು ಗಂಟಲಿಗೆ ಬಂದ ನಂತರ, ಅದನ್ನು ಹೊರಕ್ಕೆ ಉಗುಳಬೇಕು, ಹಾಗೆ ಮಾಡದಿದ್ದಲ್ಲಿ

ಕಫ ದೋಷವು ಹೆಚ್ಚುವ ಸಂದರ್ಭವಿರುತ್ತದೆ. ಚಿಕಿತ್ಸಾ ಸಂದರ್ಭದಲ್ಲಿ ರೋಗಿ-ಧೂಳು, ಹೊಗೆ, ಬಿಸಿಲು, ತಲೆಸ್ನಾನ, ಅತೀ ಪ್ರಯಾಣ,ಕೋಪ ಮುಂತಾದುಗಳಿಂದ ದೂರವಿರಬೇಕು.

ಶಿರೋ ವಿರೇಚನದಿಂದ ಶಿರಸ್ಸು ಹಗುರವಾಗುವುದು, ಉತ್ತಮ ನಿದ್ರೆ ಬಂದು, ರೋಗ ಶಮನ, ಇಂದ್ರಿಯಶುದ್ಧಿ, ಮನೋಲ್ಲಾಸ ಇವೆಲ್ಲಾ ಉಂಟಾಗುತ್ತದೆ. ಇದರಿಂದ ಶಿರೋಭಾಗದ ರೋಗಗಳು ಶಮನವಾಗುವುದಲ್ಲದೇ, ಇಂದ್ರಿಯಗಳ ಶುದ್ಧಿ, ಮನೋಹಿತ ಉಂಟಾಗುತ್ತದೆ. ಚರ್ಮದಲ್ಲಿ ಸುಕ್ಕು ಕಟ್ಟುವುದು, ಕೂದಲು ಉದುರುವುದು, ಮುಖದಲ್ಲಿ ಬಂಗು ಉಂಟಾಗುವುದಿಲ್ಲ.

ಏಳು ವರ್ಷದೊಳಗಿನವರಿಗೆ ಮತ್ತು 80 ವರ್ಷಮೀರಿದವರಿಗೆ ಶಿರೋವಿರೇಚವನ್ನು ನೀಡಬಾರದು.

**ರಕ್ತ ಮೋಕ್ಷಣ:-** ಕುಪಿತವಾದ ದೋಷಪೂರಿತ ರಕ್ತವನ್ನು ಹೊರಕ್ಕೆ ತೆಗೆಯುವುದೇ ರಕ್ತಮೋಕ್ಷಣ. ವಾತ ದೋಷದಿಂದ ದೂಷಿತ ವಾದ ರಕ್ತವನ್ನು ತೆಗೆಯುವುದಕ್ಕೆ-ಸ್ನಿಗ್ಧ ಗುಣವಿರುವ ಗೋಶೃಂಗ ( ಹಸುವಿನ ಕೋಡು ), ಪಿತ್ತದಿಂದ ದೂಷಿತವಾದ ರಕ್ತಕ್ಕೆ- ರೂಕ್ಷವಾದ ಸೋರೇಕಾಯಿ ಬಳಸಬೇಕೆಂದು - ಸುಶ್ರುತರು ಅಭಿಮತ. ರಕ್ತತೆಗೆಯ ಬೇಕಾದ ಜಾಗದಲ್ಲಿ ಗಾಯ ಮಾಡಿ, ತೆಳ್ಳಗಿನ ವಸ್ತ್ರದಿಂದ ಮುಚ್ಚಿರುವ ಕೊಂಬನ್ನು ಉಪಯೋಗಿಸಿ ರಕ್ತ ತೆಗೆಯ ಬೇಕು. ಸೋರೇಕಾಯನ್ನು ಒಳಗೆ ದೀಪವಿಟ್ಟು ಬಳಸಬೇಕಾಗುತ್ತದೆ.

ಜಿಗಣೆಗಳಿಂದ ರಕ್ತವನ್ನು ತೆಗೆಯುವುದನ್ನು ಜಲೌಕಾವಚರಣ- ಎಂದು ಕರೆಯುವರು.


ಜಿಗಣೆಗಳು:- ವಿಷಜಾತಿಯವು-ಅಶುದ್ಧನೀರಿನಲ್ಲೂ, ನಿರ್ವಿಷವಾದವು- ಶುದ್ಧನೀರಿನಲ್ಲೂ ವಾಸಿಸುತ್ತವೆ. ಒದ್ದೆ ಚರ್ಮ ಬಳಸಿ ಹಿಡಿದ ಜಿಗಣೆಗಳನ್ನು ದೊಡ್ಡ ಪಾತ್ರೆಯಲ್ಲಿ, ಸರೋವರ ಅಥವಾ ಕೆರೆಯನೀರು ಮತ್ತು ಕೆಸರನ್ನು ಹಾಕಿ ಅದರಲ್ಲಿ ಸಂಗ್ರಹಿಸಬೇಕು. ಆಹಾರವಾಗಿ ಒಣಗಿದಮಾಂಸ, ನೀರಿನಲ್ಲಿ ಬೆಳೆಯುವ ಗೆಡ್ಡೆಗಳ ಪುಡಿ, ಹುಲ್ಲು, ಎಲೆಗಳನ್ನು ಹಾಕಬೇಕು.

**ಜಲೌಕಾವಚರಣ (ಜಿಗಣೆಗಳಿಂದ ರಕ್ತ ಮೋಕ್ಷಣ ಮಾಡಿಸುವ ವಿಧಾನ):** ಚರ್ಮ ರೋಗಗಳಲ್ಲಿ ದೀರ್ಘಕಾಲೀನ ಗಾಯ ಅಥವಾ ವ್ರಣದಲ್ಲಿ, ಗ್ಯಾಂಗ್ರೀನ್ ಮುಂತಾದುವುಗಳಲ್ಲಿ ಈ ಚಿಕಿತ್ಸೆಯನ್ನು ನೀಡಬೇಕು. ಮೊದಲು ಜಿಗಣೆಗಳ ದೇಹಕ್ಕೆ- ಅರಿಸಿನ ಮತ್ತು ಸಾಸುವೆಪುಡಿಯನ್ನು ಸೇರಿಸಿದ ನೀರನ್ನು ಹಚ್ಚಿ- ನೀರು ತುಂಬಿದ ಪಾತ್ರೆಯಲ್ಲಿ ಸ್ವಲ್ಪ ಸಮಯ ವಿಡಬೇಕು. ಹತ್ತಿ ಇಲ್ಲವೇ ಒದ್ದೆಯಾಗಿರುವ ಹತ್ತಿ ಬಟ್ಟೆಯಿಂದ ಹಿಡಿದುಕೊಂಡು ಜಿಗಣೆಗಳ ಬಾಯನ್ನು ವ್ರಣವಿರುವ ಜಾಗಕ್ಕೆ ಹಚ್ಚಬೇಕು. ಅವು ತಕ್ಷಣ ಹಿಡಿಯದಿದ್ದರೆ ಒಂದುಹನಿ ಹಾಲು ಅಥವಾ ರಕ್ತವನ್ನು ಹಾಕಿದರೆ, ಅದು ಕುದುರೆಗೊರಸಿನಂತೆ ಬಾಯಿ ಬಿಟ್ಟುದೇಹವನ್ನು ಎತ್ತಿ ಹಿಡಿದುಕೊಳ್ಳುತ್ತದೆ. ಆಗ ಅದು ರಕ್ತ ಹೀರುತ್ತಿದೆ ಎಂದು ತಿಳಿದು, ಒದ್ದೆ ಬಟ್ಟೆಯಿಂದ ಅದನ್ನು ಮುಚ್ಚಿ ಮೇಲೆ ನೀರು ಬಿಡಬೇಕು.

ವ್ರಣದಲ್ಲಿ ತುರಿಕೆಯಾಗುವುದು ಮತ್ತು ನೋವು ಕಂಡು ಬಂದರೆ ಜಿಗಣೆಯು ಶುದ್ಧವಾದ ರಕ್ತ ಹೀರುತ್ತಿದೆಯೆಂದು ತಿಳಿದು ಅದನ್ನು ಬಿಡಿಸಬೇಕು. ಸಾಮಾನ್ಯವಾಗಿ ರಕ್ತದ ವಾಸನೆಯನ್ನು ಹಿಡಿದ ನಂತರ ಬಿಡುವುದಿಲ್ಲ, ಆಗ ಅದರ ಮುಖಕ್ಕೆ ಸೈಂಧವ ಲವಣ ಪುಡಿಯನ್ನು ಹಾಕಿ ಬಿಡಿಸಿ,ಅದರ ಶರೀರಕ್ಕೆ ಅಕ್ಕಿಹಿಟ್ಟು ಲೇಪಿಸಿ, ಸೈಂಧವಲವಣ, ತೈಲ ಹಚ್ಚಿ ವಾಂತಿ ಮಾಡಿಸ ಬೇಕು. ಸರಿಯಾಗಿ ವಾಂತಿಮಾಡಿಸಿ ಮತ್ತೆ ನೀರಿನಲ್ಲಿ ಬಿಡಬೇಕು. ಜಿಗಣೆಕಚ್ಚಿದ ಜಾಗವನ್ನು-ಗಾಯವನ್ನು- ಜೇನುತುಪ್ಪದಿಂದ ಲೇಪಿಸಿ, ತಣ್ಣೀರು ಚುಮುಕಿಸಬೇಕು. ಗಾಯವನ್ನು ಔಷಧೀಯಲೇಪ ಹಚ್ಚಿ ಬ್ಯಾಂಡೇಜ್ ಮಾಡಬೇಕು.

ಆಧಾರ ಗ್ರಂಥಗಳು- ಸುಶ್ರುತ ಸಂಹಿತ, ಅಷ್ಟಾಂಗ ಹೃದಯ ಸಂಹಿತ.

**ಡಾ॥ ವಸುಂಧರಾ ಭೂಪತಿ**
Ph : 94488 52420



# ಸ್ತ್ರೀಯರಲ್ಲಿ ಮೂತ್ರದ ತೊಂದರೆಗಳು

ವೈದ್ಯೆ. ಶೃತಿ.ವೈ.ಎಂ

ಸ್ತ್ರೀರೋಗ ಚಿಕಿತ್ಸೆಯಲ್ಲಿ ಮೂತ್ರವಹ ಸ್ರೋತಸ್ಸಿನ ತೊಂದರೆಗಳು ಸರ್ವೇಸಾಮಾನ್ಯ. ಕೆಲವು ಮೂತ್ರದ ತೊಂದರೆಗಳು ಸ್ತ್ರೀ ಶರೀರ ರಚನೆಯ ವೈಶಿಷ್ಟ್ಯದಿಂದ ಬಂದವುಗಳಾದರೆ, ಕೆಲವು ಇನ್ನಿತರ ಶಾರೀರಿಕ ಕಾರಣದಿಂದ ಉಂಟಾದವುಗಳು. ಮತ್ತೂ ಕೆಲವು ಕೇವಲ ರೋಗಿಯ ಮಾನಸಿಕ ಒತ್ತಡಗಳಿಂದ ಉಂಟಾದವು ಹಾಗಾಗಿ ಸ್ತ್ರೀಯರ ಮೂತ್ರತೊಂದರೆಗಳ ವಿಶೇಷ ಮೌಲ್ಯಮಾಪನ ಉತ್ತಮ ಚಿಕಿತ್ಸೆಗೆ ಸೋಪಾನ.

**ಸ್ತ್ರೀಯರಲ್ಲಿ ಈ ಕೆಳಕಂಡ ತೊಂದರೆಗಳು ಸಾಮಾನ್ಯ.**

**1) ಮೂತ್ರ ಸಂಧಾರಣೆ (Retention of Urine):**

ಅಶ್ಮರಿಗಳಿಂದಾಗಿ, ಅಪಾನವಾತದ ವೈಗುಣ್ಯದಿಂದಾಗಿ, ಗರ್ಭಕೋಶದ/ ಯೋನಿದ್ವಾರದ ಶಸ್ತ್ರ ಚಿಕಿತ್ಸೆಯಿಂದಾಗಿ, ಗರ್ಭಿಣಿಯರಲ್ಲಿ ದೀರ್ಘಾವಧಿ ಹೆರಿಗೆಯಿಂದಾಗಿ, ಯೋನಿದ್ವಾರ ಗಾಯಗೊಂಡಂತಹ ಸೂತಿಕಾ ಸ್ತ್ರೀಯರಲ್ಲಿ, ನರಮಂಡಲದ ಆಘಾತದಿಂದ ಶ್ರೋಣಿಯಲ್ಲಿ ಬೆಳೆದ ಕ್ಯಾನ್ಸರ್ ಇನ್ನಿತರ ಗೆಡ್ಡೆಗಳಿಂದ ಮೂತ್ರ ಸಂಗವಾಗಬಹುದು. ಕಿಬ್ಬೊಟ್ಟೆ ಯಲ್ಲಿ ಒತ್ತಿದಂತಹ/ ಚುಚ್ಚಿದಂತಹ ನೋವು, ಮಲ ಬದ್ಧತೆ ಮುಂತಾದ ಲಕ್ಷಣಗಳು ಕಾಣುತ್ತವೆ.

**2) ಕೃಚ್ಛ್ರ ಮೂತ್ರ:**

ಮೂತ್ರಿಸುವಾಗ ಮೂತ್ರಧಾರೆಗೆ ತಡೆಯುಂಟಾಗುವುದು. ಮೂತ್ರಧಾರೆಯು ಕಷ್ಟದಿಂದ ಹೊರಬರುವುದು, ಮೂತ್ರಪ್ರಕ್ರಿಯೆ ನೋವಿನಿಂದ ಕೂಡಿರುವುದು. ಇವನ್ನು ಕೃಚ್ಛ್ರಮೂತ್ರವೆನ್ನಬಹುದು.ಅಶ್ಮರಿಯಿಂದ, ಮೂತ್ರವಹ ಸ್ರೋತಸ್ಸಿನ ಅಭಿಘಾತದಿಂದ, ಮಲ ಮೂತ್ರ ವೇಗ ಧಾರಣೆಯಿಂದ, ಸೋಂಕಿನಿಂದ ಮೂತ್ರಿಸಲು ಕಷ್ಟವಾಗುತ್ತದೆ. ಕೆಲವೊಮ್ಮೆ ಮೂತ್ರವು ರಕ್ತದೊಡನೆ ಹೊರಬರುತ್ತದೆ.

ವಿಶೇಷವಾಗಿ ನವ ವಿವಾಹಿತರಲ್ಲಿ-ಸ್ತ್ರೀಯರಲ್ಲಿ-ಲೈಂಗಿಕ ಚಟುವಟಿಕೆಯಿಂದಾಗಿ ಮೂತ್ರದ್ವಾರವು ನಲುಗಿದಂತಾಗಿ ಕೃಚ್ಛ್ರಮೂತ್ರ ಉಂಟಾಗುತ್ತದೆ. ಯೋನಿದ್ವಾರ, ಮೂತ್ರದ್ವಾರಗಳಲ್ಲಿ ನೋವು, ಪದೇ ಪದೇ ಮೂತ್ರಿಸುವ ತವಕ-ಇವುಗಳನ್ನು ಮಧು ಚಂದ್ರಮೇಹ (Honey moon Cystitis) ಎನ್ನಲಾಗಿದೆ.

**3) ಮೂತ್ರ ವೇಗದ ಪುನರಾವರ್ತನೆ-Increased frequency of Micturation.**

ಪಾಯಶಃ ಮೂತ್ರವೇಗದ ಹೆಚ್ಚಳ ಮಧ್ಯವಯಸ್ಕ ಸ್ತ್ರೀಯರ ಅತೀ ಸಾಮಾನ್ಯ ತೊಂದರೆಗಳಲ್ಲಿ ಒಂದು ಅತ್ಯಲ್ಪ ಪ್ರಮಾಣದ ಮೂತ್ರ ಬಾರಿ ಬಾರಿ ಪ್ರವಹಿಸುತ್ತಿದ್ದು ಅದರ ಮೇಲಿನ ಹಿಡಿತ ಕಷ್ಟವಾಗತೊಡಗಿದರೆ ಅದನ್ನು - Increased frequency of Micturation ಎಂದು ಕರೆಯಬಹುದಾಗಿದೆ. ಗರ್ಭಿಣಿಯರಲ್ಲಿ ಮೊದಲ ಮೂರು ತಿಂಗಳು ಹಾಗೂ ಕಡೆಯ ಮೂರು ತಿಂಗಳು ಈ ತೊಂದರೆಯು ಸ್ವಾಭಾವಿಕವೇ, ಅದರೂ ಪ್ರಮೇಹ, ಮೂತ್ರವಹ ಸ್ರೋತಸ್ಸಿನ ಸೋಂಕು/ಉರಿ ಊತಗಳೂ ಈ ತೊಂದರೆಗೆ ಕಾರಣವಾಗಬಹುದು.

**4) ಮೂತ್ರ ಅಸಹಿಷ್ಣುತೆ - Urinary incontinence.**

ಮೂತ್ರದ ವೇಗವಿಲ್ಲದಿದ್ದಾಗಲೂ ಮೂತ್ರವನ್ನು ತಡೆಹಿಡಿಯಲು ಕಷ್ಟವಾಗು ವುದು, ಮೂತ್ರದ ವೇಗವಿದ್ದಾಗ ಮೂತ್ರವು ತಾನೇತಾನಾಗಿ ಹರಿಯುವುದು, ಕೆಮ್ಮು-ನಗು-ಸೀನು-ಬಿಕ್ಕಳಿಕೆ ಮುಂತಾದ ಪ್ರಾಕೃತಿಕ ವೇಗಗಳಿಂದಲೂ ಸಹ ಮೂತ್ರವು ಜಾರುವುದು. ಇದನ್ನುಅಸಹಿಷ್ಣುತೆ ಎನ್ನುತ್ತೇವೆ. ಸಾಧಾರಣವಾಗಿ ಸೂತಿಕಾ ಸ್ತ್ರೀಯರಲ್ಲಿ ಮೊದಲು ಕೆಲವು ದಿನ ಈ ತೊಂದರೆ ಕಾಣಿಸಿಕೊಳ್ಳುತ್ತದೆ. ಋತುಬಂಧ ಹೊಂದಿದ ಸ್ತ್ರೀಯರಲ್ಲಿ, ಗರ್ಭಕೋಶ/ಮೂತ್ರಕೋಶ ಜಾರಿದಂತಹ ಸ್ತ್ರೀಯರಲ್ಲಿಯೂ ಇದು ಸಾಮಾನ್ಯ.

**5) ಮೂತ್ರವಹ ಸ್ರೋತಸ್ಸಿನ ಸೋಂಕು: Urinary track Infection**

ಸ್ತ್ರೀಯರಲ್ಲಿ ಮೂತ್ರದ್ವಾರ, ಯೋನಿದ್ವಾರ, ಗುದದ್ವಾರಗಳು ಒಂದಕ್ಕೊಂದು ತೀರಾ ಹೊಂದಿಕೊಂಡಂತಿದೆಯಾದ್ದರಿಂದ ಜಾಗದಿಂದ ಜಾಗಕ್ಕೆ ಸೋಂಕು ಲಗುಬಗೆಯಿಂದ ಹರಡುತ್ತದೆ. ಶೌಚಕಾರ್ಯದಲ್ಲಾಗುವ ಲೋಪದೋಷಗಳು ಸೋಕಿನ ಬಹು ಮುಖ್ಯ ಕಾರಣ. ಮೂತ್ರ ಪಥದಲ್ಲಿ ದಾಹ, ತಾಪ, ರಾಗ, ತೋದ, ನವೆ, ಪದೇಪದೇಮೂತ್ರಿಸಬೇಕಾದ ಅನಿವಾರ್ಯತೆ, ಜ್ವರ ದೌರ್ಬಲ್ಯ ಉಂಟಾಗುತ್ತದೆ. ಕೆಲವೊಮ್ಮೆ ಮೂತ್ರಮಾರ್ಗದಲ್ಲಿ ರಕ್ತಸ್ರಾವವೂ ಆಗಬಹುದು. ಸೋಂಕಿನಿಂದ ಬಳಲುತ್ತಿರುವ ಪುರುಷರಿಂದ ಸ್ತ್ರೀಯರಿಗೆ ಲೈಂಗಿಕ ಮಾರ್ಗವಾಗಿ ಜನನಾಂಗಕ್ಕೂ ಹರಡುತ್ತದೆ.

**6) ಮೂತ್ರಮಾರ್ಗದ ಭಗಂದರ: Urinary Fistula.**

ಸ್ತ್ರೀಯರಲ್ಲಿ ಪ್ರಸೂತಿಯು ಒಂದು ಬಹು ಮುಖ್ಯವಾದ ಘಟ್ಟ, ಗರ್ಭವು ಸ್ತ್ರೀ ಶರೀರದಿಂದ ಹೊರಬರುವುದು ಒಂದು ಬಹು ಮುಖ್ಯ ಪ್ರಾಕೃತಿಕ ಪ್ರಕ್ರಿಯೆ. ಇದು ಸಾಮಾನ್ಯವಾಗಿ ಅಪಾಯ ರಹಿತವಾದುದು. ಆದರೆ ಕೆಲವೊಮ್ಮೆ ಪ್ರಸೂತಿಯು ನಿಧಾನಗೊಳ್ಳ ಬಹುದು. ಕಷ್ಟಗೊಳ್ಳಬಹುದು. ಆಗ ಯೋನಿಯಲ್ಲಿ ಉಂಟಾಗುವ ತಿಕ್ಕಾಟದಿಂದ ಮೂತ್ರಕೋಶದಲ್ಲಿ ವ್ರಣಗಳಾಗುತ್ತವೆ. ಈ ವ್ರಣಗಳು ತಕ್ಷಣ ಇಲ್ಲವೇ ಸೂತಿಕಾವಸ್ಥೆಯಲ್ಲಿ ಭಗಂದರಗಳಾಗಿ ರೂಪಾಂತರಿಸುತ್ತವೆ. ಶ್ರೋಣಿಯಲ್ಲಿನ ಶಸ್ತ್ರ ಚಿಕಿತ್ಸೆಯ ಉಪದ್ರವವಾಗಿಯೂ ಭಗಂದರ ಆಗುವುದು ಸಾಮಾನ್ಯ. ಯೋನಿದ್ವಾರದಿಂದ

ಮೂತ್ರಸ್ರವಿಸುವುದು, ಮೂತ್ರವಹ ಸ್ರೋತೋ ಭಗಂದರದ ಮುಖ್ಯಲಕ್ಷಣ. ಕಾಲ ಕ್ರಮೇಣ ಯೋನಿಯಲ್ಲಿ ಉರಿ, ಊತ, ಸೋಂಕು ದುಷ್ಟವ್ರಣಗಳಾಗುತ್ತವೆ.

**7) ಶ್ರೋಣೀಗತ ಅರ್ಬುದ : Pelvic tumors.**

ಅಪರೂಪವಾದರೂ ಮೂತ್ರವಹ ಸ್ರೋತಸ್ಸಿನ ತೊಂದರೆಗೆ ಇದೂ ಸಹ ಕಾರಣವೇ. ಗರ್ಭಾಶಯ, ಗರ್ಭಾಶಯ ಮುಖ, ಫಲ ಕೋಶಗಳು, ಯೋನಿದ್ವಾರ, ಮೂತ್ರಕೋಶದ ಮುಖ, ಕರುಳು ಮುಂತಾದ ಯಾವುದೇ ಸ್ಥಳದಲ್ಲಿ ಅರ್ಬುದವಾದರೂ ಮೂತ್ರ ಪಥದ ಮೇಲೆ ಆಘಾತವಾಗುತ್ತದೆ.

**ಗರ್ಭಿಣಿಯರಲ್ಲಿ ಕಂಡುಬರುವ ಮೂತ್ರ ತೊಂದರೆಗಳು:**

* ಮೂತ್ರ ವೇಗದ ಪುನರಾವರ್ತನೆ.
* ಮೂತ್ರ ಮಾರ್ಗದ ಸೋಂಕುಗಳು.
* ಮೂತ್ರ ಅಸಹಿಷ್ಣುತೆ.

**ಸೂತಿಕಾ ಸ್ತ್ರೀಯರ ಮೂತ್ರ ಸಮಸ್ಯೆಗಳು;**

ಪ್ರಸೂತಿಯು ಕಾರಣದಿಂದಾಗಿ ಯೋನಿದ್ವಾರವು ಅಸಂವೇದನಾ ಶೀಲವಾಗಿರಲು ಮೂತ್ರ ಕೋಶದ ತುಂಬುವಿಕೆ, ಮೂತ್ರ ವೇಗವು ತಿಳಿಯುವುದಿಲ್ಲ. ಆದ್ದರಿಂದ ಮೂತ್ರ ಅಸಹಿಷ್ಣುತೆ ಉಂಟಾಗುತ್ತದೆ.

**ಋತು ಬಂಧದ ನಂತರ ಸಮಸ್ಯೆಗಳು;**

ವಾತ ವೃದ್ಧಿಯಾಗುವ ಈ ಸಮಯದಲ್ಲಿ ಯೋನಿದ್ವಾರವು ಒಣಗುವುದು, ಲೈಂಗಿಕ ಕ್ರಿಯೆಯಲ್ಲಿ ಅನಾಸಕ್ತಿ, ಹೆಚ್ಚಿದ ಮೂತ್ರವೇಗ, ಮೂತ್ರಾಶಯ, ಗರ್ಭಾಶಯ ಜಾರುವುಕೆ, ಮೂತ್ರ ಅಸಹಿಷ್ಣುತೆ ಕಾಡುತ್ತದೆ.

**ಮೂತ್ರವಹ ಸ್ರೋತಸ್ಸಿನ ಚಿಕಿತ್ಸೆಯಲ್ಲಿ:**

ದೋಷ, ದೂಷ್ಯ, ಕಾಲ, ಅಗ್ನಿ, ವಯ, ಬಲ,ಪ್ರಕೃತಿಗಳನ್ನು ನೋಡಿ ಚಿಕಿತ್ಸಾ ಕ್ರಮವನ್ನು ನಿರ್ಧರಿಸಬೇಕಾಗುತ್ತದೆ. ತೊಂದರೆಯು ಮೂತ್ರ ಪಥದಲ್ಲಿಯೇ ವ್ಯಕ್ತವಾದರೂ ಇನ್ನಿತರ ಕೆಲವು ಸ್ರೋತಸ್ಸುಗಳೂ ದುಷ್ಟಿ ಹೊಂದಿದ್ದು ಚಿಕಿತ್ಸೆಗೆ ಯೋಗ್ಯವಾಗಿರುತ್ತವೆ. ಅಂತೆಯೇ ಚಿಕಿತ್ಸೆಯು ಹೆಚ್ಚು ಫಲಪ್ರದವಾಗಲು ಅಭ್ಯಂತರ ಚಿಕಿತ್ಸೆಯಷ್ಟೇ ಪ್ರಾಧಾನ್ಯ ಬಾಹ್ಯಚಿಕಿತ್ಸೆಗೂ ಅಗತ್ಯ.

| | | |
|---|---|---|
| **ಅನುಲೋಮವಾಗಿ** | : | ಅವಿಪತ್ತಿಕರ ಚೂರ್ಣ, ತ್ರಿಫಲಾ ಚೂರ್ಣ. ದೀಪಕ, ಪಾಚಕ, |
| **ಅನುಲೋಮವಾಗಿ** | : | ಹಿಂಗ್ವಾಷ್ಟಕ ಚೂರ್ಣ. |
| **ಮೂತ್ರಲವಾಗಿ** | : | ಗೋಕ್ಷೂರಾದಿ ಗುಗ್ಗುಳು, ಚಂದ್ರಪ್ರಭಾವಟಿ. ವರುಣಾದಿ ಕಷಾಯ. |
| **ಸರಕ್ತ ಮೂತ್ರದಲ್ಲಿ** | : | ಚಂದನಾಸವ. ಉಶೀರಾಸವ. |
| **ಸೋಂಕುಗಳಲ್ಲಿ** | : | ತ್ರಿಫಲಾ ಗುಗ್ಗುಳು. ತ್ರಿಫಲಾ/ ನಿಂಬ ಚೂರ್ಣ ಪ್ರಕ್ಷಾಲನ. |
| **ಅಶ್ಮರಿಯಲ್ಲಿ** | : | ಪಾಷಾಣ ಭೇದ ತೃಣಪಂಚಮೂಲಗಳು |
| **ಬಾಹ್ಯೋಪಚಾರಗಳು** | : | ಅಪಾನವಾತ ಸ್ಥಾನದ ಸ್ನೇಹನ, ಸ್ವೇದನಗಳು ಉಪಯುಕ್ತ. |

**ಸ್ನೇಹನ**– ನಾರಾಯಣ ತೈಲಾಭ್ಯಂಗ.

**ಸ್ವೇದನ**– ತ್ರಿಫಲಾ ಕಷಾಯದಲ್ಲಿ ಅವಗಾಹ ಸ್ವೇದ.

**ಪಥ್ಯ ಭೋಜನಗಳು:**

ಯಾವ ಧಾನ್ಯವನ್ನು ರಾತ್ರೀಯಿಡೀ ನೀರಿನಲ್ಲಿ ನೆನೆಸಿಟ್ಟು ಆ ನೀರನ್ನು ಕುಡಿಯಲು ಬಳಸ ಬೇಕು. ಕುಲತ್ಥ, ಕೂಷ್ಮಾಂಡ, ಆಮಲಕಿ, ತಕ್ರ. ಮಾನಸಿಕ ಕಾರಣಗಳಿಂದುಂಟಾದ ಮೂತ್ರ ತೊಂದರೆಗಳಲ್ಲಿ ಮೇಲಿನ ಔಷಧಿಗಳೊಂದಿಗೆ ವಾತಹರ ಚಿಕಿತ್ಸೆ, ಶಮನೌಷಧಗಳು ಉಪಯುಕ್ತ.

**Dr.Shruti. Y.M.**
Ph.No: 9886903290.

**Whyral - 22™ वैयरल-22**

**Cold, Fever, Nasal Discharge, Headache, Cough**




A Proprietory Ayurvedic Medicine.

**Whyral - 22™ वैयरल-22**

**Each 310 mg. Capsule Contains :**

| | |
|---|---|
| Sudarshan Churna | 240.00 mg |
| Tulsi Extract (Ocimum Sanctum) | 50.00 mg |
| Godhanti Bhasma Powder | 20.00 mg |
| Excepients : Di-calcium Phosphate | qs |
| Talc | qs |

Dosage : 1-2 Capsules 2-3 times a day or as directed by the Physician.

Indications : Viral Fever, Viral Infection, Fever with chill Pyrexia of any origin, Jwara, Wishama Jwara.

Store in a cool dry place.

Colour : Approved colours used for capsule shells.

Mfg Lic. No. L-AUS-237
Manufactured by :
**MEDIFIELD,**
54/1, 3rd Cross, 2nd Main, Shankar Nagar, Mahalakshmi Layout, Bangalore - 560 096.
**Ph. : 080-64503400**

# ಶಿಲಾಜಿತು

ಶಿಲಾಜತು

ಡಾ॥ ಎಂ.ಬಿ. ಪ್ರಕಾಶ್

ಹಿಮಾಲಯದ ತಪ್ಪಲಿನ ಹಳ್ಳಿಗರು ವಸಂತ ಋತುವಿನಲ್ಲಿ ಬಿಸಿಲು ಹೆಚ್ಚಾದಾಗ ತಮ್ಮಲ್ಲಿದ್ದ ಮಂಗಗಳು ಪರ್ವತದ ಕಡೆ ಗುಳೆ ಹೋಗುವುದನ್ನು ಹಾಗು ಆ ಮಂಗಗಳು ಅಂಟಾದ ರುಬ್ಬಿನಂತಹ ವಸ್ತುವನ್ನು ಬಂಡೆಗಳ ಸಂದುಗಳಿಂದ ಆಯ್ದು ತಿನ್ನುತ್ತಿದ್ದುದ್ದನ್ನು ಗಮನಿಸಿದ ಹಳ್ಳಿಗರು ಆ ಮಂಗಗಳ ಶಕ್ತಿ, ಆರೋಗ್ಯ ಹಾಗು ಧೀರ್ಘ ಆಯುಷ್ಯವನ್ನು ಅವು ತನ್ನುತ್ತಿದ್ದ ವಸ್ತುವಿಗೆ ಸಮೀಕರಿಸಿ ತಾವೂ ಅದನ್ನು ಸೇವಿಸಲು ಪ್ರಾರಂಭಿಸಿದರು. ಇದರಿಂದ ಕಾಲಾನುಕ್ರಮದಲ್ಲಿ ಅವರಿಗೆ ಹೆಚ್ಚಿನ ಶಕ್ತಿಯೂ, ಜೀರ್ಣಶಕ್ತಿಯ ಸಮಸ್ಯೆಯಿಂದ ಮುಕ್ತಿಯೂ, ಹೆಚ್ಚಿನ ಲೈಂಗಿಕ ಸಾಮರ್ಥ್ಯವೂ ಜ್ಞಾಪಕಶಕ್ತಿಯೂ ಉಂಟಾದವು. ಹಾಗೆಯೇ ಅಲರ್ಜಿಯಿಂದ ಬಿಡುಗಡೆ, ಮಧುಮೇಹಿಗಳಲ್ಲಿ ಅಪೂರ್ವ ಬದಲಾವಣೆ, ದೈನಂದಿನ ಕೆಲಸಗಳಲ್ಲಿ ಹೆಚ್ಚಿನ ಉತ್ಸಾಹ ಉಂಟಾಯಿತು. ಆ ಪದಾರ್ಥವು ಎಲ್ಲಾ ರೋಗಗಳನ್ನು ಗುಣಪಡಿಸುವಂತೆ ತೋರಿತು.



ಗ್ರೀಷ್ಮ ಋತುವಿನಲ್ಲಿ ಹೆಚ್ಚಾದ ಬಿಸಿಲಿನ ತಾಪಕ್ಕೆ ಹಿಮಾಲಯ ಪರ್ವತದ ಬಂಡೆಗಳಿಂದ ಸರ್ವ ರೋಗಗಳನ್ನು ಗುಣಪಡಿಸುವ ಸಾಮರ್ಥ್ಯವಿರುವ ಒಂದು ರೀತಿಯ ಅಂಟಾದ ಪದಾರ್ಥವು ದ್ರವರೂಪದಲ್ಲಿ ಸ್ರವಿಸುತ್ತದೆ ಅದೇ ಶಿಲಾಜಿತು.

ಉತ್ಪತ್ತಿ: ಗ್ರೀಷ್ಮ ಕಾಲದಲ್ಲಿ ಸೂರ್ಯನ ತಾಪಕ್ಕೆ ಹಿಮಾಲಯ ಪರ್ವತದ ಚಿನ್ನ, ಬೆಳ್ಳಿ,ತಾಮ್ರ, ಮತ್ತು ಲೋಹಯುಕ್ತವಾದ ಬಂಡೆಗಳಿಂದ ಸೃಜಿಸಿ ಶಿಲಾಜಿತು ಉತ್ಪತ್ತಿಯಾಗುತ್ತದೆ. ಇತ್ತೀಚೆಗೆ ಕಾಶ್ಮೀರ ಸಮೀಪದ ಗಢವಾಲ್, ಬಾಧೇಶ್ವರ, ತಿಂಬತ್, ಭೂತಾನ್ ಹಾಗೂ ನೇಪಾಳ ಪ್ರದೇಶದ ಪರ್ವತಗಳಲ್ಲಿಯೂ ಸಿಗುತ್ತದೆ. ರಸಾಯನ ಶಾಸ್ತ್ರದ ಪ್ರಕಾರ ಇದು ಖನಿಜ ತೈಲದ (Mineral oil) ಸಂಯೋಜನೆಯಿಂದ ಕೂಡಿದೆ. ಇದರಲ್ಲಿ ಪೆಟ್ರೋಲ್ ಇಂಧನದ ಉತ್ತಮ ಜಾತಿಯ ರಾಸಾಯನಿಕ ಇರುತ್ತದೆ.

**ಭೇದಗಳು: ಉತ್ಪತ್ತಿ ಭೇದದಿಂದ 4 ವಿಧ.**

1. ಚಿನ್ನ; ಚಿನ್ನಧಾತುಯುಕ್ತ ಪರ್ವತದಿಂದ ಸಿಗುವ ಶಿಲಾಜಿತು.
2. ಬೆಳ್ಳಿ, 3. ತಾಮ್ರ ಹಾಗೂ 4. ಲೋಹ

**ವಾಸನಾ ಭೇದದಿಂದ ಎರಡು ವಿಧ.**

1) ಗೋಮೂತ್ರ ಶಿಲಾಜಿತು- ಗೋ ಮೂತ್ರ ಸಮನಾದ ವಾಸನೆ ಯಿರುತ್ತದೆ.

2) ಕರ್ಪೂರ ಶಿಲಾಜಿತು - ಕರ್ಪೂರಕ್ಕೆ ಸಮನಾದ ವಾಸನೆಯಿರುತ್ತದೆ.

**ಲಕ್ಷಣ:**

1) ಬೆಂಕಿಯಲ್ಲಿ ಹಾಕಿದರೆ ಲಿಂಗಾಕಾರವಾಗುತ್ತದೆ.

2) ಹೊಗೆಕೊಡಲಾರದಂತದ್ದು.

3) ನೀರಿನಲ್ಲಿ ಮುಳುಗದಂತದ್ದು - ಶುದ್ಧ ಶಿಲಾಜಿತುವಿನ ಲಕ್ಷಣಗಳು.

**ಶಿಲಾಜಿತು ಶೋಧನ: (ರಸ ತಂತ್ರ ಸಾರ)**

1) ಕ್ಷಾರ, ಆಮ್ಲ ಹಾಗೂ ಗೋಮೂತ್ರದಲ್ಲಿ ಅರೆಯುವುದರಿಂದ ಶಿಲಾಜಿತು ಶುದ್ಧವಾಗುತ್ತದೆ.

2) ಹಾಲು, ತ್ರಿಫಲಾ ಕ್ವಾಥ ಹಾಗೂ ಭೃಂಗರಾಜ ಸ್ವರಸದಲ್ಲಿ, ಲೋಹದ ಪತ್ರದಲ್ಲಿ ಹಾಕಿ ಉಜ್ಜುವುದರಿಂದ ಶಿಲಾಜಿತು ಶುದ್ಧಿಯಾಗುತ್ತದೆ.

3). ಸೂರ್ಯನ ತಾಪದಿಂದ ಶಿಲಾಜಿತು ನೀರಿನಲ್ಲಿ ತೇಲುತ್ತದೆ. ಆ ತೇಲುತ್ತಿರುವ ಶಿಲಾಜಿತುವನ್ನು ಗಾಜಿನ ಪಾತ್ರೆಯಲ್ಲಿ ತೆಗೆದುಕೊಂಡು , ಅದನ್ನು ಡೋಲಾಯಂತ್ರದಲ್ಲಿ ಕ್ಷಾರ,ಆಮ್ಲ ಹಾಗೂ ಗುಗ್ಗುಲುದ ಜೊತೆ ಒಂದು ಗಂಟೆ ಸ್ವೇದನಕ್ಕೆ ಒಳಪಡಿಸಿದರೆ ಶಿಲಾಜಿತು ಶುದ್ಧವಾಗುತ್ತದೆ.

**ಶುದ್ಧ ಶಿಲಾಜಿತುವಿನ ಗುಣಗಳು:**

ಜ್ವರ, ಪಾಂಡು, ಶೋಥ, 20 ವಿಧವಾದ ಪ್ರಮೇಹ, ಅಗ್ನಿಮಾಂದ್ಯ, ಸ್ಥೌಲ್ಯ, ರಾಜಯಕ್ಷ್ಮ, ಶೂಲ, ಪ್ಲೀಹ ವೃದ್ಧಿ, ಉದರ ರೋಗ, ಸಮಸ್ತ ಚರ್ಮ ವ್ಯಾಧಿಗಳು, ಶರೀರದಲ್ಲಿ ಬಿಗಿತನ ಬರಿಸುವುದು, ಹಾಗೂ ಜರಾಮರಣ ಜಯಿಸಲು ಬಹಳ ಉಪಯೋಗಿ.

1. ಸ್ವರ್ಣ ಶಿಲಾಜಿತು: (ಚಿನ್ನ ಧಾತು ಯುಕ್ತ)- ಮಧುರ, ತಿಕ್ತರಸ, ಶೀತ ಗುಣ, ಕೆಂಪು ವರ್ಣ, ಹಾಗೂ ಕಷಾಯ, ತಿಕ್ತ ವಿಪಾಕ.

2. ಬೆಳ್ಳಿಧಾತು ಯುಕ್ತ; ಬಿಳೀ ಬಣ್ಣದ್ದು (ಶಂಖ ಭಸ್ಮವತ್) ಕ್ಷಾರ, ಮಂದ, ತೇಗುಬರಿಸುತ್ತದೆ. ಹೃದಯದ ಖಾಯಿಲೆಗೆ ಉಪಯೋಗಿ, ಪಿತ್ತಹರ, ಪಾಂಡು, ಕಾಮಲಾ, ಪ್ಲೀಹ ವೃದ್ಧಿ, ಮೂತ್ರದಲ್ಲಿ ಧಾತು ಇತ್ಯಾದಿಗಳಲ್ಲಿ ಉಪಯೋಗಿ.

3. ತಾಮ್ರಧಾತುಯುಕ್ತ ಶಿಲಾಜಿತುವು ನವಿಲು ಪುಚ್ಛದ ಬಣ್ಣದ್ದಾಗಿರುತ್ತದೆ. ಕಟು ಕಷಾಯ ರಸಯುಕ್ತವಾದ ಈ ದ್ರವ್ಯವು ಉತ್ತೇಜಕ ಹಾಗೂ ಸ್ಥೌಲ್ಯದಲ್ಲಿ ಉಪಯೋಗಿ.

4. ಲೋಹಧಾತುಯುಕ್ತ ಶಿಲಾಜಿತುವು ಗುಗ್ಗುಳುದಂತೆ ಕಾಣುತ್ತದೆ. ಕಟು, ಲವಣ, ಕಷಾಯ ರಸವುಳ್ಳ ಹಾಗೂ ಶೀತ ವೀರ್ಯವುಳ್ಳದ್ದು. ಇದು ಕ್ಷೀಣತೆ, ವೃದ್ಧಾಪ್ಯ ಮುಂತಾದುವುಗಳಲ್ಲಿ ಉಪಯುಕ್ತ. ಇದು ತ್ರಿದೋಷ ಹರ.

5. ಧಾತುಯುಕ್ತ ಶಿಲಾಜಿತುವು ತಿಕ್ತಕಷಾಯರಸ ಮತ್ತು ವಾಸನೆಯುಳ್ಳದ್ದು.ವಾತರೋಗ ಹಗೂ ಸ್ತ್ರೀಜನ್ಯ ರೋಗಗಳಲ್ಲಿ ಉಪಕಾರಿ.

6. ಕೆಂಪು ವರ್ಣದ ಶಿಲಾಜಿತುವು ಮೃದು, ಉತ್ತೇಜಕ, ತಿಕ್ತ ರಸ. ಇದು ವರ್ಣ್ಯ, ಬಲ್ಯ, ವೀರ್ಯವೃದ್ಧಿಕರ.

**ಶಿಲಾಜಿತು ಸತ್ವಪಾತನ ವಿಧಿ:**

ಶುದ್ಧ ಶಿಲಾಜಿತುವನ್ನು ದ್ರಾವಕ ವರ್ಗದ ಬೆಲ್ಲ, ಗುಗ್ಗುಳು, ಗುಲಗಂಜಿ, ತುಪ್ಪ ಇವುಗಳ ಜೊತೆಹಾಕಿ ಗಂಜಿ ಇತ್ಯಾದಿ ಆಮ್ಲಗಳಿಂದ ತೊಳೆದು ಮೂಷಾಯಂತ್ರದಲ್ಲಿ ಹಾಕಿ ಮುಚ್ಚಿ, ಬದರೀ ವೃಕ್ಷದ ಇದ್ದಲಿನಿಂದ ಕಾಯಿಸಬೇಕು. ಇದರಿಂದ ದೊರಕಿದ ಸತ್ವವು ಲೋಹಸದೃಶವಾಗಿ ದೃಢವಾಗಿರುತ್ತದೆ.

**ಕರ್ಪೂರ ಶಿಲಾಜಿತು:**

ಕರ್ಪೂರ ಗಂಧಯುಕ್ತ ಈ ಶಿಲಾಜಿತುವು ಪಾಂಡುವರ್ಣ ದ್ದಾಗಿದೆ. ಇದು ಮೂತ್ರ ಕೃಚ್ಛ್ರ, ಅಶ್ಮರೀ, ಪ್ರಮೇಹ, ಪಾಂಡು ರೋಗಗಳಲ್ಲಿ ಬಹಳಾ ಉಪಕಾರಿ. ಯಾಲಕ್ಕೀ ಕ್ವಾಥದಲ್ಲಿ ಅರೆದರೆ ಶುದ್ಧವಾಗುತ್ತದೆ.

ಸರಿಯಾಗಿ ಶುದ್ಧಿಯಾಗದ ಶಿಲಾಜಿತುವಿನ (ಅಶುದ್ಧ ಶಿಲಾಜಿತು) ಪ್ರಯೋಗದಿಂದ ವೃದ್ಧಿ, ಊತ, ಉನ್ಮಾದ, ಭ್ರಮೆ, ರಕ್ತಸ್ರಾವ, ಅಗ್ನಿ ಮಾಂದ್ಯ ಮುಂತಾದ ದೋಷಗಳು ಕಾಣಿಸಿಕೊಳ್ಳುತ್ತವೆ. ಮೇಲೆ ಕಾಣಿಸಿದ ಅಡ್ಡಪರಿಣಾಮಗಳಿಗೆ ಉಪಶಮನಾರ್ಥವಾಗಿ ಕಾಲು (1/4) ತೊಲೆ ಮರೀಚ (ಮೆಣಸು) ಚೂರ್ಣವನ್ನು ಗೋಘೃತದಲ್ಲಿ ಕಲೆಸಿ ತಿನ್ನುವುದರಿಂದ ನಿವಾರಣೆಯಾಗುತ್ತದೆ.

**ಶಿಲಾಜಿತುವಿನ ಕೆಲವು ಯೋಗಗಳು:**

**1. ಶಿಲಾಜಿತ್ವಾದಿ ವಟ ನಂ.1** (ಸಿದ್ಧಯೋಗ ಸಂಗ್ರಹ) ತ್ರಿವಂಗ-3 ತೊಲೆ, ಬೇವಿನಎಲೆ ಮತ್ತು ಕೊಡಸಿಗೆ ಸೊಪ್ಪು 10-10 ತೊಲೆ ಮತ್ತು ಶಿಲಾಜಿತು 15 ತೊಲೆ ತ್ರಿವಂಗ ಮತ್ತು ಶಿಲಾಜಿತುವನ್ನು ಮೊದಲು ಬೆರೆಸಿಕೊಂಡು ಅದಕ್ಕೆ ಬೇವಿನಎಲೆ ಮತ್ತು ಕೊಡಸಿಗೆ ಸೊಪ್ಪನ್ನು ನೆರಳಿನಲ್ಲಿ ಒಣಗಿಸಿ ಪುಡಿಮಾಡಿ ಸೇರಿಸಿಕೊಂಡು, 4-4 ಗುಂಜಿ ಮಾತ್ರೆಯಲ್ಲಿ ಸೇವಿಸುವುದು. ಇದರ ಕಾರ್ಯವೃದ್ಧಿಯಾಗಲು ಸ್ವರ್ಣ ಭಸ್ಮ 1/2 ತೊಲೆ, ಸ್ವರ್ಣ ಲವಣ 4 ತೊಲೆ ಸೇರಿಸ ಬೇಕು.

**ಉಪಯೋಗ-** ಬಹುಮೂತ್ರತಾ, ಇಕ್ಷುಮೇಹ, ಮಧುಮೇಹದಲ್ಲಿ ಬಹಳಾ ಪ್ರಯೋಜನಕಾರಿ.

**2. ಶಿಲಾಜಿತ್ವಾದಿ ವಟ. ನಂ 2 (ರಸತಂತ್ರ ಸಾರ)**

ಶುದ್ಧ ಶಿಲಾಜಿತು-5 ತೊಲ, ಅಭ್ರಕ, ಲೋಹ ಭಸ್ಮ, ಸುವರ್ಣ ಮಾಕ್ಷಿಕ, ವಂಗ- ಇವನ್ನೆಲ್ಲಾ ಪ್ರತಿಯೊಂದೂ 1 1 ತೊಲ, ರಸ ಸಿಂಧೂರ-3 ಮಾಷ. ಮೇಲಿನ ಎಲ್ಲಾ ದ್ರವ್ಯಗಳನ್ನು ಬೆರಸಿ ತ್ರಿಜಾತದಲ್ಲಿ ಮೂರುದಿನ ಅರೆದು ಎರಡು ರತ್ತಿಯ ಗುಳಿಗೆ ಗಳನ್ನು ಮಾಡಬೇಕು. ಇದನ್ನು ಅಜವಾನ ಅನುಪಾನದಲ್ಲಿ ಉಪಯೋಗಿಸಬೇಕು.

**ಉಪಯೋಗ-**; ಶುಕ್ರಸ್ರಾವ, ಸ್ವಪ್ನದೋಷ ನಾಶಕ, ಹೃದ್ಯ, ಸ್ಮರಣ ಶಕ್ತಿ ಹೆಚ್ಚಿಸುತ್ತದೆ.

**3. ಶಿಲಾಜಿತ್ವಾದಿ ವಟ, ನಂ 3.**

ಶುದ್ಧ ಶಿಲಾಜಿತು, ಅಭ್ರಕ ಭಸ್ಮ, ಸ್ವರ್ಣ ಭಸ್ಮ, ಲೋಹ ಭಸ್ಮ, ಶುದ್ಧ ಗುಗ್ಗುಳು, ಟಂಕಣ, ಎಲ್ಲವನ್ನೂ ಸೇರಿಸಿ ಸಹದೇವಿ ರಸದ ಜೊತೆ 3 ದಿನ ತೇಯ್ದು- ಒಂದು ರತ್ತಿಯ ಗುಳಿಗೆ ಮಾಡುವುದು.

**4. ಶಿಲಾಜಿತ್ವಾದಿ ವಟ. ನಂ.4**

ಶುದ್ಧ ಶಿಲಾಜಿತು-20 ತೊಲ, ನಿಂಬ ಪತ್ರ ಸತ್ವ-20 ತೊಲ, ತ್ರಿವಂಗ ಭಸ್ಮ 2.5 ತೊಲ, ಅಭ್ರಕ ಭಸ್ಮ 2,5 ತೊಲೆ -ಮೇಲಿನದೆಲ್ಲವನ್ನೂ ಮಿಶ್ರಮಾಡಿ, ನಿಂಬ ಪತ್ರಸತ್ವಕ್ಕೆ ಸ್ವಲ್ಪ ನೀರನ್ನು ಹಾಕಿ, ಎಲ್ಲವನ್ನೂ ತೇಯ್ದು-2 ರತ್ತಿಯ ಗುಳಿಗೆಗಳನ್ನು ಮಾಡುವುದು.

ಉಪಯೋಗ: ಮಧುಮೇಹ, ಇಕ್ಷುಮೇಹ, ಬಹುಮೂತ್ರತಾ, ಮೂತ್ರಧಾರಣಾಶಕ್ತಿ ಹೆಚ್ಚುವುದು ಹಾಗೂ ತೇಜೋಕಳೆ ಬರುತ್ತದೆ. ಪ್ರಮೇಹ ಪಿಡಕ ಮುಂತಾದುವಲ್ಲಿ ಉಪಕಾರಿ.

**5. ಲೋಹ ಶಿಲಾಜಿತು ವಟ.**

ಶುದ್ಧ ಶಿಲಾಜಿತು 8 ತೊಲ, ಲೋಹ ಭಸ್ಮ 2 ತೊಲ, ಅಭ್ರಕ 1 ತೊಲ, ವಂಗ ೪ ತೊಲ.

ಉಪಯೋಗ: ಪ್ರಮೇಹ, ಶುಕ್ರಸ್ರಾವ, ಸ್ವಪ್ನದೋಷ, ಪಾಂಡುರೋಗ, ಅಗ್ನಿಮಾಂದ್ಯ. 1ರಿಂದ 2 ರತ್ತಿ ದಿನಕ್ಕೆರೆಡುಬಾರಿ ಹಾಲಿನ ಜೊತೆ ಸೇವಿಸುವುದರಿಂದ ಬಹಳಾ ಉಪಕಾರಿ.

**ವೈದ್ಯ : ಎಂ.ಬಿ. ಪ್ರಕಾಶ್**
Ph : 94498 50502

# ಹಳ್ಳಿ ವೈದ್ಯನ – ಅಮೋಘ ಸಾಧನೆ

ಇಂದಿನ ವೈದ್ಯರುಗಳಿಗೆ ಸರ್ಕಾರಿ ನೌಕರಿಯೇ ಬೇಕು, ಆದರೆ ಅದು ಬೆಂಗಳೂರಿನಂಥ ನಗರದಲ್ಲೇ ಇರಬೇಕು. ಆಕಸ್ಮಾತ್ ಸರ್ಕಾರಿ ಸೇವೆಗಾಗಿ ಹಳ್ಳಿಗೆ ವರ್ಗಾಯಿಸಲ್ಪಟ್ಟರೆ ಕೆಲಸಕ್ಕೆ ರಾಜಿನಾಮೆ ಕೊಡುತ್ತಾರೆ. ಇಲ್ಲವೇ ಮತ್ತೆ ನಗರಕ್ಕೆ ವರ್ಗಾವಣೆಯಾಗುವವರೆಗೆ ಕೆಲಸಕ್ಕೆ ರಜೆ ಹಾಕುತ್ತಾರೆ. ಆದರೆ



ರಾಜ್ಯದ ಹಿಂದುಳಿದ ಜಿಲ್ಲೆಗಳಲೊಂದಾದ .ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಕುಗ್ರಾಮ ಕಂಪಾರಹಳ್ಳಿಯಲ್ಲಿ ಕೆಲಸಕ್ಕೆ ಸೇರಿದಂದಿನಿಂದ ಇಂದಿನವರೆಗೂ ಆಯುರ್ವೇದ ವೈದ್ಯಾಧಿಕಾರಿಯಾಗಿ ನಿಸ್ವಾರ್ಥಸೇವೆ ಸಲ್ಲಿಸುತ್ತಿರುವ ಇದೇ ತುಮಕೂರು ಜಿಲ್ಲೆಯ ಮಾಯಸಂದ್ರ ಸಮೀಪದ ಮಾವಿನಕೆರೆಯ ಶ್ರೀಯುತ ಡಾ. ನಂಜುಡೇಗೌಡ ಹಾಗು ಶ್ರೀಮತಿ ಪುಟ್ಟಲಕ್ಷ್ಮಮ್ಮ ದಂಪತಿಗಳ ಹಿರಿಯ ಪುತ್ರರಾದ ಡಾ. ಎಂ. ಎನ್. ಸಂಜಯರಂಥ ವೈದ್ಯರುಗಳು ಬಹಳ ವಿರಳ. ಅಲ್ಲದೆ ಇವರು ಈ ಭಾಗದ ಜನರಿಗೆ ಸಲ್ಲಿಸಿರುವ ಸೇವೆ ಹಾಗು ಮಾಡಿರುವ ಸಾಧನೆ ಅಪಾರ.

ಡಾ. ಎಂ. ಎನ್. ಸಂಜಯರವರು ಗ್ರಾಮೀಣ ಜನರಿಗಾಗಿ ಮಾಡಿರುವ ಕೆಲವೊಂದು ಸೇವೆಗಳು ಇಂತಿವೆ.

* ಗ್ರಾಮೀಣ ಜನರಿಗಾಗಿ ಅನೇಕ ಉಚಿತ ವೈದ್ಯಕೀಯ ಹಾಗು ದಂತ ವೈದ್ಯಕೀಯ ಶಿಬಿರಗಳು.
* ಗ್ರಾಮೀಣ ಜನರ ಆರೋಗ್ಯದ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವುದು.
* ತುರ್ತು ಸಮಯದಲ್ಲಿ ರೋಗಿಗಳ ಮನೆ ಬಾಗಿಲಿಗೆ ಉಚಿತ ಆರೋಗ್ಯಸೇವೆ.
* ಶಾಲಾ ಮತ್ತು ಅಂಗನವಾಡಿ ಮಕ್ಕಳ ವೈದ್ಯಕೀಯ ಪರೀಕ್ಷೆ.
* ಅಕ್ಷರ ದಾಸೋಹ, ಏಡ್ಸ್ ಅರಿವು ಆಂದೋಲನ, ಕಿಶೋರಿ ಶಕ್ತಿ ಯೋಜನೆ, ಆಯುರ್ವೇದ ರೀತಿಯ ಜೀವನ ಶೈಲಿ, ಮೊದಲಾದ ವಿಷಯಗಳ ಮೇಲೆ ವಿವಿಧ ಸಂಘಸಂಸ್ಥೆ ಗಳ ಮೂಲಕ ಸರಣಿ ಉಪನ್ಯಾಸ.
* ಅಂಗವಿಕಲ ಪುನಶ್ಚೇತನ ಕಾರ್ಯಕ್ರಮಗಳು ಹಾಗು ಅಂಗವಿಕಲರಿಗಾಗಿ ಉಚಿತ ತಪಾಸಣಾ ಶಿಬಿರಗಳನ್ನು ನಡೆಸಿದ್ದಾರೆ.
* ಆಕಾಶ ವಾಣಿ ಮೂಲಕ ಜನಸಾಮಾನ್ಯರಿಗೆ ಆರೋಗ್ಯದ ಬಗ್ಗೆ ತಿಳುವಳಿಕೆ.

**ಜನ ಸೇವೇಯೇ ಜನಾರ್ಧನ ಸೇವೆ ಎಂದು ನಂಬಿರುವ ಡಾ. ಎಂ. ಎನ್. ಸಂಜಯರವರು ಕೆಳಕಂಡ ಸಂಸ್ಥೆಗಳಲ್ಲಿ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ.**

* ಅಧ್ಯಕ್ಷರು, ರೋಟರಿ ಕ್ಲಬ್, ತಿಪಟೂರು 2006–07.
* ಸಹ ಅಧ್ಯಕ್ಷರು–ಜಿಲ್ಲಾ ಪಲ್ಸ್ ಪೋಲಿಯೋ ಸಮಿತಿ 2008–09.
* ಕಾರ್ಯಕಾರಿ ಸಮಿತಿ ಸದಸ್ಯರು, ಕನ್ನಡ ಸಾಹಿತ್ಯ ಪರಿಷತ್, ತಿಪಟೂರು.
* ಸದಸ್ಯರು, ಪಾರಂಪರಿಕ ವೈದ್ಯಪರಿಷತ್, ತಿಪಟೂರು ಶಾಖೆ.
* ಅಧ್ಯಕ್ಷರು, ಜೀವವೈವಿಧ್ಯ ನಿರ್ವಹಣಾ ಸಮಿತಿ (ಅಪರೂಪದ ಜೀವ, ಸಸ್ಯ ಸಂಪತ್ತನ್ನು ಉಳಿಸಲು), ತಾಲ್ಲೂಕ ಪಂಚಾಯತ್ ತಿಪಟೂರು.

**ಇವರ ಸೇವೆಯನ್ನು ಗುರುತಿಸಿ ದೇಶಾದ್ಯಂತ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವುಗಳಲ್ಲಿ ಕೆಲವೊಂದು**

* ಡಾ. ಎಸ್. ರಾಧಕೃಷ್ಣನ್ ಪ್ರಶಸ್ತಿ–2005– ಗಾಂಧಿ ಯೂತ್ ಫೌಂಢೇಷನ್, ಬೆಂಗಳೂರು ಇವರಿಂದ.
* ಕುಮಾರವ್ಯಾಸ ಪ್ರಶಸ್ತಿ–2005, ಪತ್ರಕರ್ತರ ವೇದಿಕೆ, ಗದಗ ಇವರಿಂದ.
* ಕರುನಾಡಭೂಷಣ ಪ್ರಶಸ್ತಿ–2005, ಕರ್ನಾಟಕ ಸಂಘ, ಪಾಂಡಿಚೆರಿ(ಪಾಡಿಂಚರಿ ಮುಖ್ಯಮಂತ್ರಿಗಳಿಂದ ಪ್ರದಾನ).
* ರಾಷ್ಟ್ರೀಯ ಫೆಲೋಷಿಪ್–2005, ಕೇಂದ್ರ ಯುವಜನ ಖಾತೆ ಮತ್ತು ಕ್ರೀಡಾ ಮಂತ್ರಾಲಯ ಭಾರತ ಸರ್ಕಾರ, ನವದೆಹಲಿ.

* ಗಣರಾಜ್ಯೋತ್ಸವ ಪ್ರಶಸ್ತಿ–2006, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಿಪಟೂರು.
* ವೈದ್ಯರತ್ನ ರಾಷ್ಟ್ರೀಯ ಪ್ರಶಸ್ತಿ–2006, ಭಾರತೀಯ ವೈದ್ಯಪದ್ಧತಿಗಳು ಮತ್ತು ಹೋಮಿಯೋಪತಿ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ.
* ಕರುನಾಡಶ್ರೀ ಪ್ರಶಸ್ತಿ– ಗೀತ ಹರೀಶ್ ನೃತ್ಯ ಸಂಘ, ಬೆಂಗಳೂರು.
* ಅಂಬೇಡ್ಕರ್ ಸದ್ಭಾವನಾ ಪ್ರಶಸ್ತಿ–2006, ಡಾ. ಅಂಬೇಡ್ಕರ್ ಪ್ರತಿಷ್ಠಾನ, ಬೆಂಗಳೂರು.
* ಕರ್ನಾಟಕ ಸುವರ್ಣ ಶ್ರೀ–2006, ಹಲೋ ಇಂಡಿಯನ್ಸ್ ಪತ್ರಿಕಾ ಬಳಗ, ಬೆಂಗಳೂರು.
* ಸುವರ್ಣ ಕರ್ನಾಟಕ ರತ್ನ–2006, ಗಾರ್ಡನ್ ಸಿಟಿ ಕಲ್ಚರಲ್ ಸೊಸೈಟಿ, ಬೆಂಗಳೂರು.
* ಛತ್ರಪತಿ ಶಿವಾಜಿ ರಾಜ್ಯ ಪ್ರಶಸ್ತಿ–2007, ಮರಾಠ ಮಹಾಸಭಾ, ಕರ್ನಾಟಕ.
* ವಿಶ್ವ ಕನ್ನಡ ಕಣ್ಮಣಿ ರಾಜ್ಯ ಪ್ರಶಸ್ತಿ–2007, ವಿಶ್ವ ಕನ್ನಡ ಸಂರಕ್ಷಣಾ ಸಮಿತಿ, ಮಂತ್ರಾಲಯದ ಶ್ರೀ ರಾಘವೇಂದ್ರ ಮಠದ ಪೀಠಾಧಿಪತಿಗಳಾದ ಶ್ರೀ ಸುಶಮೇಂದ್ರ ತೀರ್ಥ ಶ್ರೀ ಪಾದಂಗಳಿಂದ ಪ್ರಧಾನ.
* ಡಾ. ರಾಜ್‌ಕುಮಾರ್ ರಾಜ್ಯೋತ್ಸವ ಪ್ರಶಸ್ತಿ–2007, ಡಾ. ರಾಜ್‌ಕುಮಾರ್ ಅಂತರಾಷ್ಟ್ರೀಯ ಪ್ರತಿಷ್ಠಾನ, ಬೆಂಗಳೂರು.

ಡಾ. ಸಂಜಯ್‌ವರವರನ್ನು
ಮೊಬೈಲ್ ನಂಬರ್: 9448314846 ಮೂಲಕ ಸಂಪರ್ಕಿಸಬಹುದು


With best Compliments from

KUMAR AYURVEDA ASHRAMA

Manufacturers of Proprietory & Classical Ayurvedic Medines

#4175, 13th Main, E Block, 2nd Stage
Rajajinagar, Bangalore - 560 010
Phone : 080-23323184

# ಸರಳ ವ್ಯಾಧಿಗಳಿಗೆ ಮನೆಯಲ್ಲೆ ಸುಲಭ ಚಿಕಿತ್ಸೆಗಳು

ಹಿತ್ತಲ ಗಿಡ ಮದ್ದಲ್ಲ ಎಂಬ ಗಾದೆ ಆಧುನಿಕ ಜಗತ್ತಿನಲ್ಲಿ ಬಹಳ ಸರಿಯಾಗಿ ಅನ್ವಯಿಸುತ್ತದೆ. ಮೊದಲಿಗೆ ನಗರ ಜೀವನದಲ್ಲಿ ಹಿತ್ತಲು ಎಂಬುದೆ ಇಲ್ಲ. ಹಳ್ಳಿ ಪ್ರದೇಶದಲ್ಲಿ ಹಿತ್ತಲುಗಳಿದ್ದರೂ ಬಹಳಷ್ಟು ಜನರಿಗೆ ಅಲ್ಲಿನ ಗಿಡಮೂಲಿಕೆಗಳ ಮಹತ್ವವೇ ತಿಳಿದಿಲ್ಲ. ಪ್ರತಿಯೊಂದು ಚಿಕ್ಕ ತೊಂದರೆಗೂ ವೈದ್ಯರಲ್ಲಿ ಹೋಗಿ ಔಷಧಿ ತಂದರೆ ನೆಮ್ಮದಿ.

ಹಿಂದೆ ನಮ್ಮ ಹಿರಿಯರು ಬಹಳಷ್ಟು ಕಾಯಿಲೆಗಳಲ್ಲಿ ಮನೆಯಲ್ಲೆ ಔಷಧಿ ತಯಾರಿಸಿ

ಉಪಯೋಗಿಸುತ್ತಿದ್ದರು. ಅದಕ್ಕೆ ಬೇಕಾದ ಸಾಮಗ್ರಿಗಳೂ ಮನೆಯಲ್ಲೆ ಲಭ್ಯವಿರುತ್ತಿದ್ದವು ಹಾಗಾಗಿ

ಔಷಧಿಯಿಂದಾಗುವ ಅಡ್ಡಪರಿಣಾಮಗಳಿಂದ ಅವರು ಮುಕ್ತರಾಗಿದ್ದರು.

ಮನೆಯ ಸುತ್ತಮುತ್ತ ಕೆಲವೊಂದು ಗಿಡಮೂಲಿಕೆಗಳನ್ನು ಬೆಳೆಸಿದರೆ ತಕ್ಷಣ ಉಪಯೋಗಿಸಲು ಸಾಧ್ಯವಾಗುತ್ತದೆ. ಸುತ್ತ ಮುತ್ತ ಜಾಗವಿಲ್ಲದೆ ಹೋದರೆ ಕುಂಡಗಳಲ್ಲಿ ಕೆಲವೊಂದು ಗಿಡಗಳನ್ನು ಬೆಳೆಸಬಹುದು. ಅವುಗಳೆಂದರೆ ದೊಡ್ಡಪತ್ರೆ, ಪುದೀನ, ಲೋಳೆಸರ, ನಾಗದಾಳಿ, ಒಂದೆಲಗ, ಗರಿಕೆ, ಕೊತ್ತಂಬರಿ ಸೊಪ್ಪು ಇತ್ಯಾದಿ. ಸುತ್ತ ಮುತ್ತ ಖಾಲಿ ಜಾಗವಿದ್ದರೆ ಹರಳು, ಉಮ್ಮತ್ತಿ, ಗಣಿಕೆ ಸೊಪ್ಪು ಮುಂತಾದವನ್ನು ಬೆಳೆಸಬಹುದು. ನಿತ್ಯ ಅಡುಗೆಗೆ ಬಳಸುವ ತರಕಾರಿಗಳು, ಮಸಾಲೆ ಪದಾರ್ಥಗಳೂ ಅನೇಕ ರೋಗಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ.

**ಜೀರ್ಣಾಂಗಕ್ಕೆ ಸಂಬಂಧಿಸಿದ ತೊಂದರೆಗಳಲ್ಲಿ ಮನೆಮದ್ದು:**

**ಬಾಯಿಹುಣ್ಣು:** ಶರೀರದೊಳಗಿನ ಉಷ್ಣಾಂಶ ಹೆಚ್ಚಾದಾಗ ಬಾಯಿಹುಣ್ಣು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

- 1/2 ಚಮಚ ಗಸಗಸೆಯನ್ನು ಒಂದು ಇಂಚು ಕೊಬ್ಬರಿಯೊಡನೆ ಚೆನ್ನಾಗಿ ಜಗಿದು ಸೇವಿಸುವುದು.
- ಗುಲಾಬಿ ಪಕಳೆಗಳಿಂದ ಮಾಡಿದ ಗುಲ್ಕಂದ್ ಸೇವಿಸಿ.
- ಶರೀರದ ಉಷ್ಣತೆ ಕಡಿಮೆಮಾಡಲು ಎಳನೀರು, ಬಾರ್ಲಿ(ಜವೆಗೋಧಿ) ಕುದಿಸಿದ ನೀರು ಬಹಳ ಉತ್ತಮ.
- ಹುಣ್ಣಿರುವ ಜಾಗಕ್ಕೆ ತುಪ್ಪ ಸವರುವುದರಿಂದ ತತ್ಕಾಲಿಕ ಶಮನ ದೊರೆಯುತ್ತದೆ.

**ಬಾಯಿ ವಾಸನೆ:**

- ಬಾಯಿ ವಾಸನೆ ಬಂದರೆ ಬಡಾಸೋಂಪು, ಏಲಕ್ಕಿ ಮುಂತಾದ ಪರಿಮಳಯುಕ್ತ ದ್ರವ್ಯಗಳನ್ನು ಜಗಿಯುವುದರಿಂದ ದುರ್ವಾಸನೆ ಕಡಿಮೆಯಾಗುತ್ತದೆ.
- ಹಾಗೆಯೇ ಅಜೀರ್ಣದಿಂದ ಬಾಯಿವಾಸನೆಯಾಗಿದ್ದರೆ ಜೀರ್ಣಶಕ್ತಿಯೂ ವೃದ್ಧಿಸುತ್ತದೆ.

**ಬಾಯಿ ನೀರೂರುವುದು:**

ಇದು ಅಜೀರ್ಣದ ಒಂದು ಸಕೇತ ಹಾಗಾಗಿ ಜೀರ್ಣಶಕ್ತಿ ವೃದ್ಧಿಸುವ ಆಹಾರ ತೆಗೆದು ಕೊಳ್ಳಬೇಕು.


- ಒಂದು ಚಮಚ ಅಳಲೆಕಾಯಿ ಪುಡಿಯನ್ನು ಒಂದು ಲೋಟ ಕಡೆದ ಮಜ್ಜಿಗೆಯ ಜೊತ ದಿನಕ್ಕೆರಡು ಸಲ ಕುಡಿಯಬೇಕು.



- ಹಸಿಶುಂಠಿ 1/2 ಇಂಚು ಒಂದು ಕಲ್ಲು ಉಪ್ಪಿನಜೊತೆ ಅಗಿದು ತಿನ್ನುವಿದು.
- ಕಡೆದ ಮಜ್ಜಿಗೆಗೆ ಲಿಂಬೆರಸ ಮತ್ತು ಉಪ್ಪು ಸೇರಿಸಿ ಕುಡಿಯುವುದು.



- ಜೀರ್ಣಾಂಗ ವ್ಯೂಹದಲ್ಲಿ ಉಪಕಾರಿಂಯಾಗುವ ಇತರ ದ್ರವ್ಯಗಳೆಂದರೆ ಶುಂಠಿ, ಜೀರಿಗೆ, ಬಡಾಸೋಂಪು, ಓಮ (ಅಜವಾಯಿನ್), ಹಿಂಗು, ಬೆಳ್ಳುಳ್ಳಿ, ಆದ್ದರಿಂದ ಇವುಗಳನ್ನು ಆಹಾರದಲ್ಲಿ ಯಥೋಚಿತವಾಗಿ ಬಳಸಬೇಕು.




**ಮಲಬದ್ಧತೆ:**

ಆಹಾರದಲ್ಲಿ ನಾರಿನಾಂಶ ಕಡಿಮೆಯಾದಾಗ ಹಾಗೆಯೇ ನೀರು ಕಡಿಮೆ ಸೇವಿಸುವುದರಿಂದಲೂ ಮಲಬದ್ಧತೆ ಕಾಣಿಸಿಕೊಳ್ಳುತ್ತದೆ.

- ಪ್ರತಿ ದಿನ ರಾತ್ರಿ ಏಲಕ್ಕಿ ಬಾಳೆಹಣ್ಣು ಅಥವಾ ಪಪ್ಪಾಯಿ, ಸಪೋಟ ಮುಂತಾದ ಬೇರಾವುದೆ ಹಣ್ಣು ಸೇವನೆಯಿಂದ ಮಲಬದ್ಧತೆ ದೂರವಾಗುತ್ತದೆ.

- ಸೊಪ್ಪು, ತರಕಾರಿ ಹೆಚ್ಚಾಗಿ ತಿನ್ನುವುದರಿಂದಲೂ ಸುಲಭವಾಗಿ ಮಲ ವಿಸರ್ಜನೆಯಾಗುತ್ತದೆ.




- ದಿನಾ 2 ರಿಂದ 3 ಖರ್ಜೂರದ ಹಣ್ಣನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತಿನ್ನುವುದು ಒಳ್ಳೆಯದು.
- ಬಾರ್ಲಿ(ಜವೆಗೋಧಿ) 1/2 ಕಪ್ ನೊಂದಿಗೆ 6 ಕಪ್ ನೀರು ಸೇರಿಸಿ ಕುದಿಸಿ, ಆ ನೀರಿಗೆ ಸ್ವಲ್ಪ ಜೇನುತುಪ್ಪ ಸೇರಿಸಿ ಕುಡಿಯುವುದು ಮಲಬದ್ಧತೆಗೆ ಉತ್ತಮ ಔಷಧಿ.

**ಮೊಳೆರೋಗ:**

ಮಲಬದ್ಧತೆಯು ಅತಿಯಾದಾಗ ಈ ತೊಂದರೆ ಕಾಣಿಸಿಕೊಳ್ಳುವುದು ಸಾಮಾನ್ಯ.

- ಕಡೆದ ಮಜ್ಜಿಗೆ ದಿನಾ ಸೇವಿಸುವುದು ಉತ್ತಮ.
- ಹಸುವಿನ ಬಣ್ಣೆಯ ಜೊತೆ ಎಳ್ಳಿನಪುಡಿ ಸಮಾನವಾಗಿ ಬೆರೆಸಿ ದಿನಕ್ಕೆರಡು ಸಲ ಸೇವಿಸುವುದು ಉತ್ತಮ.
- ತುಂಬಾ ನೋವಿದ್ದರೆ ಉಗುರು ಬಚ್ಚಗಿನ ನೀರಿನಲ್ಲಿ ಉಪ್ಪು ಸೇರಿಸಿ 5 ನಿಮಿಷ ಕುಳಿತರೆ ವೇದನೆ ಬೇಗ ಶಮನವಾಗುತ್ತದೆ.
- ಸುವರ್ಣಗಡ್ಡೆ, ಮೂಲಂಗಿ, ಪಡುವಲಕಾಯಿ ಯಂತಹ ತರಕಾರಿಗಳನ್ನು ಆಹಾರದಲ್ಲಿ ಹೆಚ್ಚಾಗಿ ಉಪಯೋಗಿಸಿದರೆ ಮೊಳೆರೋಗ ಕಡಿಮೆಯಾಗುತ್ತದೆ.



**ವಾಂತಿ:** - ಹಾಲನ್ನು ನಿಂಬೆರಸದಿಂದ ಒಡೆದು ಅದರ ನೀರಿನಾಂಶ ಬೇರ್ಪಡಿಸಿ ಸಕ್ಕರೆಯೊಂದಿಗೆ ಕುಡಿಸಿದರೆ ಚಿಕ್ಕಮಕ್ಕಳ ವಾಂತಿಯಲ್ಲಿ ಬಹಳ ಪರಿಣಾಮಕಾರಿ ಕೆಲಸ ಮಾಡುತ್ತದೆ.


- ಅರಳು ಮತ್ತು ಸಕ್ಕರೆಯನ್ನು ನೀರಿನಲ್ಲಿ ಕುದಿಸಿ ಕುಡಿದರೆ ವಾಂತಿ ನಿಲ್ಲುತ್ತದೆ.
- ಹೆಸರು ಕಾಳನ್ನು 2 ಲೋಟ ನೀರಿನಲ್ಲಿ ಕುದಿಸಿ ಒಂದು ಲೋಟವಾದನಂತರ ಕುಡಿಯುವುದು ಉತ್ತಮ.
- ಒಂದು ಚಮಚ ನೆಲ್ಲಿಕಾಯಿರಸ ಹಾಗು 1/2 ಚಮಚ ಶ್ರೀಗಂಧದ ಪುಡಿಯನ್ನು ಬೆರೆಸಿ ದಿನಕ್ಕೆರಡು ಸಲ ಸೇವಿಸಬೇಕು.

**ಹೊಟ್ಟೆನೋವು:**

- ಜೀರಿಗೆಯನ್ನು ಹುರಿದು ಪುಡಿಮಾಡಿ ಕಡೆದ ಮಜ್ಜಿಗೆಯೊಡನೆ ಸೇವಿಸಿದರೆ ವಾತಪ್ರಕೋಪದಿಂದ ಉಂಟಾದ ಹೊಟ್ಟೆನೋವು ಕಡಿಮೆಯಾಗುತ್ತದೆ.
- 1/2 ಚಮಚ ಓಮದ ಕಾಳನ್ನು ವೀಳ್ಯದೆಲೆಯಲ್ಲಿಟ್ಟು ಚೆನ್ನಾಗಿ ಜಿಗಿದು ತಿನ್ನುವುದೂ ಉಪಯೋಗಕಾರಿ.
- ಚಿಕ್ಕ ಮಕ್ಕಳಲ್ಲಿ ಹೊಟ್ಟನೋವು ಕಾಣಿಸಿಕೊಂಡಾಗ 1 ಚಮಚ ಓಮದ ಕಾಳನ್ನು ತುಪ್ಪದಲ್ಲಿ ಹುರಿದು ಒಂದು ಲೋಟ ನೀರಿನಲ್ಲಿ ಕುದಿಸಿ 1/2 ಲೋಟಕ್ಕೆ ಇಂಗಿಸಿ ಸ್ವಲ್ಪ ಸಕ್ಕರೆ ಬೆರೆಸಿ ಕುಡಿಸಬೇಕು.

**ಅತಿಸಾರ:**

- ದಾಳಿಂಬೆ ಚಿಗುರಿನ ಚಟ್ನಿ ಅಥವಾ ದಾಳಿಂಬೆ ಚಿಗುರಿನ ಕಷಾಯವನ್ನು ಕೊಟ್ಟರೆ ಅತಿಸಾರವು ತಕ್ಷಣ ಕಡಿಮೆಯಾಗುತ್ತದೆ.



- ಬೆಳ್ಳುಳ್ಳಿಯನ್ನು ಹುರಿದು ಬಿಸಿ ಅನ್ನದ ಜೊತೆ ಸೇವಿಸುವುದು ಅಥವಾ ಮಜ್ಜಿಗೆಗೆ ಸ್ವಲ್ಪ ಸೈಂಧವ ಲವಣ ಬೆರೆಸಿ ಸೇವಿಸುವುದೂ ಉತ್ತಮ.

ಡಾ. ಶುಭಮಂಗಳ ಆಚಾರ್ಯ
Ph: 98808 31742

Go Air™ गो अेयर
It's all in the name




MEDIFIELD M

A Proprietory Ayurvedic Medicine.

Go Air™ It's all in the name गो अेयर

Each 40 mg. Capsule Contains :

Sonamukhi Leaf Extract (Cassia angustifolia) 9.00 mg
Dalchini Bark Extract (Cinnamomum Zeylanicum) 9.00 mg
Shankha Bhasma 20.00 mg
Common Salt 2.00 mg
Excepients : Di-calcium Phosphate qs
Talc qs

Dosage : 1-2 Capsules 2-3 times a day or as directed by the Physician.

Colour : Approved colours used for capsule shells.


Indications : Flatulence, Constipation, Bloating of abdomen, Ajima, Agni Mandya.

Mfg Lic. No. L-AUS-237
Manufactured by :
MEDIFIELD,
54/1, 3rd Cross, 2nd Main, Shankar Nagar, Mahalakshmi Layout, Bangalore - 560 096.
Ph. : 080-64503400

Contra Indications : Hypertension.
Store in a cool dry place.

# ಅಶ್ಮರೀ – ಯಶಸ್ವೀ ಆಯುರ್ವೇದ ಚಿಕಿತ್ಸೆ.

ಮೂತ್ರವಹ ಸ್ರೋತಸ್ಸಿನಲ್ಲಿ ಸಂಚಯ ವಾಗುವ ಹರಳಿನ ಸಮಸ್ಯೆಯು ಇಂದು ನಿನ್ನೆ ಯದಲ್ಲ. ಇದನ್ನು ಕುರಿತಂತೆ ಬಹಳಷ್ಟು ಸಂಶೋಧನೆಗಳು ಈಗಾಗಲೇ ನಡೆದಿದ್ದು,



ಇನ್ನೂ ನಡೆಯುತ್ತಲೇ ಇವೆ. ಪ್ರಪಂಚದ ಎಲ್ಲಾ ವೈದ್ಯಪದ್ಧತಿಗಳು ಈ ಸಮಸ್ಯೆಗೆ ತಮ್ಮಲ್ಲಿ ಇರುವ ಪರಿಹಾರಗಳನ್ನು ಸೂಚಿಸುತ್ತಾ ಬರುತ್ತಿವೆ. ಇಷ್ಟೆಲ್ಲಾ ವಿದ್ಯಮಾನಗಳು ಮೂತ್ರದ ಹರಳು ಅರ್ಥಾತ್ ಅಶ್ಮರೀ ರೋಗಕ್ಕೆ ನಡೆಯುತ್ತಿದ್ದಾಗ್ಯಿಯೂ, ಇಂದಿಗೂ ಈ ಸಮಸ್ಯೆಗೆ ಕರಾರುವಾಕ್ಕಾದ ವಿವರಣೆ, ಸಂಪ್ರಾಪ್ತಿ, ಪರಿಹಾರೋಪಾಯಗಳು ಕಂಡುಬರುವುದು ಆಯುರ್ವೇದ ಶಾಸ್ತ್ರದಲ್ಲಿಯೇ. ಹಾಗಾಗಿಯೇ ಇಂದಿಗೂ ಸಾಮಾನ್ಯ ಜನ ಈ ಸಮಸ್ಯೆಗೆ ಪರಿಹಾರ ಕಾಣುವಲ್ಲಿ ಒಲವು ತೋರಿಸುವುದು ಸಹ ಆಯುರ್ವೇದ ಚಿಕಿತ್ಸೆಗೆ. ವಸ್ತು ಸ್ಥಿತಿ ಹೀಗಿರುವಾಗ ಆಯುರ್ವೇದ ರೀತಿ ಅಶ್ಮರೀ ರೋಗದ ನಿದಾನ, ಸಂಪ್ರಾಪ್ತಿ, ಚಿಕಿತ್ಸೆಗಳನ್ನು ಈ ರೀತಿ ತಿಳಿಯಬಹುದಾಗಿದೆ.


ಅಶ್ಮರೀ, ಇದೊಂದು ಎಲ್ಲಾ ವಯಸ್ಸಿನವರಿಗೂ ಕಾಡುವಂತಹ ಭಯಂ ಕರರೋಗ. ಆಯುರ್ವೇದದಲ್ಲಿ ಇದನ್ನು ಘಾತುಕವಾದದ್ದು ಎಂದು ವರ್ಣಿಸಿದ್ದಾರೆ. ಯಾವ ವಸ್ತುವು ಕಲ್ಲಿನಾಕಾರದ ರಚನೆ ಉಳ್ಳದ್ದೋ ಅದನ್ನು ಅಶ್ಮರೀ ಎಂದು ಹೇಳುತ್ತಾರೆ. ಇದು ಸಾಮಾನ್ಯವಾಗಿ ಮೂತ್ರಾಶಯ, ಮೂತ್ರಪಿಂಡ, ಅಥವಾ ಮೂತ್ರನಾಳದಲ್ಲಿ ಸಿಕ್ಕಿಕೊಂಡು ಮೂತ್ರದಲ್ಲಿ ತಡೆ, ಬಿಸಿಮೂತ್ರ, ಮೂತ್ರಪಿಂಡ, ಮೂತ್ರಾಶಯದ ಸುತ್ತಾಮುತ್ತಲಿನ ಪ್ರದೇಶದಲ್ಲಿ ಅತೀವ ನೋವನ್ನು ಉಂಟುಮಾಡುತ್ತದೆ.

ಮಹಿಳೆಯರಿಗಿಂತಾ ಪುರುಷರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಈ ವ್ಯಾಧಿಯು ಇತರ ದೇಶಗಳಿಗಿಂತಾ ಭಾರತದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ವಿಶೇಷವಾಗಿ ಗುಜರಾತ, ಪಂಜಾಬ, ಹರಿಯಾಣ, ಮತ್ತು ಉತ್ತರ ಪ್ರದೇಶದಲ್ಲಿ ವರದಿಯಾಗಿದೆ. ಈ ಸ್ಥಳವನ್ನು Stone belt area –ಎಂದೇ ಕರೆಯಲಾಗಿದೆ.

### ಅಶ್ಮರಿಯನ್ನು ಉಂಟುಮಾಡುವ ಪ್ರಮುಖ ಕಾರಣಗಳು:

* ಆಯುರ್ವೇದದ ವಿಶೇಷಗಳಲ್ಲೊಂದಾದ ಪಂಚಕರ್ಮದಿಂದ ಶರೀರದ ಶೋಧನೆ ಮಾಡದೇಯಿರುವುದು.
* ಮಿಥ್ಯಾಹಾರ: ಋತುವಿಗನುಗುಣವಾಗಿ ಆಹಾರ ಸೇವಿಸದೇ ಇರುವುದು.
* ಮಿಥ್ಯಾ ವಿಹಾರ: ಋತು ವಿರುದ್ಧ ಆಚರಣೆ.
* ಬಿರು ಬಿಸಿಲಿಗೆ ಮೈಒಡ್ಡುವುದು.
* ಅತ್ಯಧಿಕ ಪರಿಶ್ರಮ.
* ಮದ್ಯ, ಚಹ, ಮತ್ತು ಸಿಹಿಪದಾರ್ಥಗಳ ಅಧಿಕ ಸೇವನೆ.
* ಹಾಲಿ, ತರಕಾರಿ, ಉಪ್ಪು ಮತ್ತು ಕ್ಷಾರೀಯ ಪದಾರ್ಥಗಳ ಕಡಿಮೆ ಸೇವನೆ.
* ಕುಪಥ್ಯ: ಕ್ರಮವಲ್ಲದ ಆಹಾರ ಸೇವನೆ.
* ಮಲ ಮೂತ್ರಾದಿಗಳ ವೇಗವನ್ನು ತಡೆಹಿಡಿಯುವುದು.

ನಿಂತಿರುವ ನೀರು ಕ್ರಿಮಿ, ಕೀಟ, ಪಾಚಿ, ಬೆಳೆಯಲು ಹೇಗೆ ಅವಕಾಶ ಮಾಡಿಕೊಡುತ್ತದೋ, ಹಾಗೇ



ಮೂತ್ರಾಶಯದಲ್ಲಿರುವ ಮೂತ್ರವು ಅಶ್ಮರಿ ಉಂಟಾಗಲು ದಾರಿ ಮಾಡಿಕೊಡುತ್ತದೆ. ಮೂತ್ರಾಶಯದಲ್ಲಿರುವ ವಾತವು ತನ್ನ ಸಮತೋಲನೆಯನ್ನು ಕಳೆದುಕೊಂಡು ಅಲ್ಲಿನ ಶುಕ್ರ ಅಥವಾ ಪಿತ್ತ ಅಥವಾ ಕಫದ ಜೊತೆಗೂಡಿ ಅದನ್ನು ಗಟ್ಟಿಗೊಳಿಸಿ, ಒಣಗಿಸಿ, ಅಶ್ಮರಿಯನ್ನುಂಟುಮಾಡುತ್ತದೆ. ಸುಶ್ರುತ ಹಾಗೂ ವಾಗ್ಭಟಾಚಾರ್ಯರು ಅಶ್ಮರಿಯನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಿದ್ದಾರೆ. ಅವೇ ವಾತಜ, ಪಿತ್ತಜ, ಕಫಜ ಹಾಗೂ ಶುಕ್ರಜ ಅಶ್ಮರಿಗಳಾಗಿವೆ. ಈ ಎಲ್ಲಾ ಪ್ರಾಕಾರದ ಅಶ್ಮರಿಗಳು ತ್ರಿದೋಷದಿಂದ ಕೂಡಿದ್ದು ವಾತ ದೋಷ ಪ್ರಧಾನವಾಗಿದೆ.

### ಅಶ್ಮರಿಯುಂಟು ಮಾಡುವ ಮೊದಲ ಲಕ್ಷಣಗಳು:

* ಮೂತ್ರಾಶಯದ ಹಿಗ್ಗುವಿಕೆ.
* ಮೂತ್ರಾಶಯದಲ್ಲಿ ಹಾಗೂ ಅದರ ಸುತ್ತಮುತ್ತ ಪ್ರದೇಶದಲ್ಲಿ ವೇದನೆ.

* ಮೂತ್ರವು ಆಡಿನ ಮೂತ್ರದ ವಾಸನೆಯುಳ್ಳದ್ದಾಗಿರುತ್ತದೆ.
* ಮೂತ್ರದ ತಡೆ.
* ಜ್ವರ.
* ಹೊಟ್ಟೆ ಹಸಿಯದೇ ಇರುವುದು.

**ಅಶ್ಮರಿವುಂಟಾದ ನಂತರದ ಲಕ್ಷಣಗಳು:**

* ಅಶ್ಮರಿ ಮೂತ್ರ ದ್ವಾರದಲ್ಲಿ ಕುಳಿತಾಗ ಮೂತ್ರದಲ್ಲಿ ತಡೆ ಅಥವಾ ಅನೇಕ ಧಾರೆಯಿಂದೊಡಗೂಡಿದ ಮೂತ್ರವನ್ನುಂಟುಮಾಡುತ್ತದೆ
* ಮೂತ್ರಾಶಯ, ಮೂತ್ರ ನಾಳ ಹಾಗೂ ಲಿಂಗದಲ್ಲಿ ವೇದನೆಯನ್ನುಂಟುಮಾಡುತ್ತದೆ.
* ಪದೇ ಪದೇ ಮಲ ಮೂತ್ರದ ವೇಗವುಂಟಾಗುವುದು.
* ಅಶ್ಮರಿಯು ಮೂತ್ರದ್ವಾರದಿಂದ ಸರಿದಾಗ ಮೂತ್ರ ತ್ಯಾಗ ಸರಾಗವಾಗುತ್ತದೆ. ಮೂತ್ರ ಸ್ವಚ್ಛ ಹಾಗೂ ರಕ್ತ ವರ್ಣದಿಂದ ಕೂಡಿದ್ದು ರೋಗಿಗೆ ಸುಖವನ್ನುಂಟು ಮಾಡುತ್ತದೆ.
* ಅಶ್ಮರಿಯಿಂದ ಮೂತ್ರಾಶಯದಲ್ಲಿ ಪೆಟ್ಟಾಗಿದ್ದರೆ ಮೂತ್ರದಲ್ಲಿ ರಕ್ತವು ಬರಲಾರಂಭಿಸುತ್ತದೆ.
* ಅಶ್ಮರಿಯು ಮೂತ್ರ ದ್ವಾರದಲ್ಲಿದ್ದಾಗ, ಒತ್ತಡದಿಂದ ಮೂತ್ರ ವಿಸರ್ಜನೆ ಮಾಡಲು ಭಯಂಕರ ವೇದನೆಯನ್ನುಂಟುಮಾಡುತ್ತದೆ.

**ಅಶ್ಮರಿಯಿಂದುಂಟಾದ ಉಪದ್ರವಗಳು:**

* ಮೂತ್ರ ವಿಸರ್ಜನೆಯಲ್ಲಿ ತಡೆಯುಂಟಾಗುವುದು.
* ಮೂತ್ರ ವಿಸರ್ಜನ ಸಮಯದಲ್ಲಿ ವೇದನೆ.
* ಶರೀರ ಕೃಶತೆ.
* ಕುಕ್ಷಿಯಲ್ಲಿ ನೋವು.
* ಆಹಾರ ಹಿಡಿಸದೇ ಇರುವುದು.
* ಬಾಯಾರಿಕೆ.
* ಪಾಂಡು, ಉಷ್ಣವಾತ, ಹೃದಯದಲ್ಲಿ ವೇದನೆ, ವಾಂತಿ.

**ಚಿಕಿತ್ಸೆ:** ಅಶ್ಮರಿಯಲ್ಲಿ ತ್ರಿದೋಷ ಶಾಮಕ ಔಷಧಿ ಹಾಗೂ ಶೋಧನಾ ಚಿಕಿತ್ಸಾ ಕ್ರಮಗಳನ್ನು ಸೂಚಿಸಿದ್ದಾರೆ. ಸ್ನೇಹಪಾನ, ಅಭ್ಯಂಗ, ಸ್ವೇದನ, ವಮನ, ವಿರೇಚನ, ಬಸ್ತಿ ಹಾಗೂ ಉತ್ತರ ಬಸ್ತಿಗಳು ಉಪಯುಕ್ತವಾಗಿದೆ. ವೀರತರ್ವಾದಿ ಕ್ವಾಥ, ಶುಂಠ್ಯಾದಿ ಕ್ವಾಥ, ಪಾಷಾಣ ಭೇದಾದಿ ಚೂರ್ಣ, ತ್ರೈವೂಷಣಾದಿ ಚೂರ್ಣ, ತ್ರಿವಿಕ್ರಮ ರಸ, ಪಾಷಾಣ ವಜ್ರರಸ, ಶ್ವೇತ ಪರ್ಪಟಿ, ಚಂದ್ರಪ್ರಭಾವಟಿ, ಗೋಕ್ಷೂರಾದಿ ಗುಗ್ಗುಳು, ಗೋಕ್ಷೂರದಿ ಅವಲೇಹ, ಹೀಗೆ ಅನೇಕ ಔಷಧಿಗಳನ್ನು ಆಯುರ್ವೇದದಲ್ಲಿ ಸೂಚಿಸಿದ್ದಾರೆ.

**ಕೆಲವು ಸುಲಭ ಔಷಧಿಗಳು:**

* ಸೌತೇಕಾಯಿ ಬೀಜ ಅಥವಾ ತೆಂಗಿನಕಾಯಿ ಹೂಗಳನ್ನು ಹಾಲಿನ ಜೊತೆಯಲ್ಲಿ ರುಬ್ಬಿಕೊಂಡು ಕುಡಿಯುವುದು.
* ಅರ್ಕ(ಬಿಳೀ ಎಕ್ಕ) ಪುಷ್ಪ ವನ್ನು ಹಾಲಿನ ಜೊತೆಯಲ್ಲಿ ರುಬ್ಬಿ ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯುವುದರಿಂದ ಎಂಥಾ ಭಯಂಕರ ಅಶ್ಮರಿಯಿದ್ದರೂ ಕರಗಿ ಹೋಗುತ್ತದೆ.
* ಅರಿಶಿನದ ಪುಡಿಯನ್ನು ಹಳೆಯ ಬೆಲ್ಲದ ಜೊತೆಗೆ ಪ್ರತಿನಿತ್ಯ ಸೇವಿಸ ಬೇಕು.
* ಗೋಕ್ಷೂರ ಬೀಜ ಚೂರ್ಣವನ್ನು ಜೇನುತುಪ್ಪದೊಡನೆ ಸೇವಿಸಿ, ಮೇಲೆ ಕುರಿಯಹಾಲನ್ನು ಕುಡಿಯುವುದು, ಹೀಗೆ ದಿವಸಕ್ಕೆ ಮೂರಾವರ್ತಿಯಂತೆ ಮಾಡಬೇಕು.
* ಶುದ್ಧ ಶಿಲಾಜಿತುವನ್ನು ಜೇನುತುಪ್ಪದೊಡನೆ ಸೇವಿಸುವುದರಿಂದ ಮೂತ್ರ ಹರಳು ಮಾತ್ರವಲ್ಲದೇ, ಮೂತ್ರ ಕೃಚ್ಛ್ರವನ್ನೂ ನಿವಾರಿಸುತ್ತದೆ.
* ಯವಕ್ಷಾರ ಹಾಗೂ ನೆಗ್ಗಿಲು ಮುಳ್ಳು(ಗೋಕ್ಷೂರ) ಇವುಗಳ ನಿಯಮಿತ ಸೇವನೆಯು ಮೂತ್ರದ ಹರಳನ್ನು ನಿವಾರಿಸುತ್ತದೆ.

**ಪಥ್ಯಾಪಥ್ಯ:**

ಪಥ್ಯ: ಕುಲತ್ಥ(ಹುರಳಿ), ಹೆಸರುಕಾಳು, ಗೋಧಿ, ಬಾರ್ಲಿ, ಹಳೇಅಕ್ಕಿ, ಕುಂಬಳಕಾಯಿ, ಶುಂಠಿ, ಯವಕ್ಷಾರ.

ಅಪಥ್ಯ: ಮೂತ್ರ ಮತ್ತು ಶುಕ್ರಾವರೋಧ, ರೂಕ್ಷ ಹಾಗೂ ಗುರು ಅನ್ನ ಭೋಜನ, ವಿರುದ್ಧಾಅಹಾರ ಸೇವನೆ.

ವೈದ್ಯವೃತ್ತಿಯಲ್ಲಿ ಮೂತ್ರದ ಹರಳಿನ ಸಮಸ್ಯೆಗಳಿಂದ ನರಳುವ ರೋಗಿಗಳು ಪರಿಹಾರಕ್ಕಾಗಿ ಬರುವುದು ಬಹು ಸಾಮಾನ್ಯ. ಆಯುರ್ವೇದದ ಈ ಮೇಲ್ಕಂಡ ಯಶಸ್ವಿ ಚಿಕಿತ್ಸೆಗಳ ಲಾಭವನ್ನು ವೈದ್ಯ ಸಮುದಾಯವು ರೋಗಿಗಳಿಗೆ ತಲುಪಿಸ ಬೇಕು. ಒಮ್ಮೊಮ್ಮೆ ಈ ಚಿಕಿತ್ಸೆಗಳ ಪ್ರಭಾವದಿಂದ ಮೂತ್ರದ ಹರಳು ಪುಡಿ ಪುಡಿಯಾಗಿ ಮೂತ್ರದೊಡನೆ ಹೊರಹೋಗುತ್ತದೆ. ಹಲವಾರು ರೋಗಿಗಳ ಚಿಕಿತ್ಸೆಯಲ್ಲಿರುವಾಗ ಮೂತ್ರದ ಹರಳುಗಳ ಚೂರುಗಳನ್ನು ವಿಸರ್ಜಿಸುವ ಮೂತ್ರದಲ್ಲಿ ಕಂಡಿರುವ ನಿದರ್ಶನಗಳೂ ಇವೆ.

**ಮಾಹಿತಿ ಸಂಗ್ರಹ, ಒಕ್ಕಣೆ, ಲೇಖನ.**
ಡಾ॥ ಅಕ್ಕಮಹಾದೇವಿ ಚೌಡಿ.
ಬಿ.ಎ.ಎಂ.ಎಸ್

**ಮಾರ್ಗದರ್ಶನ :** ಡಾ॥ ವಿ .ಆರ್. ಪದ್ಮನಾಭರಾವ್.
B.S.A.M, B.A.M.S, MD( Ay), F.I.C.A, F.R.A.S.
Ph : 26601586

# ಮೂತ್ರವಹ ಸ್ರೋತೋ ರೋಗಗಳಲ್ಲಿ ಪಥ್ಯ-ಅಪಥ್ಯ

ಡಾ॥ ಬಿ.ಸಿ. ಧೀರಜ್.

ಮೂತ್ರವು ನಮ್ಮ ಶರೀರದ ಒಂದು ಮುಖ್ಯ ಮಲವಾಹಕ. ಶರೀರದ ಕಶ್ಮಲಗಳೆಲ್ಲವೂ ಬಹುತೇಕವಾಗಿ ಮೂತ್ರದ ಮೂಲಕ ದೇಹದಿಂದ ವಿಸರ್ಜಿಸಲ್ಪಡುತ್ತದೆ. ನಮ್ಮ ದೇಹದಲ್ಲಿ ಮೂರು ಪ್ರಧಾನ ಮರ್ಮ ಸ್ಥಾನಗಳಿವೆ. ಅವುಗ ಳೆಂದರೆ, ಶಿರೋ-ಹೃದಯ-ಬಸ್ತಿ. ಬಸ್ತಿಯೆಂದರೆ ಇಲ್ಲಿ ಮೂತ್ರ ನಿರ್ಮಾಣ ಮತ್ತು ಮೂತ್ರ ಸಂವಹನಾ ಯಂತ್ರ ಎಂದು ಅರ್ಥೈಸಿ ಕೊಳ್ಳಬೇಕು. ಅಂದರೆ ವೃಕ್ಕ- ಗವಿನಿ-ಬಸ್ತಿ(ಮೂತ್ರಾಶಯ) ಮತ್ತು - ಮೂತ್ರ ಪ್ರಸೇಕ. ಇವೆಲ್ಲವೂ ಬಸ್ತಿ ಶಬ್ಧ ದಡಿಯಲ್ಲಿಯೇ ಬರುತ್ತದೆ. ಬಸ್ತಿ ಒಂದು ಪ್ರಧಾನ ರಕ್ತ ಶೋಧಕ ಕೋಷ್ಠಾಂಗ. ಇದರ ವಿಕಾರ ಸಂಭವಿಸಿದಾಗ ಸಕಲ ಅವಯವಗಳಿಗೂ ಹಾನಿಯುಂಟಾಗುತ್ತದೆ ಹಾಗೂ ಮೂತ್ರಜ ವಿಕಾರಗಳೂ ಸಹ ಉತ್ಪತ್ತಿಯಾಗುತ್ತದೆ. ಆಯುರ್ವೇದದಲ್ಲಿ 4 ಬಗೆಯ ಮೂತ್ರ ಕೃಚ್ಛ್ರ (ಮೂತ್ರ ವಿಸರ್ಜಿಸಲು ತೊಂದರೆ ಯಾಗುವುದು), 13 ಬಗೆಯ ಮೂತ್ರಾಘಾತಗಳನ್ನು (ಮೂತ್ರೋತ್ಪತ್ತಿಯಲ್ಲಿ ತೊಂದರೆಯಾಗುವುದು) ವಿವರಿಸಲಾಗಿದೆ.

ಈ ಮೂತ್ರವಿಕಾರಗಳ ಚಿಕಿತ್ಸಾ ಸೂತ್ರವು ಮೂತ್ರಲ, ದೀಪನ-ಪಾಚನ ಹಾಗೂ ಮೂತ್ರವಹ ಸ್ರೋತೋಶೋಧಕ/ ದೋಷ ಶಾಮಕ ಕರ್ಮಗಳನ್ನು ಒಳಗೊಂಡಿದೆ. ಪಂಚಕರ್ಮ ಚಿಕಿತ್ಸೆಯಲ್ಲಿ ಪ್ರಮುಖವಾಗಿ ಸ್ನಿಗ್ಧ ವಿರೇಚನ ಹಾಗೂ ಉತ್ತರ ಬಸ್ತಿಯು ಮೂತ್ರ ಸ್ರೋತೋವಿಕಾರಗಳಲ್ಲಿ ಬಹಳಾ ಉಪಯುಕ್ತ.

ಯಾವುದೇ ರೋಗದಲ್ಲಿಯಾಗಲೀ, ಔಷಧಿಯೆಷ್ಟು ಮುಖ್ಯವೋ ಅಷ್ಟೇ ಪ್ರಮುಖವಾದದ್ದು ಪಥ್ಯೋಪಚಾರ. ಎಷ್ಟೋಬಾರಿ ಕೇವಲ ಪಥ್ಯಪರಿಪಾಲನೆಯಲ್ಲಿಯೇ ರೋಗವು ಸಂಪೂರ್ಣ ನಿರ್ಮೂಲನೆಯಾಗುವ ಸಾಧ್ಯತೆಯಿದೆ.

**"ಪಥ್ಯಂ ಪಥೇ ಸತಿ ಅನೇಪೇಥಮ್ ಮನಸಾಹಿತಮ್"॥**

ದೇಹಕ್ಕೆ ಹಿತವಾದ ಆಹಾರ ವಿಹಾರಗಳು ಪಥ್ಯವೆನಿಸಿ ಕೊಳ್ಳುತ್ತವೆ. ಸಾಮಾನ್ಯ ದಿನ ನಿತ್ಯದ ಬಳಕೆಯ ವಸ್ತುಗಳಲ್ಲಿ ಮೂತ್ರವಿಕಾರದ ಪಥ್ಯಾಹಾರಗಳು

- ಹೆಚ್ಚಾಗಿ ಶೋಧಿಸಿದ ನೀರು ಕುಡಿಯುವುದು.
- ಬಾರ್ಲಿ/ ಜವೆ ಗೋಧಿಯನ್ನು ಗಂಜಿಯ ರೂಪದಲ್ಲಿ ಸೇವಿಸುವುದು.
- ಎಳನೀರಿನ ಬಳಕೆ(ದಿನಕ್ಕೆ ಎರಡರಿಂದ ಮೂರುಬಾರಿ)/ ಕಬ್ಬಿನ ರಸ ಸೇವನೆ.
- ಬಾಳೇ ಮರದ ದಿಂಡಿನರಸ ಸೇವನೆ.
- ಬೂದುಗುಂಬಳಕಾಯಿ ರಸ-ಪಲ್ಯ ಸೇವನೆ.
- ಹುರಳೀಕಾಳಿನ ಸಾರು ಅಥವಾ ಕಷಾಯ.
- ಸಿಹಿ ಮಜ್ಜಿಗೆ/ದ್ರಾಕ್ಷಾರಸ ಸೇವನೆ.
- ಕೊಮ್ಮೆಸೊಪ್ಪನ್ನು ಪಲ್ಯದ ರೀತಿ ಸೇವನೆ.

**ಮೂತ್ರದಲ್ಲಿ ರಕ್ತ ಹೋಗುತ್ತಿದ್ದರೆ:**

- ಗರಿಕೆ ರಸ/ಆಡು ಸೋಗೆ ರಸ ಸೇವನೆ.
- ಉಶೀರ/ಸಾರಿವ/ಪರ್ಪಟಕ ಕಷಾಯ ಸೇವನೆ.


**ಹಿರಿಯರ ಮೂತ್ರವಿಕಾರಗಳಲ್ಲಿ ( Prostate enlargement)**


* ಶಿಲಾಜಿತು/ಯಶದ ಭಸ್ಮ/ವರುಣ ಕಷಾಯ ಸೇವಿಸುವುದು.

**ಇದಲ್ಲದೇ ಪಥ್ಯ-ವಿಹಾರವಾಗಿ**

1) ಸಾರ್ವಜನಿಕ ಶೌಚಾಲಯ ಗಳನ್ನು ಆದಷ್ಟೂ ಪಯೋಗಿಸದೇಯಿರುವುದು. ಮಹಿಳೆಯರು ಇದನ್ನು ಪಾಲಿಸಿವುದು ಉತ್ತಮ. ಏಕೆಂದರೆ ಸ್ತ್ರೀಯರಲ್ಲಿ ಮೂತ್ರ ಪ್ರಸೇಕದ ಉದ್ದ ಬಹಳಾ ಕಮ್ಮಿಯಾದ್ದರಿಂದ ಮೂತ್ರಸ್ರೋತದ ತೊಂದರೆ ಉಂಟಾಗುತ್ತದೆ.

2) ಮೂತ್ರವೇಗ ಧಾರಣೆ(ಮೂತ್ರ ರೋಗಗಳ ಪ್ರಮುಖ ಕಾರಣ)ಮಾಡದಿರುವುದು. ಅಪಥ್ಯ ಆಹಾರಗಳಾಗಿ ಈ ಕೆಳಗಿನ ಪದಾರ್ಥಗಳನ್ನು ತ್ಯಜಿಸು/ವರ್ಜಿಸುವುದು ಒಳ್ಳೆಯದು.







ಎಲೆಕೋಸು, ಹೂಕೋಸು, ಟವೋಟೋ, ಮಸಾಲೆ ಪದಾರ್ಥಗಳು, ಅತಿಯಾದ ಉಪ್ಪು, ಕಾಫಿ, ಟೀ, ಮದ್ಯಪಾನ, ಖರ್ಜೂರ, ಬೇಲದ ಹಣ್ಣು, ಕಮಲದ ಬೇರು(ಗೆಡ್ಡೆ), ನೇರಳೆ ಇತ್ಯಾದಿ ಕಷಾಯರಸ ದ್ರವ್ಯ, ಅತಿಯಾದ ರೂಕ್ಷ ಹಾಗೂ ಶುಷ್ಕ ಆಹಾರ.

ರೋಗಗಳ ಪ್ರಾಥಮಿಕ ಅವಸ್ಥೆಯಲ್ಲಿ ಕೇವಲ ಪಥ್ಯಪಾಲನೆ ಉಪಯುಕ್ತವಾದರೂ ಕೂಡ, ರೋಗದ ಪ್ರವೃದ್ಧಾವಸ್ಥೆಯಲ್ಲಿ ಔಷಧದ ಜೊತೆಗೆ ಪಥ್ಯಪಾಲನೆ ಪ್ರಯೋಜನಕಾರಿ.

**ಡಾ॥ ಬಿ.ಸಿ. ಧೀರಜ್**
ಸಹಾಯಕ ಪ್ರಾಧ್ಯಾಪಕರು, ಶಾಲಾಕ್ಯ ತಂತ್ರ ವಿಭಾಗ.
ಎಸ್.ಡಿ.ಎಂ.ಆಯುರ್ವೇದ ಕಾಲೇಜು, ಹಾಸನ.
ದೂರವಾಣಿ- 9964242466

# ಕಿಡ್ನಿ ಫೇಲ್ಯೂರ್ - ನಿರ್ವಹಣೆ; ಚಿಕಿತ್ಸೆ.

ವೈದ್ಯ : ಜಿ.ವಿ. ವಾಸುಕಿಶಯನ್

'ವೃಕ್ಕ ವೈಫಲ್ಯ' - ಕಿಡ್ನಿ ಫೇಲ್ಯೂರ್‌ನ ಆಯುರ್ವೇದದ ಸಂವಾದಿ ಪದ. ನಾನಾ ಕಾರಣಗಳಿಂದ ವೃಕ್ಕ ವೈಫಲ್ಯವಾಗುವ ಸಂಭವವಿದ್ದರೂ ಸಹ, ಹೆಚ್ಚಾಗಿ ಕಂಡುಬರುವುದು - ಮಧುಮೇಹ ಜನ್ಯ ವೃಕ್ಕ ವೈಫಲ್ಯವೇ. ದಿನೇ ದಿನೇ ಈ ರೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಈ ಹೆಚ್ಚಳಕ್ಕೆ ಕಾರಣ - ಆಧುನಿಕ ಚಿಕಿತ್ಸಾ ಪದ್ಧತಿಯ ಚಿಕಿತ್ಸಾ ಕ್ರಮ ಹಾಗೂ ಅವರ ಔಷಧಗಳು ಎಂದು ಆಯುರ್ವೇದ ವೈದ್ಯರು ನಿರ್ಭಯವಾಗಿ ಘಂಟಾಘೋಷವಾಗಿ ಘೋಷಿಸಬಹುದು.

ಆಧುನಿಕ ವೈದ್ಯ ಪದ್ಧತಿ ಇದಕ್ಕೆ - kidney transplantation, dialysis ಹೀಗೆ ತನ್ನದೇ ಆದ ಉತ್ತರಗಳನ್ನು ಹುಡುಕಿ ಕೊಂಡಿದ್ದರೂ ಸಹ ಅವು ವಿಫಲ ಚಿಕಿತ್ಸೆಗಳು. ಜೊತೆಗೆ ಇವುಗಳಿಗೆ ಮೊರೆ ಹೊಕ್ಕ ರೋಗಿಗಳ ಸ್ಥಿತಿ ದಯನೀಯ; ಯಮಯಾತನೆ. ವೈದ್ಯಕೀಯ ಸುಭಾಷಿತದಲ್ಲಿ ಹೇಳಿರುವ ಶ್ಲೋಕವೊಂದಕ್ಕೆ ಹೇಳಿ ಮಾಡಿಸಿದಂತಹ ಸ್ಥಿತಿ ಇದಾಗಿರುತ್ತದೆ. ಶ್ಲೋಕ ಹೀಗಿದೆ-

" ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರ: ।
ಯಮೋ ಹರತಿ ಪ್ರಾಣಃ ವೈದ್ಯಃ ಹರತಿ ಪ್ರಾಣಂಚ ಧನಂಚ ॥

ಇಲ್ಲಿ ವೈದ್ಯನನ್ನು ಯಮಧರ್ಮರಾಯನ ಸಹೋದರ ಎಂದು ವರ್ಣಿಸಿ - ಈ ಇಬ್ಬರಲ್ಲಿ ಯಮನೇ ಉತ್ತಮ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಏಕೆಂದರೆ ಯಮನಾದರೊ ರೋಗಿಯ ಪ್ರಾಣವನ್ನು ಮಾತ್ರ ತೆಗೆಯುತ್ತಾನೆ. ಪ್ರಾಣ ತೆಗೆಯುವ ಸಮಯದಲ್ಲಿ ಅಷ್ಟೈಶ್ವರ್ಯಗಳು ಇದ್ದರೂ ಸಹ ಮುಟ್ಟುವುದಿಲ್ಲ. ಆದರೆ ವೈದ್ಯ ಮೊದಲು ಆ ರೋಗಿಯನ್ನು ಸಂಪೂರ್ಣವಾಗಿ ದಿವಾಳಿ ಎಬ್ಬಿಸಿ ನಂತರ ಪ್ರಾಣವನ್ನು ಸಹ ತೆಗೆಯುತ್ತಾನೆ.

Kidney transplantation ಹಾಗು Dialysis ರೋಗಿಗಳಲ್ಲಿ ಈ ಮಾತು ಸಂಪೂರ್ಣ ಸತ್ಯ. ಏಕೆಂದರೆ ಇವೆರಡಕ್ಕೂ ಲಕ್ಷಗಟ್ಟಲೆ ವೆಚ್ಚ ಬರುತ್ತದೆ. ವೆಚ್ಚದ ಜೊತೆಗೆ ರೋಗಿ ನರಳಿ ನರಳಿ ಪ್ರಾಣ ತ್ಯಜಿಸುತ್ತಾನೆ. ರೋಗಿಯ ಮನೆಯ ಸದಸ್ಯರು ಸಾಲದ ಕೂಪದಲ್ಲಿ ಬಿದ್ದಿರುತ್ತಾರೆ.

ಆಯುರ್ವೇದ ವೈದ್ಯರು ಹೆಮ್ಮೆಪಡಬೇಕಾದ ವಿಚಾರವೆಂದರೆ ಆಧುನಿಕ ಚಿಕಿತ್ಸಾ ಪದ್ಧತಿಯಲ್ಲಿ ಚಿಕಿತ್ಸೆಯೇ ಇಲ್ಲದ ಇಂತಹ ಅವಸ್ಥೆಗೆ - 'ಉತ್ತಮ ಚಿಕಿತ್ಸಾಕ್ರಮವಿರುವುದು.' " ಯಮರಾಜ



ಸಹೋದರ " ಎಂಬುದಕ್ಕೆ ಆಯುರ್ವೇದ ವೈದ್ಯ ಅಪವಾದವಾಗಿದ್ದಾನೆ.

ಸಂಪ್ರಾಪ್ತಿ: ವೃಕ್ಕ ವೈಫಲ್ಯ ಬಹಳಷ್ಟು ಹೆಚ್ಚಾಗಿ ಮಧುಮೇಹ ಜನ್ಯವಾದುದರಿಂದ ಅದೇ ಸಂಪ್ರಾಪ್ತಿ ಇದಕ್ಕೂ ಅನ್ವಯವಾಗುತ್ತದೆ. ಇನ್ನಿತರೆ ಕಾರಣಗಳಿಂದ ಉಂಟಾಗುವ ವೃಕ್ಕ ವೈಫಲ್ಯದ ಸಂಪ್ರಾಪ್ತಿಯೂ ಸಹ ಬಹುತೇಕ ಇದೇ ಸಂಪ್ರಾಪ್ತಿಗೆ ಬರುತ್ತದೆ. ಏಕೆಂದರೆ ಎರಡರಲ್ಲೂ ದುಷ್ಟಿಯುಂಟಾಗುವುದು ಮೂತ್ರವಹಾಸ್ರೋತಸ್‌ನಲ್ಲಿ. ಆದರೆ ರಕ್ತ ಹಾಗು ಮೂತ್ರಗಳಲ್ಲಿ ಸಕ್ಕರೆ ಅಂಶದ ಹೆಚ್ಚಳವಿರುವುದಲ್ಲ.

ಸಾಧ್ಯಾಸಾಧ್ಯತೆ: ಸೂಕ್ಷ್ಮವಾಗಿ ಗಮನಿಸಬೇಕಾದುದೆಂದರೆ 'ಮಧುಮೇಹ' – "ಅಸಾಧ್ಯ" ವ್ಯಾಧಿಯಾದರೆ, 'ವೃಕ್ಕವೈಫಲ್ಯ' – 'ಸಾಧ್ಯ – ಕೃಚ್ಛ್ರಸಾಧ್ಯ' ಈ ಪರಿಧಿಗೆ ಬರುತ್ತದೆ. ವೃಕ್ಕವೈಫಲ್ಯ ಕಂಡ ಕೂಡಲೆ ಆಯುರ್ವೇದ ಚಿಕಿತ್ಸೆಯನ್ನು ಪ್ರಾರಂಭಿಸಿದರೆ – 'ಸುಖ ಸಾಧ್ಯ.' ಅನೇಕಾನೇಕ ಬಾರಿ ಡಯಾಲಿಸಿಸ್ ಮಾಡಿಸಿ ನಂತರ ಬಂದವರಲ್ಲಿ – 'ಕೃಚ್ಛ್ರ ಸಾಧ್ಯ.' ರೋಗಿಯ ದೈಹಿಕ ಹಾಗು ಮಾನಸಿಕ ಸ್ಥಿತಿಯನ್ನು ಅವಲಂಬಿಸಿ ಸಹ ಸಾಧ್ಯ/ಅಸಾಧ್ಯ ನಿರ್ಧಾರವಾಗುತ್ತದೆ. ಅರಿಷ್ಟ ಲಕ್ಷಣಗಳು ಗೋಚರವಾದರೆ – ಅಸಾಧ್ಯ.

ಲಕ್ಷಣಗಳು: ಪಾಂಡು, ಕಾಮಲಾ, ರಕ್ತ ನೇತ್ರ, ಮುಖ–ಪಾದ ಶೋಫ, ರೂಕ್ಷ ತ್ವಕ್, ಪರುಷ ಕೇಶ, ನಖ ಖರತ್ವ; ವೈವರ್ಣ್ಯ, ಉಷ್ಣಕಾಮಿತ್ವ, ಸರ್ವಾಂಗ ಕಂಡೂ, ತ್ವಕ್‌ಗತ ರಕ್ತ ಸ್ರಾವ, ಪಾದ ಸುಪ್ತಿ, ಅತಿ ಚಂಚಲ ಅಧೋಬಾಹು, ಘ್ರುಷ್ಟ ವ್ರಣ, 'ಮಹಾಶ್ವಾಸ', ಹಾಗು 'ಊರ್ಧ್ವ ಶ್ವಾಸ' ಲಕ್ಷಣಗಳಾದ –ಮತ್ತಋಷಭ ರೀತಿಯ ಶ್ವಾಸ, ವಿಭ್ರಾಂತ ಲೋಚನ, ವಿವೃತಾಕ್ಷ, ವಿಭ್ರಾಂತಾಕ್ಷ, ಊರ್ಧ್ವ ದೃಷ್ಟಿ, ವಿಶೀರ್ಣ ವಾಕ್ ಹೀಗೆ ಅನೇಕ ಲಕ್ಷಣಗಳು ಕಂಡುಬರುತ್ತವೆ. ಜೊತೆಗೆ ರುಧಿರವಮದದಲ್ಲಿ ಏರಿಕೆ(ಬ್ಲಡ್ ಪ್ರೆಶರ್), ಹೃದ್ರೋಗದ ಲಕ್ಷಣಗಳೂ ಸಹ ಕಾಣಬರುತ್ತವೆ.

**ಚಿಕಿತ್ಸೆ:** ರೋಗಿಯ ಸ್ಥಿತಿ ದಯನೀಯವಾಗಿರುವುದರಿಂದ ಶೋಧನಕ್ಕೆ ಅಷ್ಟಾಗಿ ಗಮನ ನೀಡದೆ ಶಮನೌಷಧಗಳನ್ನು ನೀಡುವುದು ಸೂಕ್ತ.

**ಔಷಧಗಳು:**

**ಅ) ಚೂರ್ಣ/ ಕ್ವಾಥ ಚೂರ್ಣ:**

1. ಗೋಕ್ಷುರ. 2. ಪುನರ್ನವ. 3. ಅರ್ಜುನ. 4. ಅಶ್ವಗಂಧ.

**ಆ) ಆಸವ/ಅರಿಷ್ಟ:**

1. ಪುನರ್ನವಾಸವ. 2. ಚವಿಕಾಸವ. 3. ಅಯಸ್ಕೃತಿ. 4. ಮಧೂಕಾಸವ. 5. ದಶಮೂಲಾರಷ್ಟ

**ಇ) ಕಷಾಯಗಳು:**

1. ವರುಣಾದಿ ಕಷಾಯ. 2. ಮೂತ್ರಲ ಕಷಾಯ.

**ಈ) ಭಸ್ಮ/ ರಸೌಷಧಗಳು:**

ನಾಗಭಸ್ಮ, ವಂಗಭಸ್ಮ, ಜಸದಭಸ್ಮ, ತ್ರಿವಂಗಭಸ್ಮ, ಸ್ವರ್ಣ ರಾಜ ವಂಗೇಶ್ವರ, ರಸಸಿಂಧೂರ, ಚಂದ್ರಪ್ರಭಾವಟಿ, ಶಿಲಾಜತು, ಶಿವಗುಟಿಕಾ, ನವಾಯಸ ಲೋಹ, ಪುನರ್ನವ ಮಂಡೂರ, ಸುವರ್ಣಮಹಾ ಲಕ್ಷ್ಮೀವಿಲಾಸ ರಸ, ಬೃಹತ್ ವಾತ ಚಿಂತಾಮಣಿ, ಯೋಗೇಂದ್ರ ರಸ, ಆರೋಗ್ಯವರ್ಧಿನಿ, ವಸಂತ ಕುಸುಮಾಕರ ರಸ, ಕಾಯಕಲ್ಪವಟಿ– ಹೀಗೆ ಇನ್ನೂ ಅನೇಕ ಔಷಧಗಳು ಲಭ್ಯವಿವೆ.

**ವೈದ್ಯ : ವಾಸುಕಿಶಯನ್ ಜಿ.ವಿ.**
ದೂರವಾಣಿ : 9448891405

***MIRACLES OF HERBAL MEDICINES***

Dr. MAHAJAN & Dr. LAL have done deep study & research for 30years to achieve the Miracle formulas. With the wonder formulas thousands have benefited and leading normal life. You too can avail their valuable service in Bangalore. Consult for all sorts of Skin Diseases like **Leucoderma(White Patches), Psoriasis, Eczema, Ring worm, Pimples, Hairfall.**

**Dr. VIJAY MAHAJAN** M.D.(A'CU), MRSH LONDON
Govt. Regd Medical Practitioner
**Dr. K.J. Lal**
Govt. Regd Medical Practitioner
# 107/3, Dr. Rajkumar Road, 1st floor, Above Regal ravels Navarang Circle, Rajajinagar, Bangalore-10 Phone: 32446262 Timings: 9.00 a.m. to 7.30 p.m.

# The Six Stages of Disease

According to Ayurveda, the disease process can be summarized in a simple way. The doshas undergo increase by aggravating factors (diet, climate, seasons, life style, emotions etc). This causes weakening of the digestive fire, which in turn allows an undigested food mass (called AAMA) to arise. This, with increased dosha, blocks the channels and becomes deposited in any weakened site in the body, from which the disease then manifests.

Ayurveda explains 6 stages in the disease process according to the development and movement of the aggravated doshas

1. Accumulation (Sanchaya)
2. Aggravation (Prakopa)
3. Overflow (Prasara)
4. Relocation (Sthana Samssya)
5. Manifestation (Vyakti)
6. Diversification (Bheda)

1. Accumulation : The doshas begin to increase in their respective locales.

Vata: accumulates in colon causing distention, gas, constipation, insomnia, fear, fatigue, dryness and seeking of warmth.

Pitta: Accumulates in the small intestine producing burning sensation, fever, hyper acidity, bitter taste in the mouth, yellow colouring of urine and stool, desire for cold things and anger.

Kapha: Accumulates in the stomach resulting in lassitude, heaviness, pallor, bloating indigestion and desire for light food.

Aggravation: The doshas continue to increase in their respective sites, bringing about an increase in the symptoms manifested there.

Vata: Light headedness, increased constipation, abdominal pain or spasms, further accumulation of gas with rumbling in the bowels, along with upper abdominal distention. Pitta causes increased acidity, acid regurgitation, burning path in abdomen, excessive thirst loss of strength, difficulty sleeping.

Kapha : Causes loss of appetite, indigestion, nausea, increased salivation, heaviness in head and heart and excess sleeping.

Overflow: Doshas have now filled up their respective sites and begin to overflow into the rest of the body. They move in different directions causing various disorders and dysfunctions.

The nature and location of these complications depends upon the direction the doshas move.

They come in close contact with the tissues and waste materials of the body mixed with either of them.

Vata : Dry skin, pain or stiffness of the joints, lower back pain, convulsions, spasm, headache, dry cough, intermittent fever as well as continued abdominal pain with constipation and painful bowel movements.

Pitta Inflammatory skin diseases, conjunctivitis, gingivitis, dizziness, headache high fever, bilious vomiting as well as diarrhea with burning sensation.

Kapha : Cough, asthma, swollen glands, low grade fever, vomiting,

Swelling of joints, mucus in the stools.

Relocation : The doshas now relocate themselves in other sides in the body where they begin to cause specific diseases.

Accumulated vata moves to the bones.

Accumulated pitta move the blood

Accumulated kapha moves to the lymphatic system.

Manifestation : The doshas manifest specific symptom complexes at these particular sites. It can be identified as a disease, asthma, diabetes, arthritis etc. The disease onset is now major and treatment becomes difficult.

Diversification :

At these particular sites the doshas manifest their special characteristics. The disease can be identified according to its doshic attributes.

Vata type arthritis : Evidences severe pain, stiffness, dry skin and constipation.

Pitta type arthritis : Fever, burning sensation, Red swelling of joints and loose stool.

Kapha type : swelling, edma, phlegm and congestion.

**THE THREE DIFFERENT PATHWAYS:**

The Inner disease pathway (Antar Marga) consists of the digestive tract defined mainly in the three sections of the stomach, small intestine and large intestine. This pathway is called inner because the digestive tract forms a channel through the inside of the body. Disease here are easy to treat since it is possible to expel them from the body directly through the digestive tract. They include mainly diseases of the digestive tract. The Outer Disease pathway ( Bahya Marga) consists of the plasma(skin)and blood, the two outer or superficial tissues. Diseases here are more difficult to treat because they have already entered into the tissues, but they still have not yet deeply enough to cause really serious diseases. They include skin diseases and toxic blood conditions. The central disease pathway (Madhyama Marga) consists of the deeper tissues of muscle fat, bone, nerve and reproductive tissue. It is called the central disease pathway because it occurs between the outer pathway the skin and inner pathway, the gastro - intestinal tract. The most sensitive points and organs of the body are affected such as the head, heart, bladder and the joints of the bones.

Diseases here are deep seated and thus difficult to treat. Most severe chronic and degenerative diseases, from arthritis to cancer come from this area. The outer and central disease pathways make up the seven tissues of the body. The first two, skin and blood are the outer and next five, muscle, fat bone, marrow and reproductive fluid, the middle. Diseases are also clarified by which tissue the dosha resides in, pitta in the muscle tissue or kapha in the bones.

**Spiritual Aspects of healing :**

All disease have two primary causes according to Ayurveda, First they arise from physical or biological causes - the imbalance of the biological humors, the elements and prime energies of the physical body. The treatment consists of physical or medical methods with a naturalistic basis including herbs, diet body work and yoga postures. Second, disease arise from karmic cause -from the effects of wrong actions that we have done in this or previous lives meaning from psychological or spiritual causes. Karmic disease require some form of atonement or sacrifice, an "inner rectification". For this, Ayurveda uses yoga and a system of divine or spiritual therapy which includes the use of gems, mantras, prayers, rituals and meditation.

**Dr. Jyothi,**
Ph: 9880918603,




A Proprietary Ayurvedic Medicine.
Jodarin® जोडारिन जोडों का डॉक्टर
Each 86mg. Capsule Contains :

| | | |
|---|---|---|
| Shodhita Agni Thundi Seeds | (Strychnos Nuxvomica) | 50.00 mg |
| Ginger Extract | ( Zingiber officinale ) | 16.00 mg |
| Vacha Extract | ( Acorus calamus) | 20.00 mg |
| Excepients : Di-calcium Phosphate | | qs |
| Talc | | qs |

Dosage : 1-2 Capsules 2-3 times a day or as directed by the Physician.
Indications : Joint Pain & Painful swelling, Low Back Pain, Sandhivata.
Contra. Indications : Hypertension & Cardiac diseases.
Caution : Schedule E1 Drug.
Store in a cool dry place.

TO BE TAKEN UNDER MEDICAL SUPERVISION.
चेतावनी : वैद्यकीय निरीक्षण के अन्तरगत लिया जाय
Colour : Approved colours used for capsule shells.
Mfg Lic. No. L-AUS-237
Manufactured by :
MEDIFIELD,
54/1, 3rd Cross, 2nd Main, Shankar Nagar,
Mahalakshmi Layout, Bangalore - 560 096.
Ph. : 080-64503400

Advertisement


# Nikhil Associates - Insurance, Investment service provider

We, Nikhil Associates, Wish all readers "A Happy Healthy, Wealthy Prosperous New Year - Ugadi "This Year Ugadi, 27-3-2009 The day Twenty Seventh March 2009 is Friday (SHUKRAVARA) . Ugadi starts from Shukravara. We feel "SHUKRA" is the ADHIPATI ruling planet for this whole year. Let this Lord "SHUKRA" bless all of us with "Best of Health, plenty of wealth and prosperity, finest of prospectus and future with contempt."This year 2009 - the nine represents all the nine planets viz., "SURYA, CHANDRA, MANGALA, BUDHA, GURU, SHUKRA, SHANI, RAHU AND KETU". We all know that the future of this whole world is taken care of by these nine planets. Hence, we all pray these navagrahas to bless all of us for our peace of mind and prosperity to take care of our future from now onwards. "The Third March - 3 multiplied by the year Nine gives us the number Twenty seven - 27, Hence, whatever good deeds planning, investments etc., we do we get the result minimum of 27 times as per mathematics or arithmetic, whatever you call, and maximum of whatever you want to achieve. The name of this year (Samvastara) is "VIRODHI" nama Samvastara. As the name itself indicates let us forget enemity among ourselves. Let our enemies also become our friends and all of us work together to achieve maximum benefit for our prosperity. Virodha is a curse for human community which brings only misery and nothing else in our life. Hence let us forget and live together amicably in harmony with each other to reach our goals. We, at our Nikhil Associates, deal with best investments, life Insurance and health insurance to take care of our finance, Life Insurance (welfare of family members whether we are there or not) and Health Insurance to take care of this welfare of ourselves and all our members of the society. There are certain companies, which has got proven record of declaring the dividends up to forty percent and even in some cases it is more than that. It is true that we have to take some risk with our investments to get more dividend from some good companies, which goes a long way in our meaningful life. There are certain investments to build our future and there are also some other investments to build the future of our children. The benefits from both investment and insurance is more when we start investing from our younger age.

**Child Plan :** Life begins a fresh when you become a parent and when the child takes the first step towards you, the moment is filled with cheer, enthusiasm never felt before. This moment marks a new beginning in the child's life and there is no looking back after that. The child keeps growing and so are his/ her dreams, aspirations, which always aim to reach Horizon and you want your child to achieve his / her dreams. But at the same time as a proud parent you also want to secure their future against rising cost of education and other necessities. We understand you better and hence we offer child plan to suit you and your needs best. This plan is meant for parents having children between the age group of 0-15 years.

**Key Features :** To take care of increasing cost of education, peace of mind by giving you Triple Benefits, Loyalty Units to celebrate. Flexible plan which adopts to our changing needs as and when you want. In this plan the parent has to pay a premium only for a limited period and benefits continue for a longer time even if the parent is not around to support the child. In this plan you can pay premium for a limited period and reap benefits over a long time. We also deal with health Insurance for self and all the family members. "There are some things in Life that only a select few experience" A fair amount of control is one of them. Enjoy Income Tax benefit under Section 80C of Income Tax Act 1961. All withdrawals Maturity / Death Benefit -Tax Free Under Section 10 (10)D of Income Tax Act 1961. For Investments, Life Insurance, Child Plans and Health Insurance requirements, we are happy to provide you required guidance and assistance.

For further details, you may call Mr. N. Nagaraj on Phone No. 080-2642 0196 or at #1030, Sri Vishnu, Arogya Mandir, First 'E' Main, Babu Rajendra Prasad Road, Second Phase, Girinagar, Bangalore - 560 085.





*Service to human kind is service to God*

# SHREE NATURE CURE
## AND YOGA CENTRE

ESTD.:2000

"Arogya Mandir", # 1030, 1st 'E' Main, Girinagar 2nd Phase, Bangalore - 560 085. **Mobile : 98862 27368 / 98809 18603**

**Consultations and treatments available for all kinds of acute and chronic ailments like obesity, Allergic Condition, Skin Problems, Lumbar Spondylosis, Cervical Spondylosis, Diabetes Mellitus( Type I & Type 2) Migraine, Headaches, Joint Pains, Asthma, Acne, Menstrual disorders, infertility, Hypercholestremia, Constipation, Digestive Problems, Hypertension, Sciatica, Backache, Insomnia, Fibro Myalgia etc.**

**Treatments include Acupressure, Vibrator, Yoga Therapy, Pranayama, Meditation, Oil Massages, Diet and Nutrition Therapy, Acupuncture, Poultice and packs, Yoga Nidra, Chakra Meditation etc.**

- All Treatments and Yoga Therapy classes are on individual basis.
- 15 Days treatment packages are available for all kinds of acute and chronic ailments only on prior appointments.
- A complete treatment package touching the Annamaya, Pranamaya & Manomaya Kosha levels.
- Individual attention is the main motto.
- Weekend Package are also available for Corporates.

Consulting Physician : **Dr. Nagajyothi,** B.N.Y.S.,P.G.C.G.O.
University Gold Medalist,
Jindal Jubliee Gold Medal Awardee Specialist in Acupuncture.
VAASTU & FENG-SHUI CONSULTANT

**Timings :**
Morning : 9.30 a.m. To 1.00 p.m. Evening : 4.30 p.m. To 9.00 p.m.

# BEST INVESTMENT AND INSURANCE



# HAVE YOU PROTECTED YOUR FAMILY?


## IF 'NOT', PLEASE CALL ON US!!

**Assure Bright Future for your Child, Self and all your Family Members!!**

# Nikhil
## ASSOCIATES

**The Best Insurance, Investment Service Provider**

We deal with Life Insurance Plans, Best Investments Plans, Health Insurance Plans for you and your family.




Visit us at # 1030, Sri Vishnu, Arogya Mandir, First 'E' Main, Babu Rajendra Prasad Road, Second Phase, Girinagar, Bangalore -85.

**Ph: 2642 0196 / 99860 29489 / 90086 65906**

A Super speciality
Centre for :
Advanced Laproscopic Surgeries & Women Health Care


Dr. Punya & Dr. Nagaraj's
# GYNAEC & SURGICAL CLINIC

Complete Family Care

## Consult us for

- Pregnancy & Gynaec related problems
- High Risk pregnacies
- Advanced Gynaec Laproscopic Surgeries
- Complete infertility Care
- Advanced Hysteroscopic Surgeries
- Colposcopy






General Surgery, General Medicine, Pediatrics, Male Infertility, Proctology, Medical & Surgical Diabetology, Orthopedics, Skin & Cosmetology.

## Advanced Laparoscopic Surgeries in:

- Surgical Gastroenterology
- Urological Surgery
- Pediatric Surgery
- Cancer Surgery
- Obesity Surgery









Dr. Punyavathi C. Nagaraj
M.B.B.S., MD (OBG)
Obstetrician & Gynaecologist
Infertility & Lapro-Hysteroscopic Surgeon



Dr. Nagaraj B. Puttaswamy
M.B.B.S., MS., DNB (Gen Surg)
Laproscopic Surgeon & Surgical Gastroenterologist




@ # 464, Ist Floor, 3rd Block & Stage,
Havnur Circle, Basaveshwaranagar,
Bangalore - 560 079.

Ph : 4206 0402, 4206 0403 Telefax : 4206 0333

Be Se"cured"

# GOODBYE TO DIABETES

## RAJ.V. DIABETES CENTRE

# (78/B) 155, 19th Main, 24th Cross,
II Block, Rajajinagar, Bangalore-560010.

Mobile : 9880668379, 9663322610, PH : 080-32003492